2018 ಕ.ತೀ.ವ 1182

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ಎನ್.ಆರ್. ಭಟ್ –ವಿರುದ್ಧ– ಕರ್ನಾಟಕ ರಾಜ್ಯ, ಸಿ.ಬಿ.ಐ./ಎಸ್‌ಪಿಇ, ಬೆಂಗಳೂರು*

ದಂಡ ಪ್ರಕ್ರಿಯಾ ಸಂಹಿತೆ, 1973 ಸೆಕ್ಷನ್ 309

ದಂಡ ಪ್ರಕ್ರಿಯಾ ಸಂಹಿತೆ, 1973 ಸೆಕ್ಷನ್ 309ರ ಅಡಿಯ ವಿಚಾರಣಾ ಪೂರ್ವ ಸುನಾವಣೆ (Pre-Trial Conference). 2013ರ ಕ್ರಿಮಿನಲ್ ಕಾನೂನಿನ ತಿದ್ದುಪಡಿ ಕಾಯಿದೆಯಡಿ ಸಬ್‌ಸೆಕ್ಷನ್–1ನ್ನು ಸೇರಿಸಲಾಗಿದ್ದು ಅದರ ಅನ್ವಯ ವಿಚಾರಣಾ ಪೂರ್ವ ಸುನಾವಣೆ (Pre-Trial Conference) ಅನ್ನು ಕಡ್ಡಾಯಗೊಳಿಸಲಾಗಿದೆ ಮತ್ತು ದಿನಂಪ್ರತಿ ವಿಚಾರಣೆಯು ಸಹ ಕಡ್ಡಾಯವಾಗಿದೆ ಮತ್ತು ಪ್ರಕರಣದ ಮುಂದೂಡಿಕೆಗೆ ಸೂಕ್ತವಾದ ಕಾರಣಗಳನ್ನು ಬರಹ ರೂಪದಲ್ಲಿ ತಿಳಿಸಬೇಕಾಗುತ್ತದೆ.

ಶೀಘ್ರ ವಿಚಾರಣೆಯು ಭಾರತದ ಸಂವಿಧಾನ ಅನುಚ್ಛೇದ 21ರ ಅಡಿ ಆರೋಪಿತನ ಮೂಲಭೂತ ಹಕ್ಕಾಗಿದೆ ಅದರಲ್ಲೂ ಆರೋಪಿತನಿಗೆ ಜಾಮೀನನ್ನು ನಿರಾಕರಿಸಿದ್ದಾಗ ಅದು ಮತ್ತೂ ಕಡ್ಡಾಯವಾಗಿದೆ.

ಪ್ರಕರಣದ ಮುಂದೂಡಿಕೆಯನ್ನು ಮಾಡುವ ಸಂದರ್ಭದಲ್ಲಿ ನ್ಯಾಯಾಲಯವು ನ್ಯಾಯಸಮ್ಮತವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ, 1973 ಸೆಕ್ಷನ್ 309(2)ರ ಅಡಿ ಪ್ರಕರಣವನ್ನು ಮುಂದೂಡುವ ಸಂದರ್ಭದಲ್ಲಿ ಸೂಕ್ತವಾದ ಮತ್ತು ಬಲವಾದ ಕಾರಣಗಳು ಇದ್ದಲ್ಲಿ ಮಾತ್ರ ನೀಡಬೇಕಾಗುತ್ತದೆ. ವಿಚಾರಣಾ ಸಂದರ್ಭದಲ್ಲಿ ವಿಚಾರಣಾ ಪೂರ್ವ ಸುನಾವಣೆ

*ಕ್ರಿಮಿನಲ್ ಅಪೀಲು ಸಂ. 2191/2006, ದಿನಾಂಕ 21ನೇ ಏಪ್ರಿಲ್, 2016.

(Pre-Trial Conference) ಅನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ವಿಚಾರಣಾ ಪೂರ್ವ ಸುನಾವಣೆ (Pre-Trial Conference) ಯಲ್ಲಿ ನ್ಯಾಯಾಧೀಶರು, ಪಬ್ಲಿಕ್ ಪ್ರಾಸಿಕ್ಯೂಟರ್, ಆರೋಪಿ, ಆರೋಪಿಯ ವಕೀಲರು ಮತ್ತು ಸಂಬಂಧಪಟ್ಟ ವಿಚಾರಣಾ ಅಧಿಕಾರಿಯ ಹಾಜರಾತಿ ಕಡ್ಡಾಯವಾಗಿರುತ್ತದೆ. ಅಲ್ಲದೇ ಪ್ರಾಸಿಕ್ಯೂಶನ್ ಪರವಾಗಿ ಇರಬಹುದಾದ ಸಾಕ್ಷಿಗಳ ಹಾಜರಾತಿಯು ಅವಶ್ಯಕವಾಗಿರುತ್ತದೆ. ಅಲ್ಲದೇ ಪ್ರಾಸಿಕ್ಯೂಶನ್ ಪರವಾಗಿ ಇರಬಹುದಾದ ಸಾಕ್ಷಿಗಳ ಹಾಜರಾತಿಯು ಅವಶ್ಯಕವಾಗಿರುತ್ತದೆ. ವಿಚಾರಣಾ ಪೂರ್ವ ಸುನಾವಣೆ (Pre-Trial Conference) ಉದ್ದೇಶವು ವಿಚಾರಣೆಯನ್ನು ವಿನಾಕಾರಣ ಮುಂದೂಡಬಾರದು ಎಂದಾಗಿದೆ. ಈ ಪ್ರಕರಣದಲ್ಲಿ ವಿಚಾರಣಾ ಪೂರ್ವ ಸುನಾವಣೆ (Pre-Trial Conference)ಗೆ ಕೆಲ ನಿರ್ದೇಶನಗಳನ್ನು ನೀಡಿ ಈ ಕ್ರಿಮಿನಲ್ ಅರ್ಜಿಯನ್ನು ಮುಕ್ತಾಯಗೊಳಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* — *ಪ್ಯಾರಾಗಳಲ್ಲಿ*

1. *ಎಐಆರ್ 1962 ಎಂವೈಎಸ್.ಎಲ್.ಜೆ.53*
   *ರಾವ್‌ಜಪ್ಪ –ವಿರುದ್ಧ– ನೀಲಕಂಠ ರಾವ್ ಮತ್ತು ಇತರರು* — *(ಉಲ್ಲೇ) 16*
2. *ಎಐಆರ್ 1988 ಎಸ್‌ಸಿ 2154*
   *ಉತ್ತರಪ್ರದೇಶ ರಾಜ್ಯ –ವಿರುದ್ಧ– ಕೃಷ್ಣ ಗೋಪಾಲ್ ಮತ್ತು ಮತ್ತೊಬ್ಬರು* — *(ಉಲ್ಲೇ) 33*
3. *ಎಐಆರ್ 1979 ಎಸ್‌ಸಿ 1360*
   *ಹುಸೈನರ ಖಾಟೂನ್ –ವಿರುದ್ಧ– ಬಿಹಾರ ರಾಜ್ಯ* — *(ಉಲ್ಲೇ) 41*
4. *(2002) 4 ಎಸ್‌ಸಿಸಿ 578*
   *ಪಿ. ರಾಮಚಂದ್ರರಾವ್ –ವಿರುದ್ಧ– ಕರ್ನಾಟಕ ರಾಜ್ಯ* — *(ಉಲ್ಲೇ) 41*
5. *(2001) 4 ಎಸ್‌ಸಿಸಿ 667*
   *ಉತ್ತರಪ್ರದೇಶ ರಾಜ್ಯ –ವಿರುದ್ಧ– ಶಂಭು ನಾಥ್ ಸಿಂಗ್* — *(ಉಲ್ಲೇ) 43*

*6. (2015) 3 ಎಸ್‌ಸಿಸಿ 220*
*ವಿನೋದ್ ಕುಮಾರ್ –ವಿರುದ್ಧ– ಪಂಜಾಬ್ ರಾಜ್ಯ (ಉಲ್ಲೇ) 45*
*7. (2013) 7 ಎಸ್‌ಸಿಸಿ 108*
*ಗುರ್‌ನಾಯಿಬ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ (ಉಲ್ಲೇ) 45*
*8. (2000) 5 ಎಸ್‌ಸಿಸಿ 668*
*ಸ್ವರಣ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ (ಉಲ್ಲೇ) 46*
*9. 2013 (7) ಎಸ್‌ಸಿಸಿ 125*
*ಅಕಿಲ್ –ವಿರುದ್ಧ– ರಾಜ್ಯ (ಎನ್‌ಸಿಟಿ ಡೆಲ್ಲಿ) (ಉಲ್ಲೇ) 48*

ಅಪೀಲುದಾರರ ಪರ: ಶ್ರೀ ಪುಟ್ಟೇಗೌಡ, ವಕೀಲರ ಪರವಾಗಿ ಶ್ರೀ ಪಿ.ಎಸ್. ರಾಜಗೋಪಾಲ್, ಹಿರಿಯ ವಕೀಲರು;
ಪ್ರತ್ಯಪೀಲುದಾರರ ಪರ: ಶ್ರೀ ಹೆಗ್ಡೆ ದೇವರು ಗಣಪತಿ, ವಕೀಲರ ಪರವಾಗಿ ಶ್ರೀ ಸಿ.ಎಚ್. ಜಾಧವ್, ಹಿರಿಯ ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ:**

ಬೆಂಗಳೂರಿನ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಕಡತದಲ್ಲಿ ಇತ್ಯರ್ಥದಲ್ಲಿರುವ ವಿಶೇಷ ಸಿ.ಸಿ. 131/00ರ ಕ್ರಿಮಿನಲ್ ಪ್ರಕರಣದಲ್ಲಿನ 1ನೇ ಆಪಾದಿತನು, ದಿನಾಂಕ: 30.09.2006 ರಂದು ಅವನ ವಿರುದ್ಧ ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ಪ್ರಶ್ನಿಸಿ ದಂಡ ಪ್ರಕ್ರಿಯಾ ಸಂಹಿತೆಯ 374(2) ಪ್ರಕರಣದ ಮೇರೆಗೆ ಈ ಅಪೀಲನ್ನು ಸಲ್ಲಿಸಿದ್ದಾನೆ.

2. ಎದುರುದಾರ–ಸಿಬಿಐ, ಭಾರತೀಯ ದಂಡ ಸಂಹಿತೆಯ 120ಬಿ ಪ್ರಕರಣದೊಂದಿಗೆ ಓದಲಾದ 409, 467, 471, 477ನೇ ಪ್ರಕರಣಗಳು ಮತ್ತು

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ (ಸಂಕ್ಷಿಪ್ತತೆಗಾಗಿ ಇಲ್ಲಿ ಇನ್ನುಮುಂದೆ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 13(1)(ಡಿ) ಮತ್ತು 13(2)ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಈ ಅಪೀಲುದಾರ ಮತ್ತು ಮತ್ತೊಬ್ಬ ಆಪಾದಿತನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿತ್ತು. ಸಂಪೂರ್ಣ ಅಧಿವಿಚಾರಣೆಯನ್ನು ನಡೆಸಿದ ನಂತರ 2ನೇ ಆಪಾದಿತನನ್ನು ಖುಲಾಸೆಗೊಳಿಸಿದ್ದು, ಈ ಅಪೀಲುದಾರನನ್ನು, ಮೇಲೆ ಹೇಳಲಾದ ಅಪರಾಧಗಳಿಗಾಗಿ ಅಪರಾಧಿಯೆಂದು ನಿರ್ಣಯಿಸಲಾಗಿದೆ. ಅವನು 5 ವರ್ಷಗಳ ಅವಧಿಯವರೆಗಿನ ಕಠಿಣ ಕಾರಾವಾಸಕ್ಕೆ ಒಳಗಾಗುವ ಮತ್ತು ಭಾರತ ದಂಡ ಸಂಹಿತೆಯ 409ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕೆ 25,000/– ರೂ. ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಒಳಪಡಿಸಲಾಯಿತು ಮತ್ತು ಒಂದು ವರ್ಷದವರೆಗಿನ ಸಾದಾ ಕಾರಾವಾಸ ಮತ್ತು ಭಾರತ ದಂಡ ಸಂಹಿತೆಯ 120ಬಿ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ 5,000/– ರೂ. ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಒಳಪಡಿಸಲಾಯಿತು. ಅಷ್ಟೇ ಅಲ್ಲದೆ, ಅವನನ್ನು 2 ವರ್ಷಗಳ ಅವಧಿಯ ಸಾದಾ ಕಾರಾವಾಸ ಮತ್ತು ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ ಅಧಿನಿಯಮದ 13(1)(ಸಿ) ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ 1,000/– ರೂ. ಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೊಳಪಡಿಸಲಾಯಿತು ಮತ್ತು ಭಾರತ ದಂಡ ಸಂಹಿತೆಯ 477, 461, 477ಎ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಒಂದು ವರ್ಷದ ಕಠಿಣ ಕಾರಾವಾಸ ಮತ್ತು 1,000/– ರೂ. ಜುಲ್ಮಾನೆಯನ್ನು ಸಂದಾಯ ಮಾಡಲು ಶಿಕ್ಷೆಗೆ ಒಳಪಡಿಸಲಾಯಿತು. ಈ ಅಪೀಲಿನಲ್ಲಿ ನಿರೂಪಿಸಲಾದಂಥ ಬೇರೆ ಬೇರೆ ಆಧಾರಗಳಲ್ಲಿ ಈ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ ಎಂಬುದು ಈ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ತೀರ್ಪಾಗಿರುತ್ತದೆ.

3. ಈ ಅಪೀಲುದಾರನ ಅಪರಾಧ ನಿರ್ಣಯಕ್ಕೆ ಕಾರಣವಾಗುವ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

ಎ) ಈ ಅಪೀಲುದಾರನು, ಬೆಂಗಳೂರಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಿಂಡಿಕೇಟ್ ಬ್ಯಾಂಕ್‌ನಲ್ಲಿ 25.05.1989 ರಿಂದ 29.09.1992ರ ವರೆಗಿನ ಅವಧಿಯುಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು ಮತ್ತು 2ನೇ ಆಪಾದಿತನು ಅದೇ ಶಾಖೆಯಲ್ಲಿ ಸಾಲ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಆಗ ಸಿಬಿಐನಲ್ಲಿ ಪೊಲೀಸು ಉಪ ಅಧೀಕ್ಷಕರಾಗಿದ್ದ, ಶ್ರೀ ಡಿ.ಬಿ. ದೇಸಾಯಿಯವರು ಈ ಇಬ್ಬರು ನೌಕರರು ಮಾಡಿರುವರೆಂದು ಹೇಳಲಾದ ಕ್ರಿಮಿನಲ್ ದುರ್ಬಳಕೆಯ ಬಗ್ಗೆ ಮಾಹಿತಿಯನ್ನು ಸ್ವೀಕರಿಸಿದ್ದು, ಆರ್‌ಸಿ 11/93 ರಲ್ಲಿ ಪ್ರಕರಣವನ್ನು ದಾಖಲಿಸಿದ್ದರು.

ಬಿ) ತನಿಖೆ ನಡೆಯುತ್ತಿರುವ ಅವಧಿಯಲ್ಲಿ, 1 ಮತ್ತು 2ನೇ ಸಂಖ್ಯೆಯ ಆಪಾದಿತರು, ಬ್ಯಾಂಕು ಗ್ರಾಹಕರಿಗೆ ಸೇರಿದ ಮೊತ್ತವನ್ನು ದುರ್ಬಳಕೆ ಮಾಡಿಕೊಳ್ಳಲು ಅವರೊಳಗೆ ಒಳಸಂಚು ನಡೆಸಿದ್ದರು, ಅಲ್ಲದೆ, ಅಂಥ ಒಳಸಂಚನ್ನು ಮುಂದುವರಿಸಿದ್ದು, ಶ್ರೀ ಚಂದ್ರಶೇಖರ್, ಮೆಸರ್ಸ್ ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್ ಎಂಬ ಗ್ರಾಹಕರ ಹೆಸರಿನಲ್ಲಿ ದಿನಾಂಕ: 20.04.1991 ರಂದು ಮೋಸಮಾಡಿ 4,00,000/– ರೂ. ಗಳ ಸಾಲವನ್ನು ಪಡೆದುಕೊಂಡಿದ್ದಾರೆಂದು ವಿವರಿಸಲಾಗಿತ್ತು. ಸಾಲ ಅರ್ಜಿಯನ್ನು ಸದರಿ ಫರ್ಮಿನ ಹೆಸರಿನಲ್ಲಿ ಅಣಿಗೊಳಿಸಿದ್ದಾರೆ ಮತ್ತು 1ನೇ ಆಪಾದಿತನು ಶ್ರೀ ಚಂದ್ರಶೇಖರ, ಮೆಸರ್ಸ್ ದೀಪಮ್ ಸಿಲ್ಕ್ಸ್‌ನ ಮಾಲೀಕನ ಸಹಿಗಳನ್ನು ಹಾಕಿ ಸುಳ್ಳುಸೃಷ್ಟಿ ಮಾಡಿದ್ದಾನೆ ಮತ್ತು ಸದರಿ ಸುಳ್ಳುಸೃಷ್ಟಿ ದಾಖಲೆಗಳಿಗೆ ಪ್ರತಿಯಾಗಿ 4,00,000/– ರೂ. ಗಳನ್ನು ಸಂದಾಯಮಾಡಿರುವುದನ್ನು ಅಧಿಕೃತಗೊಳಿಸಿರುವನೆಂದು ಹೇಳಲಾಗಿದೆ. ಚಂದ್ರಶೇಖರ ರವರ ಹೆಸರಿನಲ್ಲಿ ಉಳಿದಿದ್ದ ನಿಶ್ಚಿತ ಠೇವಣಿ ರಸೀದಿಗಳನ್ನು ಭದ್ರತೆಗಾಗಿ ತೆಗೆದುಕೊಂಡಿದ್ದು, 1 ಮತ್ತು 2ನೇ ಆಪಾದಿತರು ಜಂಟಿಯಾಗಿ ಸ್ವೀಕರಿಸಿದ್ದರೆಂದು ಆಪಾದಿಸಲಾಗಿದೆ.

(ಸಿ) ಹೆಚ್ಚಿನ ಆಪಾದನೆಯೇನೆಂದರೆ, 2ನೇ ಆಪಾದಿತನು ಸಾಲವನ್ನು ಪಡೆದುಕೊಂಡ ನಂತರ ಬ್ಯಾಂಕಿನ ಪುಸ್ತಕಗಳಲ್ಲಿ ಸಾಲದ ಖಾತೆಯನ್ನು ತೆರೆದಿದ್ದು, ಫರ್ಮಿನ ಸ್ವಾಮ್ಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಸಾಲ ಬಿಡುಗಡೆಯಾಗಿದೆಯೆಂದು

ಸುಳ್ಳಾಗಿ ಪ್ರಮಾಣೀಕರಿಸಲಾಗಿದೆ ಎಂಬುದಾಗಿದೆ. ಬ್ಯಾಂಕಿನಲ್ಲಿ ಪರಿಶೀಲನೆ ನಡೆಯುವ ಅವಧಿಯಲ್ಲಿ, 1ನೇ ಆಪಾದಿತನು ಮೆಸರ್ಸ್ ದೀಪಮ್ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ನ ಚಂದ್ರಶೇಖರನನ್ನು ಸಂಪರ್ಕಿಸಿ, ತನ್ನ ಸ್ನೇಹಿತನ ಸಾಲದ ಭದ್ರತೆಯಾಗಿ ರಸೀದಿಯನ್ನು ನೀಡಲಾಗಿತ್ತೆಂಬುದನ್ನು ಸೂಚಿಸಿ ಹಿಂದಿನ ತಾರೀಖಿರುವ ಪತ್ರವನ್ನು ಪಡೆದುಕೊಂಡಿದ್ದರೆಂದು ಮತ್ತು ಸದರಿ ಠೇವಣಿಗೆ ಪ್ರತಿಯಾಗಿ ಸಾಲವು ಇನ್ನೂ ಬಾಕಿ ಉಳಿದಿದ್ದರೂ ಸಹ ಮೆಸರ್ಸ್ ದೀಪಮ್ ಸಿಲ್ಕ್ಸ್‌ನ ಹೆಸರಿನಲ್ಲಿ ದಿನಾಂಕ 22.10.1991 ರಂದು 5,73,848/– ರೂ. ಗಳಿಗೆ ವೇತನ ಆದೇಶವನ್ನು ಮೋಸದಿಂದ ಹೊರಡಿಸಲು ಕಾರಣನಾಗಿದ್ದನೆಂಬುದು ತಿಳಿದುಬಂದಿರುತ್ತದೆ. ಇನ್ನೂ ಹೆಚ್ಚಿನ ಆಪಾದನೆಯೇನೆಂದರೆ, ಠೇವಣಿಯಾಗಿಟ್ಟಿದ್ದ ವಾಯಿದೆ ತುಂಬಿದ ಮೌಲ್ಯದ ಸಂಬಂಧದಲ್ಲಿ ನೀಡಲೇಬೇಕಾಗಿದ್ದ ಸಾಲ ಮೊತ್ತವನ್ನು ವಜಾವಟ್ಟು ಮಾಡಿದ್ದು, ಇದನ್ನು ಸರಿಪಡಿಸಲು 1ನೇ ಆಪಾದಿತನು ಈ ಸಂಗತಿಗಳನ್ನು ನಿರ್ಲಕ್ಷಿಸಿದ್ದಾನೆಯೆಂಬುದಾಗಿದೆ.

ಡಿ) ಆರ್.ಸಿ. 11/93 ರಲ್ಲಿ ತನಿಖೆಯನ್ನು ಮುಗಿಸಿದ ನಂತರ ಆರೋಪಪಟ್ಟಿಯನ್ನು ಸಲ್ಲಿಸಿದ್ದು, ವಿಶೇಷ ಸಿ.ಸಿ. 131/00 ಯೆಂದು ದಾಖಲಿಸಲಾಯಿತು, ಪರಿಣಾಮವಾಗಿ ಆರೋಪಗಳನ್ನು ರೂಪಿಸಲಾಯಿತು. ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನ ಸಂಬಂಧದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಆರೋಪವು, ಮೊದಲ ಆರೋಪಪಟ್ಟಿಯನ್ನು ರೂಪಿಸಿದ 12 ತಿಂಗಳುಗಳ ಅವಧಿಯನ್ನು ಮೀರಿದ ಸಂದರ್ಭದಲ್ಲಿ ಬಂದಿದೆಯೆಂದು ಅಭಿಪ್ರಾಯಪಟ್ಟಿದ್ದು ಹೀಗಾಗಿ, ಪ್ರತ್ಯೇಕ ಆರೋಪ ಪಟ್ಟಿಯನ್ನು ಸಲ್ಲಿಸಲು ನಿರ್ದೇಶನವನ್ನು ನೀಡಲಾಗಿತ್ತು. ಹೀಗಾಗಿ ಮೇಲಿನ ಆಪಾದನೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ.

ಇ) ತನಿಖೆ ನಡೆಯುತ್ತಿರುವ ಅವಧಿಯಲ್ಲಿ, ಆಪಾದಿತ ಖೋಟಾ ದಸ್ತಾವೇಜನ್ನು ಬರವಣಿಗೆ ತಜ್ಞರ ಪರಿಶೀಲನೆಗಾಗಿ ಕಳುಹಿಸಲಾಗಿತ್ತು, ಮುಖ್ಯ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಲಾಗಿತ್ತು. ಬರವಣಿಗೆ ತಜ್ಞರ ವರದಿಯನ್ನು ಪಡೆದುಕೊಂಡ ನಂತರ ಸಮಗ್ರ ಆರೋಪಪಟ್ಟಿಯನ್ನು ಸಲ್ಲಿಸಲಾಗಿತ್ತು.

ಎಫ್) ಆಪಾದಿತನು ತನ್ನ ವಿರುದ್ಧ ಮಾಡಲಾದ ಆರೋಪಗಳಿಗೆ ತಾನು ಅಪರಾಧಿಯಲ್ಲವೆಂದು ವಾದಿಸಿದ್ದು, ಅಧಿವಿಚಾರಣೆಗೆ ಕ್ಲೇಮು ಮಾಡಿದ್ದನು. ಆರೋಪಿಯ ತಪ್ಪನ್ನು ಸ್ಥಿರಗೊಳಿಸುವ ಸಲುವಾಗಿ ಪ್ರಾಸಿಕ್ಯೂಷನ್ನು ಎಲ್ಲಾ 19 ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ 39 ನಿಶಾನೆಗಳನ್ನು ಗುರುತುಹಾಕಲಾಗಿತ್ತು. ಪಾಟೀ–ಸವಾಲು ನಡೆಯುತ್ತಿರುವ ಅವಧಿಯಲ್ಲಿ ಒಂದು ನಿಶಾನೆಯನ್ನು ಆಪಾದಿತನ ಪರವಾಗಿ ಗುರುತು ಮಾಡಲಾಗಿತ್ತು.

ಜಿ) ವಾದ–ವಿವಾದಗಳನ್ನು ಆಲಿಸಿದ ತರುವಾಯ, ಮಾನ್ಯ ವಿಶೇಷ ನ್ಯಾಯಾಧೀಶರು 2ನೇ ಆಪಾದಿತನನ್ನು ಖುಲಾಸೆಗೊಳಿಸಿದ್ದು, ತೀರ್ಪಿನ 11ನೇ ಕಂಡಿಕೆಯಲ್ಲಿ ಕಂಡುಬಂದಂತೆ ಪರಿಶೀಲನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ರೂಪಿಸುವ ಮೂಲಕ ಈ ಅಪೀಲುದಾರ – 1ನೇ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿತು:

ಪ್ರಕರಣದಲ್ಲಿ ರೂಪಿಸಲಾದ ಆರೋಪಗಳು ಮತ್ತು ಆಪಾದಿತನ ಪರವಾಗಿ ಮಂಡಿಸಲಾದ ವಾದಗಳ ಮುಂದುವರಿಕೆಯಾಗಿ, ಈ ಪ್ರಕರಣದಲ್ಲಿ ನಿರ್ಧರಣೆಗಾಗಿ ಉದ್ಭವಿಸಿದ ವಿವಾದಾಂಶಗಳು ಹೀಗಿವೆ;

1. ವಿಶೇಷ ಸಿ.ಸಿ.ಸಂ.ಸಿ.ಸಿ.ಸಂ.150/95 ರಲ್ಲಿ ನ್ಯಾಯಾಲಯವು ನಿರ್ದೇಶನವನ್ನು ನೀಡಿದ್ದ ನಂತರ ಪ್ರಕರಣದಲ್ಲಿ ಸಲ್ಲಿಸಲಾದ ಪ್ರತ್ಯೇಕ ಆರೋಪಪಟ್ಟಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಮಂಜೂರಾತಿಯನ್ನು ಪಡೆದುಕೊಳ್ಳಲಾಗಿತ್ತೇ?

2. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಪಡೆದುಕೊಂಡ ಮಂಜೂರಾತಿಯು ಕಾನೂನು ದೃಷ್ಟಿಯಿಂದ ದೋಷಪೂರ್ಣವಾಗಿದ್ದು, ಆ ಮೂಲಕ ಸಂಜ್ಞೇಯತೆಯನ್ನು ಅನುಚಿತವಾಗಿ ತೆಗೆದುಕೊಳ್ಳಲಾಗಿದೆಯೇ?

3. ಈ ಪ್ರಕರಣದಲ್ಲಿ ಮಾಡಲಾದ ತನಿಖೆಯು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ 17ನೇ ಪ್ರಕರಣದ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಕಾನೂನು ದೃಷ್ಟಿಯಲ್ಲಿ ದೋಷಪೂರ್ಣವಾಗಿದೆಯೇ?

4. ಪ್ರಾಸಿಕ್ಯೂಷನ್ನು ಯುಕ್ತ ಸಂದೇಹಗಳನ್ನು ಮೀರಿ, ಆಪಾದಿತನು, ಸುಳ್ಳುಸೃಷ್ಟಿಯ, ಅಪರಾಧ ಮಾಡಲು ಆಪರಾಧಿಕ ನಂಬಿಕೆ ದ್ರೋಹವೆಸಗುವ ಸುಳ್ಳು ಸೃಷ್ಟಿಯ ದಸ್ತಾವೇಜುಗಳನ್ನು ಬಳಸಿ, ಅಸಲಿಯಾಗಿ ಸುಳ್ಳುಲೆಕ್ಕವನ್ನು ಬರೆಯುವ ಆಪರಾಧಿಕ ಪಿತೂರಿಯನ್ನು ಮಾಡಿದ್ದು, ಆಪರಾಧಿಕ ದುರ್ನಡತೆಯ ಅಪರಾಧವನ್ನು ಮಾಡಿರುವನು ಎಂಬುದನ್ನು ರುಜುವಾತುಪಡಿಸಿದೆಯೇ?

5. ಪ್ರಾಸಿಕ್ಯೂಷನ್ನು ಯುಕ್ತ ಸಂದೇಹವನ್ನು ಮೀರಿ, ಆಪಾದಿತನು, ಅವನ ಆಪರಾಧಿಕ ಒಳಸಂಚನ್ನು ಮುಂದುವರಿಸಿ, 409ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಆಪರಾಧಿಕ ನಂಬಿಕೆ ದ್ರೋಹವೆಸಗುವ ಅಪರಾಧವನ್ನು ಎಸಗಿರುವನು ಎಂಬುದನ್ನು ರುಜುವಾತುಪಡಿಸಿದೆಯೇ?

6. ಪ್ರಾಸಿಕ್ಯೂಷನ್ನು, ಯುಕ್ತ ಸಂದೇಹವನ್ನು ಮೀರಿ, ಆಪಾದಿತನು, ಆಪರಾಧಿಕ ಒಳಸಂಚಿನ ಮುಂದುವರಿಕೆಯಾಗಿ, ಮೌಲ್ಯಯುತವಾದ ಭದ್ರತೆಗೆ ಸುಳ್ಳು ಸೃಷ್ಟಿಮಾಡುವ ಅಪರಾಧವನ್ನು ಎಸಗಿರುವನು ಎಂಬುದನ್ನು ರುಜುವಾತುಪಡಿಸಿದೆಯೇ?

7. ಪ್ರಾಸಿಕ್ಯೂಷನ್ನು, ಯುಕ್ತ ಸಂದೇಹವನ್ನು ಮೀರಿ, ಆಪಾದಿತನು, ತನ್ನ ಆಪರಾಧಿಕ ಒಳಸಂಚಿನ ಮುಂದುವರಿಕೆಯಾಗಿ, ಗ್ರಾಹಕನ ಸುಳ್ಳು ಸಹಿಯನ್ನು ಒಳಗೊಂಡಿರುವ ದಸ್ತಾವೇಜುಗಳನ್ನು ಮತ್ತು

ಇತರ ಸುಳ್ಳು ದಸ್ತಾವೇಜುಗಳನ್ನು ಅಸಲಿಯಂತೆ ಬಳಸಿರುವನು ಎಂಬುದನ್ನು ರುಜುವಾತುಪಡಿಸಿದೆಯೇ?

8. ಪ್ರಾಸಿಕ್ಯೂಷನ್ನು, ಯುಕ್ತ ಸಂದೇಹವನ್ನು ಮೀರಿ, ಆಪಾದಿತನು ಆಪರಾಧಿಕ ಒಳಸಂಚನ್ನು ಮುಂದುವರಿಸಿ, ಸಿಂಡಿಕೇಟ್ ಬ್ಯಾಂಕಿಗೆ ಮೋಸ ಮಾಡಲು ಬ್ಯಾಂಕ್‌ನ ಸುಳ್ಳು ಲೆಕ್ಕಪುಸ್ತಕಗಳನ್ನು ಬರೆಯುವ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ರುಜುವಾತುಪಡಿಸಿದೆಯೇ?

9. ಪ್ರಾಸಿಕ್ಯೂಷನ್ನು, ಯುಕ್ತ ಸಂದೇಹವನ್ನು ಮೀರಿ, ಆಪಾದಿತನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಆಪರಾಧಿಕ ದುರ್ನಡತೆಯ ಅಪರಾಧ ಎಸಗಿರುವನು ಎಂಬುದನ್ನು ರುಜುವಾತುಪಡಿಸಿದೆಯೇ?

10. ಆದೇಶ ಏನು?

4. ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ ಪಿ.ಎಸ್. ರಾಜಗೋಪಾಲ್‌ರವರು, ಸಿಬಿಐನ್ನು ಪ್ರತಿನಿಧಿಸಿರುವ ಮಾನ್ಯ ಹಿರಿಯ ವಕೀಲರಾಗಿರುವ ಶ್ರೀ ಸಿ.ಹೆಚ್. ಜಾಧವ್‌ರವರ ಸುದೀರ್ಘವಾದ ವಾದವನ್ನು ಆಲಿಸಲಾಗಿದೆ.

5. ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತು ವಾದಗಳನ್ನು ಆಲಿಸಿದ ನಂತರ ಪರಿಶೀಲನೆಗಾಗಿ ಈ ಮುಂದಿನಂತೆ ವಿವಾದಾಂಶಗಳನ್ನು ಎತ್ತಲಾಗಿದೆ:

*1. ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 409, 467, 471, 477-ಎ ಪ್ರಕರಣಗಳ ಮೇರೆಗೆ*

*ಮತ್ತು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1998ರ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಸಿ) ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಈ ಆಪಾದಿತನು, ಚಂದ್ರಶೇಖರನ ನಿಗದಿತ ಠೇವಣಿ ರಸೀದಿಯನ್ನು ಆಧರಿಸಿ, ಪಡೆದುಕೊಂಡ ಆಪಾದಿತ ಮೊತ್ತವನ್ನು ಮರೆಮಾಚುವ ಸಲುವಾಗಿ ಚಂದ್ರಶೇಖರನಿಂದ ಹಿಂದಿನ ತಾರೀಖಿನ ದಿನಾಂಕದ ಪತ್ರವನ್ನು ಪಡೆದುಕೊಂಡಿದ್ದನೆಂಬ ಆಧಾರದ ಮೇಲೆ ಅಪರಾಧ ನಿರ್ಣಯಿಸುವುದನ್ನು ಸಮರ್ಥಿಸಿದೆಯೇ?*

*2. ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಬಯಸುತ್ತದೆಯೇ? ಹಾಗಿದ್ದರೆ ಅದರ ವ್ಯಾಪ್ತಿಯೇನು?"*

**ಕಾರಣಗಳು**

6. **ವಿವಾದಾಂಶ ಸಂ.1:** ಪ್ರಾಸಿಕ್ಯೂಷನ್ನು, ವಾದವನ್ನು ಮಂಡಿಸಿರುವುದು ಈ ಮುಂದಿನಂತಿದೆ:–

1) ದಿನಾಂಕ 02.01.1991 ರಂದು ಡಾ॥ ಕೆ. ಶ್ರೀನಿವಾಸನ್‌ರವರ ಸಹಿಯನ್ನು ಸುಳ್ಳು ಸೃಷ್ಟಿ ಮಾಡಿ, ಅಪೀಲುದಾರ ಮತ್ತು ಅವನ ಸಹ–ಆಪಾದಿತನು, 3,75,000/– ರೂ.ಗಳ ಸಾಲವನ್ನು ಪಡೆದುಕೊಂಡಿರುವರು.

2) ಸದರಿ ಸಾಲವನ್ನು ಸಂದಾಯಮಾಡಲು 1991 ಏಪ್ರಿಲ್ 20 ರಂದು 5,48,500/– ರೂ. ಗಳಿಗಾಗಿ, ಮೆಸರ್ಸ್ ದೀಪಂ ಸಿಲ್ಕ್ ಇಂಟರ್‌ನ್ಯಾಷನಲ್‌ರವರು ದಿನಾಂಕ: 26.03.1991ರ ಎಫ್‌ಡಿ 3909 ಎಂದು ಸಾಲದ ಸಂಬಂಧದಲ್ಲಿ ಭದ್ರತೆಯನ್ನು ತೋರಿಸಿರುವ ಕಾಲ್ಪನಿಕ ವ್ಯಕ್ತಿ ಚಂದ್ರಶೇಖರ್‌ರವರ ಹೆಸರಿನಲ್ಲಿ 4 ಲಕ್ಷ ರೂ. ಗಳ ಸಾಲವನ್ನು ಆಪಾದಿತನು ಅಣಿಗೊಳಿಸಿದ್ದಾನೆ.

3) ಶ್ರೀ ಚಂದ್ರಶೇಖರ ಎಂಬೊಬ್ಬರ ಸಹಿಯ ಸುಳ್ಳು ಸೃಷ್ಟಿ ಮಾಡಿ, 1ನೇ ಆಪಾದಿತನು ಸಾಲವನ್ನು ಪಡೆದುಕೊಂಡಿದ್ದನು.
4) ದಿನಾಂಕ 20ನೇ ಏಪ್ರಿಲ್ 2001 ರಂದು ಪಡೆದುಕೊಂಡ 4 ಲಕ್ಷ ರೂ.ಗಳ ಸಾಲದಿಂದ, ಡಾ॥ ಶ್ರೀನಿವಾಸನ್‌ರವರ ಹೆಸರಿನಲ್ಲಿದ್ದ ಸಾಲವನ್ನು 3,88,511/– ರೂ. ಮೊತ್ತವನ್ನು ಸದರಿ ಖಾತೆಗೆ ಸಂದಾಯಮಾಡುವ ಮೂಲಕ ತೀರುವಳಿ ಮಾಡಿದ್ದು ಉಳಿದ ಮೊತ್ತವನ್ನು ಅಪೀಲುದಾರನಿಗೆ ಸಂದಾಯ ಮಾಡಲಾಗಿದ್ದು ಉಳಿದ ಮೊತ್ತವನ್ನು 1ನೇ ಆಪಾದಿತನಿಗೆ ಸಂದಾಯ ಮಾಡಲಾಗಿತ್ತು.

5) ದಿನಾಂಕ: 23.12.1991 ರಂದು, ಕೃಷ್ಣ ಭಟ್ ಟಿ., ಇವರ ಉಳಿತಾಯ ಖಾತೆ ಸಂ.14566 ರಿಂದ ತೆಗೆದ ಚೆಕ್ಕಿನ ಮೊತ್ತ 1,30,300/– ರೂ. ಗಳ ಪೈಕಿ 1,22,000/– ರೂ. ಗಳನ್ನು ಚಂದ್ರಶೇಖರ್‌ರವರ ಸಾಲಖಾತೆಗೆ ಸಂದಾಯ ಮಾಡಲಾಗಿತ್ತು, ಉಳಿದ 8,300/– ರೂ. ಗಳನ್ನು ಅಪೀಲುದಾರನಿಗೆ ಸಂದಾಯ ಮಾಡಲಾಗಿತ್ತು.

6) 4 ಚೆಕ್ಕುಗಳಿಂದ (1,80,000/– ರೂ. ಗಳಿಗೆ ಸಂಬಂಧಿಸಿದ ನಿಶಾನೆ ಪಿ9 + 20,000/– ರೂ. ಗಳಿಗೆ ಸಂಬಂಧಿಸಿದ ನಿಶಾನೆ ಪಿ10 + 1,05,000/– ರೂ.ಗಳಿಗೆ ಸಂಬಂಧಿಸಿದ ನಿಶಾನೆ ಪಿ11 + 95,000/– ರೂ. ಗಳಿಗೆ ಸಂಬಂಧಿಸಿದ ನಿಶಾನೆ ಪಿ12) ಬಂದ ಹಣದಿಂದ ದಿನಾಂಕ: 08.04.1992 ರಂದು ಚಂದ್ರಶೇಖರ್‌ರವರ ಸಾಲ ಮೊತ್ತಕ್ಕೆ 3,69,160/– ರೂ. ಗಳ ಬಾಕಿ ಉಳಿದಿದ್ದ ಮೊತ್ತವನ್ನು ಸಂದಾಯಮಾಡಲಾಗಿತ್ತು, ಹೀಗಾಗಿ ಈಶ್ವರ್ ಭಟ್ ಎಂಬುವರು ಸಹಸದಸ್ಯರಾಗಿರುವ ಮೆಸರ್ಸ್ ಕೈಗಾರಿಕಾ ಮಾರ್ಕೆಟಿಂಗ್ ಅಸೋಷಿಯೇಟ್ಸ್‌ನ ಖಾತೆಯಲ್ಲಿ ಹೊರಡಿಸಿದ ನಾಲ್ಕು ಚೆಕ್ಕುಗಳಿಂದ ಸಾಲದ ಮೊತ್ತವನ್ನು ತೀರುವಳಿ ಮಾಡಲಾಗಿತ್ತು.

7) 30,840/– ರೂ. ಗಳ ಬಾಕಿ ಮೊತ್ತವನ್ನು 1ನೇ ಆಪಾದಿತನಿಗೆ ಸಂದಾಯ ಮಾಡಲಾಗಿತ್ತು.

8) ಎಫ್‌ಡಿ ರಿಜಿಸ್ಟರ್‌ನಲ್ಲಿ ಮತ್ತು ನಿಶ್ಚಿತ ಠೇವಣಿ ರಸೀದಿಯಲ್ಲಿಯೂ ಕೂಡ ಸ್ಥಾನಹಕ್ಕನ್ನು ಗುರುತು ಮಾಡಿರಲಿಲ್ಲ.

9) ನಿಶ್ಚಿತ ಠೇವಣಿ ರಸೀದಿಯು, ಠೇವಣಿದಾರನ ಪ್ರಾರಂಭದಿಂದಲೂ ಠೇವಣಿದಾರನ ಬಳಿಯೇ ಇತ್ತು.

7. ಪ್ರಾಸಿಕ್ಯೂಷನ್‌ನ ವಾದ ಏನೆಂದರೆ, ನಿಶ್ಚಿತ ಠೇವಣಿ ರಸೀದಿಗಳನ್ನು ಹೊಂದಿದ್ದ ಬ್ಯಾಂಕಿನ ಗ್ರಾಹಕ ಡಾ॥ ಶ್ರೀನಿವಾಸನ್‌ರವರ ನಿಶ್ಚಿತ ಠೇವಣಿಗಳಿಗೆ ಸಂಬಂಧಪಟ್ಟ ಸಾಲವನ್ನು ಸಂದಾಯ ಮಾಡುವ ಸಲುವಾಗಿ ಮೆಸರ್ಸ್ ದೀಪಮ್ ಸಿಲ್ಕ್ ಇಂಟರ್‌ನ್ಯಾಷನಲ್‌ನ ಚಂದ್ರಶೇಖರನ ನಿಶ್ಚಿತ ಠೇವಣಿ ರಸೀದಿಗಳ ಆಧಾರದ ಮೇಲೆ ಮೊತ್ತವನ್ನು ಪಡೆದುಕೊಳ್ಳಲಾಗಿತ್ತು ಎಂಬುದಾಗಿದೆ. ದಿನಾಂಕ: 20.04.1991 ರಂದು ಅವನ ಸಾಲ ಖಾತೆಗೆ ಯಾರು ಮರುಸಂದಾಯ ಮಾಡಿರುವರು ಹಾಗೂ ಮರುಸಂದಾಯ ಮಾಡಲು ನಿಧಿಯ ಮೂಲ ಯಾವುದು ಹಾಗೂ ಅವನು ಸಾಲವನ್ನು ಪಡೆದುಕೊಂಡಿದ್ದನೇ ಅಥವಾ ಇಲ್ಲವೇ ಎಂಬ ಪ್ರಶ್ನೆಗೆ ಹೇಳಿಕೆ ನೀಡಬಹುದಾದ ಉತ್ತಮ ವ್ಯಕ್ತಿ ಡಾ॥ ಶ್ರೀನಿವಾಸನ್‌ರವರೇ ಆಗಿದ್ದಾರೆ. ಇದಕ್ಕೂ, ಡಾ॥ ಶ್ರೀನಿವಾಸನ್ ರವರು ಮಾತ್ರ ಸಾಕ್ಷ್ಯ ಹೇಳಬಲ್ಲವರಾಗಿದ್ದು, ಅವನನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡಿರುವುದಿಲ್ಲ. ವಾಸ್ತವವಾಗಿ, ಕ್ರಿಮಿನಲ್ ಅಪೀಲು ಸಂ.2190/200ಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯವು, ಡಾ॥ ಶ್ರೀನಿವಾಸನ್ ಸಾಲವನ್ನು ಪಡೆದುಕೊಂಡಿದ್ದು, ಸಾಲವನ್ನು ಮರುಪಾವತಿಸಿದ್ದ ನಿರ್ಣಯವನ್ನು ದಾಖಲಿಸಲಾಗಿದೆ. ಕ್ರಿಮಿನಲ್ ಅಪೀಲು ಸಂ.2190/2006 ರಲ್ಲಿ ಹೊರಡಿಸಿದ ಸವಿವರವಾದ ತೀರ್ಪಿನ ಪ್ರತಿಯನ್ನು, ಈ ನ್ಯಾಯಾಲಯವು ಪರಾಮರ್ಶೆಗೆ ಲಭ್ಯವಾಗುವಂತೆ ಮಾಡಲಾಗಿದ್ದು ಅದನ್ನು ಅವಗಾಹನೆ ಮಾಡಲಾಗಿದೆ.

8. ಪ್ರಾಸಿಕ್ಯೂಷನ್‌ನ ಆಪಾದನೆಯೇನೆಂದರೆ, ಶ್ರೀ ಟಿ. ಕೃಷ್ಣಭಟ್, ಖಾತೆ ಸಂ.14566ನ್ನು ಹೊಂದಿರುವ ಉಳಿತಾಯ ಖಾತೆಯಲ್ಲಿ ತೆಗೆದ, 1,30,300/– ರೂ. ಗಳ ಚೆಕ್ಕನ್ನು ಶ್ರೀ ಕೃಷ್ಣಭಟ್ ಟಿ., ತೆಗೆದಿದ್ದಾರೆ ಎಂಬುದಾಗಿದೆ. 1,20,000/– ರೂ. ಗಳ ಮೊತ್ತವನ್ನು ಚಂದ್ರಶೇಖರ್‌ನ ಸಾಲ ಖಾತೆಗೆ ಸಂದಾಯ ಮಾಡಿದ್ದು ಉಳಿದ 8,300/– ರೂ. ಗಳನ್ನು ಅಪೀಲುದಾರನಿಗೆ ಸಂದಾಯ ಮಾಡಲಾಗಿತ್ತು. ಈ ಸಂಬಂಧದಲ್ಲಿ, ಅವನ ಉಳಿತಾಯ ಖಾತೆಯಿಂದ ಸುಮಾರು 1,30,300/– ರೂ.ಗಳನ್ನು ತೆಗೆದಿರುವ ಬಗ್ಗೆ ಸಾಕ್ಷ್ಯ ಹೇಳಬಹುದಾದ ಏಕೈಕ ವ್ಯಕ್ತಿಯೆಂದರೆ ಕೃಷ್ಣಭಟ್‌ರವರೇ ಆಗಿದ್ದು, ಇವರನ್ನು ವಿಚಾರಣೆ ಮಾಡಿರುವುದಿಲ್ಲ. ಮುಖ್ಯ ಸಾಕ್ಷಿದಾರನಾದ ಕೃಷ್ಣಭಟ್‌ನ ವಿಚಾರಣೆ ಮಾಡದಿರುವುದು, ಸಾಕ್ಷ್ಯ ಅಧಿನಿಯಮದ 114(ಜಿ) ಪ್ರಕರಣದ ಸಂಬಂಧದಲ್ಲಿ ವ್ಯತಿರಿಕ್ತ ಅನುಮಾನ ಬರಲು ನ್ಯಾಯಾಲಯಕ್ಕೆ ಬಲಸಿಗುತ್ತದೆ.

9. ದಿನಾಂಕ 23.12.1991ರ ವಹಿವಾಟನ್ನು ರುಜುವಾತುಪಡಿಸಲು ಶ್ರೀಮತಿ ಅಮೃತ ಕಲಾರನ್ನು ಪ್ರಾ.ಸಾ.–18 ಎಂದು ವಿಚಾರಣೆ ಮಾಡಲಾಗಿದ್ದು, ಇವಳು ಯಾವುದೇ ರೀತಿಯಲ್ಲಿ ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿಲ್ಲ. ವಾಸ್ತವವಾಗಿ ಇವಳನ್ನು ಪ್ರತಿಕೂಲವೆಂದು ಘೋಷಿಸಲಾಗಿದೆ.

10. ಬೆಂಗಳೂರಿನ ಸಿಂಡಿಕೇಟ್ ಬ್ಯಾಂಕ್‌ನ ವಿಚಕ್ಷಣಾ ಇಲಾಖೆಯಲ್ಲಿ, ವಿಚಕ್ಷಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಎಸ್. ಶಿವರಾಮನ್‌ನನ್ನು ಪ್ರಾಸಾ–13 ಎಂದು ವಿಚಾರಣೆ ಮಾಡಲಾಗಿದ್ದು, ಅವನ ಹೇಳಿಕೆಯನ್ನು ಸಿಬಿಐ ದಾಖಲಿಸಿರುವುದರ ಆಧಾರದ ಮೇಲೆ ತನಿಖೆಯನ್ನು ನಡೆಸಲಾಗಿದೆ. ನಂಬಲರ್ಹ ಮಾಹಿತಿಯನ್ನು ಸ್ವೀಕರಿಸಿದ ನಂತರ, ಮೊದಲ ಮಾಹಿತಿ ವರದಿಯನ್ನು ನೋಂದಾಯಿಸಲಾಗಿತ್ತು ಎಂದು ತಿಳಿಸಿದ್ದರೂ ಕೂಡ, ವಾಸ್ತವವಾಗಿ, ಶಿವರಾಮನು ಸಲ್ಲಿಸಿದ ವರದಿಯು ಮೂಲವಾಗಿತ್ತು. ಅವನು ತನ್ನ ಸಾಕ್ಷ್ಯದಲ್ಲಿ, ತಾನು 1992ರ ವರ್ಷದಲ್ಲಿ ತನಿಖೆಯನ್ನು ನಡೆಸಿದ್ದು ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿಗೆ ಸವಿವರವಾದ ವರದಿಯನ್ನು ಸಲ್ಲಿಸಿರುವುದನ್ನು ಒಪ್ಪಿಕೊಂಡಿದ್ದಾನೆ. ಅವನು ಅಂತರ್ ತನಿಖೆಯ ಅವಧಿಯಲ್ಲಿ, ತಾನು ಆಂತರಿಕ ತಪಾಸಣಾಧಿಕಾರಿಯವರು ತಪಾಸಣೆಯನ್ನು ನಡೆಸುತ್ತಿದ್ದು ವರದಿಯನ್ನು

ಸಲ್ಲಿಸಿದ್ದುದನ್ನು ನೋಡಿದ್ದೆನೆಂದು ಹೆಚ್ಚಿನ ಹೇಳಿಕೆ ನೀಡಿದ್ದಾನೆ. ವರದಿಯು, ಪ್ರಶ್ನಿತ ಸಾಲಕ್ಕೆ ಸಂಬಂಧಿಸಿದ ಮೊದಲಿನ ಯಾವುದೇ ಕ್ರಮದೋಷಗಳ ನಿರ್ಣಯಗಳನ್ನು ಮರೆಮಾಚಲಾಗಿದೆಯೆಂಬುದನ್ನು ಬಹಿರಂಗಪಡಿಸುತ್ತದೆ.

11. ಪ್ರಾಸಾ 8 ಮತ್ತು ಇತರ ಸಾಕ್ಷಿದಾರರು, ನಿಶ್ಚಿತ ಠೇವಣಿ ರಸೀದಿ ಮತ್ತು ಇತರ ಬ್ಯಾಂಕಿಂಗ್ ವ್ಯವಹಾರಗಳ ಆಧಾರದ ಮೇಲೆ ಸಾಲಗಳನ್ನು ಎತ್ತುವ ಸಂಬಂಧದಲ್ಲಿ ಅನುಸರಿಸಬೇಕಾದ ಸುತ್ತೋಲೆಗಳು ಮತ್ತು ಕೈಪಿಡಿಗಳಿದ್ದವೆಂದು ತಿಳಿಸಿದ್ದಾರೆ. ಅಂಥ ದಸ್ತಾವೇಜುಗಳನ್ನು ತಡೆಹಿಡಿಯಲಾಗಿದೆ. ಅವುಗಳನ್ನು ಹಾಜರುಪಡಿಸಿದರೆ, ಅದರಲ್ಲಿ ನಿಯಮಿಸಲಾದ ಪ್ರಕ್ರಿಯೆಯನ್ನು, ಅಳವಡಿಸಿಕೊಳ್ಳಲಾದ ವಾಸ್ತವಿಕ ಪ್ರಕ್ರಿಯೆಗಳೊಂದಿಗೆ ಹೋಲಿಕೆ ಮಾಡಬಹುದಾಗಿದ್ದು, ಆ ಸಲುವಾಗಿ ಅಂಥ ಮಾರ್ಗಾಂತರದ ಉದ್ದೇಶಗಳೇನಾದರೂ ಇದ್ದರೆ ಅವುಗಳನ್ನು ತಿಳಿದುಕೊಳ್ಳುವುದು.

12. ಪ್ರಾಥಮಿಕ ತನಿಖೆಯನ್ನು ನಡೆಸಿರುವ ಪ್ರಾಸಾ–13, ಶಿವರಾಮನ್‌ರವರು, ತಾನು ನಡೆಸಿದ ವಿಚಾರಣೆಗೆ ಸಂಬಂಧಪಟ್ಟಂತೆ ಸವಿವರವಾದ ವರದಿಯನ್ನು ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿಗೆ ಸಲ್ಲಿಸಿದ್ದು ಅದು ಲಭ್ಯವಾಗಿಲ್ಲದಿರುವುದಾಗಿ ತಿಳಿಸಿದ್ದಾರೆ. ಮತ್ತೊಂದು ಕಡೆ, ಸದರಿ ವರದಿಯನ್ನು ನಾಶಪಡಿಸಲಾಗಿತ್ತು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಒಪ್ಪಿಕೊಂಡಿರುವ ಹಾಗೆ ಶಿವರಾಮನ್‌ನು ಒದಗಿಸಿರುವನೆಂದು ಹೇಳಲಾಗಿರುವ ವರದಿಯು 1 ಮತ್ತು 2ನೇ ಸಂಖ್ಯೆಯ ಆಪಾದಿತರ ವಿರುದ್ಧ ನೋಂದಾಯಿಸಲಾದ ಕ್ರಿಮಿನಲ್ ಪ್ರಕರಣವೊಂದಕ್ಕೆ ಸಂಬಂಧಪಟ್ಟಿದುದಾಗಿದ್ದು ಅದನ್ನು ನಾಶಪಡಿಸಲಾಗುವುದಿಲ್ಲ. ಕ್ರಿಮಿನಲ್ ಅಪೀಲು ಸಂ. 2190/2006 ರಲ್ಲಿ ಹೊರಡಿಸಿದ ಸಂಬಂಧಪಟ್ಟ ತೀರ್ಪಿನಲ್ಲಿ, ನಿಶಾನೆ ಡಿ–4, ದಾಖಲೆಗಳ ನಿರ್ವಹಣೆ ಮತ್ತು ರಕ್ಷಣೆ ಕುರಿತ ಮಾರ್ಗಸೂಚಿಯಾಗಿದೆ.

13. ಶಿವರಾಮನ್‌ರವರು ಸಿದ್ಧಪಡಿಸಿರುವರೆಂದು ಹೇಳಲಾಗಿರುವ, 1 ಮತ್ತು 2ನೇ ಆಪಾದಿತನ ಪಾತ್ರವನ್ನು ಸಂದೇಹಿಸುವ ಬ್ಯಾಂಕಿಗೆ ಆಧಾರವಾಗಿರುವ ವರದಿಯನ್ನು

ಸಲ್ಲಿಸದಿರುವುದರ ಹಿನ್ನೆಲೆಯಲ್ಲಿ, ಶಿವರಾಮನ್‌ರವರ ಸಾಕ್ಷ್ಯದಲ್ಲಿ ಹೆಚ್ಚಿನ ನಂಬಿಕೆಯನ್ನು ಇಡಲಾಗುವುದಿಲ್ಲ. ಮತ್ತೊಂದು ಕಡೆ, ತನಿಖಾಧಿಕಾರಿಗೆ ಶಿವರಾಮನ್‌ರವರು ಸಲ್ಲಿಸಿದ ಅತ್ಯಂತ ಪ್ರಮುಖ ವರದಿಯನ್ನು ಭಾರತ ಸಾಕ್ಷ್ಯಅಧಿನಿಯಮದ 114(ಜಿ) ಪ್ರಕರಣದ ಮೇರೆಗೆ ಹಾಜರುಪಡಿಸದಿರುವುದನ್ನು ವ್ಯತಿರಿಕ್ತ ಅನುಮಾನಕ್ಕೆ ಈಡುಮಾಡಬೇಕಾಗುತ್ತದೆ. ಆ ವರದಿಯನ್ನು ಅವನು ಪ್ರಮಾಣೀಕರಿಸಿದ ದಸ್ತಾವೇಜುಗಳಿಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಮತ್ತು ಶಾಖೆಯ ಸಿಬ್ಬಂದಿಯು ಅವನಿಗೆ ನೀಡಿದ ವಿವರಣೆಗಳು ಅಥವಾ ಮಾಹಿತಿಯನ್ನು ಒಳಗೊಂಡಿರಲೇಬೇಕು.

14. ಶ್ರೀ ಅಮರ್‌ಸಿಂಗ್‌ನನ್ನು ಪ್ರಾಸಾ–15 ಎಂದು ವಿಚಾರಣೆ ಮಾಡಲಾಗಿದೆ. ಇವನು ಕೇಂದ್ರ ಸರ್ಕಾರಿ ಬರವಣಿಗೆ ತಜ್ಞನಾಗಿದ್ದನು. ಮತ್ತೊಂದು ಪ್ರಶ್ನಿತ ದಸ್ತಾವೇಜಿನ ಪರಿಶೀಲಕ ಶ್ರೀ ಡಿ.ಡಿ. ಗೋಯಲ್, ಕಾರಣಗಳು ಮತ್ತು ಅಭಿಪ್ರಾಯವನ್ನು ನೀಡಿದ್ದು ಅದನ್ನೂ ದಾಖಲೆಯಲ್ಲಿ ತಂದಿರುವುದಿಲ್ಲ. ಈ ದಸ್ತಾವೇಜೀಯ ಸಾಕ್ಷ್ಯವನ್ನು ನೀಡಿಲ್ಲ. ಮಾದರಿ ಬರವಣಿಗೆಗಳು, ಪ್ರಶ್ನಿತ ಬರವಣಿಗೆಗಳನ್ನು ಪ್ರಸ್ತುತ ಪ್ರಕರಣದಲ್ಲಿ ದಾಖಲೆಯಲ್ಲಿ ತಂದಿರುವುದಿಲ್ಲ. ಯಾವ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು ಅಪೀಲುದಾರನನ್ನು ಅಪರಾಧಿಯೆಂದು ನಿರ್ಣಯಿಸಿದೆಯೋ ಅದು ಸಾಕ್ಷ್ಯವಾಗುವುದಿಲ್ಲ. ವಾಸ್ತವವಾಗಿ, ಸಂಬಂಧಪಟ್ಟ ಪ್ರಕರಣದಲ್ಲಿ ವರದಿಯನ್ನು ಸಲ್ಲಿಸಲಾಗಿದ್ದು, ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿಯಾಗಿ ದಾಖಲೆಯಲ್ಲಿ ತಂದಿರುವುದಿಲ್ಲ.

15. ಶ್ರೀ ಅಮರ್‌ಸಿಂಗ್, ಬರವಣಿಗೆ ತಜ್ಞನು, ನಿಶಾನೆ ಪಿ–50ರ ಬಗ್ಗೆ ಅದರಲ್ಲಿ ಕಂಡುಬರುವ ಬರವಣಿಗೆ ಮತ್ತು ಸಹಿಗಳಿಗೆ ಸಂಬಂಧಿಸಿದಂತೆ ಏನನ್ನೂ ಮಾತಾಡಿರುವುದಿಲ್ಲ. ಇದು ವಸ್ತುಸ್ಥಿತಿಯಾಗಿದ್ದು, ಮಾನ್ಯ ನ್ಯಾಯಾಧೀಶರು, ಈ ಪ್ರಕರಣದಲ್ಲಿ ಎಂದರೆ ಡಾ॥ ಕೆ. ಶ್ರೀನಿವಾಸನ್‌ರವರ ಸಾಲದ ಪ್ರಕರಣದ ಸಂಬಂಧದಲ್ಲಿ ರುಜುವಾತು ದಸ್ತಾವೇಜು ಎಂದು ಪರಿಗಣಿಸಲಾಗಿಲ್ಲ. ಅಧಿವಿಚಾರಣಾ ನ್ಯಾಯಾಲಯವು, ಬರವಣಿಗೆ ತಜ್ಞರ ಸಾಕ್ಷ್ಯವು ನಂಬಿಕಾರ್ಹವಲ್ಲವೆಂದು ಅಭಿಪ್ರಾಯಪಟ್ಟು, ಅಪೀಲು ಸಂ. 2190/2006 ಸಿಡಬ್ಲ್ಯೂ 2185/2006 ರಲ್ಲಿ

ಒಬ್ಬ ಗ್ರಾಹಕ ಡಾ॥ ಶ್ರೀನಿವಾಸನ್‌ರವರ ನಿಶ್ಚಿತ ಠೇವಣಿ ಮೇಲೆ ಪಡೆದ ಸಾಲಕ್ಕೆ ಸಂಬಂಧಿಸಿದಂತೆ ಈ ಆಪಾದಿತನನ್ನು ಖುಲಾಸೆಗೊಳಿಸಿದರೆ, ಅಧಿವಿಚಾರಣಾ ನ್ಯಾಯಾಲಯವು ಈ ವಿಷಯಕ್ಕೆ ಹೆಚ್ಚಿನ ಒತ್ತು ನೀಡಲು ಸಾಧ್ಯವಿಲ್ಲ.

16. ***ರಾವ್‌ಜಪ್ಪ –ವಿರುದ್ಧ– ನೀಲಕಂಠ ರಾವ್ ಮತ್ತು ಇತರರು***[1] ಪ್ರಕರಣದಲ್ಲಿ ವಿಭಾಗೀಯ ಪೀಠವು ನೀಡಿದ ನಿರ್ಣಯವನ್ನು ಉಲ್ಲೇಖಿಸುವುದು ಉಪಯುಕ್ತವಾಗಿದ್ದು, ಇದರಲ್ಲಿ ಬರವಣಿಗೆ ತಜ್ಞರ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಾಗ ಗಮನಕ್ಕೆ ಬಂದ ಅಸಾದೃಶ್ಯಗಳೂ ಕೂಡ ಪ್ರಮುಖವೆಂದು ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿದೆ. ತೀರ್ಪಿನ 23ನೇ ಕಂಡಿಕೆಯು ಇದಕ್ಕೆ ತುಂಬಾ ಸಂಬಂಧಪಡುತ್ತಿದ್ದು ಈ ಕೆಳಗೆ ಇದನ್ನು ಮರುಹಾಜರುಪಡಿಸಲಾಗಿದೆ:

> 'ವಿವಾದಿತ ದಸ್ತಾವೇಜನ್ನು ಪರಿಶೀಲಿಸುವಲ್ಲಿ, ಖೋಟಾ ದಸ್ತಾವೇಜುಗಳು ಸಾಮಾನ್ಯವಾಗಿ ನೈಜ ದಸ್ತಾವೇಜುಗಳ ಅನುಕರಣೆಗಳಾಗಿರುವುದರಿಂದ ನೈಜ ದಸ್ತಾವೇಜುಗಳೊಂದಿಗೆ ಹೋಲಿಸಿ ನೋಡುವಾಗ, ಗಮನಿಸಲಾದ ಸಾಮ್ಯತೆಗಳನ್ನು ನೋಡುವುದು ನಿಜವಾದ ಪರೀಕ್ಷೆಯಲ್ಲ, ಆದರೆ, ಅಸಾಮ್ಯತೆಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಗಮನಿಸಬೇಕು. ಈ ವ್ಯತ್ಯಾಸಗಳು, ಪ್ರಶ್ನಿತ ದಸ್ತಾವೇಜಿನ ನಿಜವಾದ ಗುಣಲಕ್ಷಣವನ್ನು ಪ್ರಕಟಪಡಿಸುತ್ತವೆ.'

ಬರವಣಿಗೆ ತಜ್ಞರ ಅಭಿಪ್ರಾಯವು, ತಜ್ಞ ಸಾಕ್ಷ್ಯದ ಶ್ರೇಣೀಕರಣದಲ್ಲಿ ತಳ ಭಾಗದಲ್ಲಿ ನಿಲ್ಲುತ್ತದೆ. ಇದು ಪುಷ್ಠೀಕರಿಸುವ ಸಾಕ್ಷ್ಯವಷ್ಟೇ ಆಗಿದೆ, ಹೀಗಾಗಿ ಇದನ್ನು ಇತರ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಹಿನ್ನೆಲೆಯಲ್ಲಿ ನಿರ್ಧರಿಸಬೇಕಾಗುತ್ತದೆ.

1. ಎಐಆರ್ 1962 ಎಂಪೈಎಸ್.ಎಲ್.ಜೆ.53

17. ಶ್ರೀಮತಿ ಶಶಿರೇಖಾ ಮೂರ್ತಿಯವರನ್ನು ಪ್ರಾಸಾ–1 ಎಂದು ವಿಚಾರಣೆ ಮಾಡಲಾಗಿದ್ದು, ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಗುಮಾಸ್ತೆಯಾಗಿದ್ದು, ಇವರು, ನಿಶ್ಚಿತ ಠೇವಣಿ ಸಂ.4268ಕ್ಕೆ ಸಂಬಂಧಪಟ್ಟ ನಿಶ್ಚಿತ ಠೇವಣಿ ಲೆಡ್ಜರನ್ನು ಬರೆದಿದ್ದು, ಯಾವ ಸಾಲವನ್ನು ಮಂಜೂರು ಮಾಡಲಾಗಿದೆಯೋ ಆ ಸಾಲದ ನಿಶ್ಚಿತ ಠೇವಣಿಯ ನವೀಕರಣವನ್ನು ಮಾಡಿದ್ದಾರೆ. ಎಫ್‌ಡಿ ಲೆಡ್ಜರ್‌ನಲ್ಲಿ, ನಿಶಾನೆ ಪಿ–1ಕ್ಕೆ ಸಂಬಂಧಿಸಿದ ಧಾರಣಾಧಿಕಾರವನ್ನು ಗುರುತುಮಾಡಿಲ್ಲವೆಂಬುದನ್ನು ರುಜುವಾತುಪಡಿಸಲು ಅವಳನ್ನು ವಿಚಾರಣೆ ಮಾಡಲಾಗಿದೆ. ನಿಶ್ಚಿತ ಠೇವಣಿ ಲೆಡ್ಜರ್ ಉದ್ಧೃತ ಭಾಗವು ನಿಶ್ಚಿತ ಠೇವಣಿ ಸಂ.4268 ಆಗಿದೆ ಎಂಬುದಕ್ಕೆ ಸಂಬಂಧಪಟ್ಟಿದ್ದು, ನವೀಕರಿಸುವ ಮೊದಲು ನಿಶ್ಚಿತ ಠೇವಣಿ 3909 ಆಗಿತ್ತು ಎಂಬುದಕ್ಕೆ ಸಂಬಂಧಪಡುತ್ತದೆ. ಪಾಟೀ–ಸವಾಲಿನಲ್ಲಿ ಅವಳು, ನಿಶಾನೆ ಪಿ–1ರಲ್ಲಿ ಸೂಚಿಸಲಾದ ಎಫ್‌ಡಿ 4268, ಎಫ್‌ಡಿ ಸಂ.3909ಕ್ಕೆ ಸಂಬಂಧಪಟ್ಟ ನವೀಕರಣ ರಸೀದಿಯಾಗಿದೆಯೆಂದು ಒಪ್ಪಿಕೊಂಡಿದ್ದಾಳೆ. ತದನಂತರದ ಎಫ್‌ಡಿ ಸಂ.3909 ಅವಳಿಗೆ ಮುಖಾಮುಖಿಯಾಗಿದ್ದು ಅದನ್ನು ನಿಶಾನೆ ಡಿ1 ಎಂದು ಗುರುತುಮಾಡಲಾಗಿದೆ. ನಂತರ, ಪ್ರಾಸಾ–1, ಇವರು, ಧಾರಣಾಧಿಕಾರ ಗುರುತುಮಾಡಿರುವ ಅಂಕಣದಲ್ಲಿ ನಿಶಾನೆ ಡಿ1ನ್ನು, ವೈಟ್ನರ್ ಹಾಕುವ ಮೂಲಕ ಅಳಿಸಲಾಗಿದ್ದು, ಅಳಿಸಲಾದ ಭಾಗವನ್ನು ನಿಶಾನೆ ಡಿ1(ಎ) ಎಂದು ಗುರುತುಮಾಡಲಾಗಿದೆಯೆಂದು ಒಪ್ಪಿಕೊಂಡಿದ್ದಾರೆ. ಮೊತ್ತವನ್ನು, ಮೆಸರ್ಸ್ ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ಗೆ ಜಮೆ ಆಗಿಲ್ಲವೆಂಬುದನ್ನು ಸೂಚಿಸಲು ಯಾರಿಂದಲೂ ಯಾವುದೇ ದೂರನ್ನು ಸ್ವೀಕರಿಸಿರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ.

18. ಶ್ರೀ ಚಂದ್ರಶೇಖರ್, ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ನ ವ್ಯವಸ್ಥಾಪಕ ಪಾಲುದಾರರಾಗಿದ್ದರು. ಅವರ ಮೂಲಕ ಎಫ್‌ಡಿ ರಸೀದಿ 3909ನ್ನು ನಿಶಾನೆ ಪಿ.3 ಎಂದು ಗುರುತುಮಾಡಲಾಗಿದೆ. ಅವನು ನಿಶಾನೆ ಪಿ.3ರ ಹಿಂಭಾಗದಲ್ಲಿರುವ ತನ್ನ ಸಹಿಯನ್ನು ಒಪ್ಪಿಕೊಂಡಿದ್ದಾನೆ. ಅವನು, ಯಾವುದೇ ಸಂದರ್ಭದಲ್ಲಿ, ಮೆಸರ್ಸ್ ದೀಪಮ್ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ನ ಒಡೆತನ ಫರ್ಮ್ ಅಲ್ಲವೆಂದು ಸಾಕ್ಷ್ಯ ಹೇಳಿದ್ದಾನೆ. ಇಲ್ಲಿ 1ನೇ ಸಂಖ್ಯೆಯ ಆಪಾದಿತ, ಅಪೀಲುದಾರನು, ಆ ಸಮಯದಲ್ಲಿ

ಬ್ಯಾಂಕ್ ವ್ಯವಸ್ಥಾಪಕನಾಗಿದ್ದು, ಅವನ ಪ್ರಾತಿನಿಧ್ಯದಲ್ಲಿ, ಅವನ ಠೇವಣಿಯ ಸಂಬಂಧದಲ್ಲಿ ಯಾರೋ ಒಬ್ಬ ವ್ಯಕ್ತಿಗೆ ಸ್ವಲ್ಪ ಮುಂಗಡಗಳನ್ನು ನೀಡಿದ್ದು, ಲೆಕ್ಕ ಪರಿಶೋಧನೆಯ ಸಮಸ್ಯೆಯನ್ನು ಎದುರಿಸಿದ್ದನು. ಅವನ ಕೋರಿಕೆಯಂತೆ ತಾನು, ತನ್ನ ಠೇವಣಿಗೆ ಪ್ರತಿಯಾಗಿ ಸಾಲ ಮುಂಗಡಕ್ಕೆ 1ನೇ ಸಂಖ್ಯೆಯ ಆಪಾದಿತನು ಅಧಿಕೃತಗೊಳಿಸಿದ ಹಿಂದಿನ ತಾರೀಖಿನ ಪತ್ರವನ್ನು ನೀಡಿದ್ದನು. ದಿನಾಂಕ 15.04.1991ರ ಸದರಿ ಪತ್ರವನ್ನು ಅವನ ಮೂಲಕ ನಿಶಾನೆ ಪಿ4 ಎಂದು ಗುರುತುಮಾಡಲಾಗಿದೆ. ಸಿಂಡಿಕೇಟ್ ಬ್ಯಾಂಕ್ ವಿಚಕ್ಷಣಾ ಸಿಬ್ಬಂದಿಯು, ಅವನು ಸಕಾರಾತ್ಮಕ ಉತ್ತರ ನೀಡಿರುವುದಕ್ಕೆ ಪತ್ರ ನಿಶಾನೆ ಪಿ4ನ್ನು ಅವನಿಗೆ ನೀಡಲಾಗಿದೆಯೇ ಎಂದು ಕೇಳಿರುವುದನ್ನು ಪ್ರಾಸಾ–2 ತಿಳಿಸಿದ್ದಾನೆ. ತರುವಾಯ, ಅವನು ಪತ್ರ ನಿಶಾನೆ ಪಿ5 ದಿನಾಂಕ 15.09.1992ನ್ನು ನೀಡಿದ್ದಾನೆ. ಅವನು ನಿಶ್ಚಿತ ಠೇವಣಿಯ ಉತ್ಪನ್ನವನ್ನು ಸ್ವೀಕರಿಸಿರುವುದನ್ನು ಒಪ್ಪಿಕೊಂಡಿದ್ದು, ಅವನು ಸಾಲ ಅರ್ಜಿ ನಿಶಾನೆ ಪಿ7 ರಲ್ಲಿರುವ ಸಹಿಯು ತನ್ನದಲ್ಲವೆಂದು ತಿಳಿಸಿದ್ದಾನೆ. ತನ್ನ ಪಾಟೀ–ಸವಾಲಿನಲ್ಲಿ ಅವನು, ನಿಶಾನೆ ಪಿ4 ಪತ್ರವು ದಿನಾಂಕ: 15.04.1991ರ ನಂತರದ್ದಾಗಿದೆ. ಆದರೆ, ಆ ಪತ್ರವನ್ನು ಅವನು ಯಾವಾಗ ನೀಡಿದ್ದನು ಎಂಬುದನ್ನು ಖಚಿತವಾಗಿ ನೆನಪಿಸುವುದಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ. ಅಷ್ಟೇ ಅಲ್ಲದೆ, ಅವನು, ಬ್ಯಾಂಕಿನ ಜನರ ವಿನಂತಿಯಂತೆ ನಿಶಾನೆ ಪಿ–5 ಮತ್ತು ನಿಶಾನೆ ಪಿ–5(ಬಿ)ಗಳನ್ನು ನೀಡಿದ್ದೇನೆಂದು ಒಪ್ಪಿಕೊಂಡಿದ್ದಾನೆ. ನಿಶಾನೆ ಪಿ.5, ಎಸ್. ಶಿವರಾಮನ್, ಉಪನಿರೀಕ್ಷಕರು, ಇವರು ತನ್ನ ಪಾಟೀ–ಸವಾಲಿನಲ್ಲಿ, ತಾನು, ವಿಚಕ್ಷಣಾ ಇಲಾಖೆಯಲ್ಲಿ ವಿಚಕ್ಷಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸುವಾಗ ತನಿಖೆಯನ್ನು ನಡೆಸಿದ್ದನೆಂದು ಹೇಳಿಕೆ ನೀಡಿರುವುದನ್ನು ತಿಳಿಸುತ್ತದೆ.

19. ನಿಶಾನೆ ಪಿ.5, 15.09.1992ರ ದಿನಾಂಕದ್ದೆಂಬುದನ್ನು ಗಮನಿಸುವುದು ಯುಕ್ತವಾಗಿದೆ. ಶಿವರಾಮನ್‌ನ ಹೇಳಿಕೆಯ ಪ್ರಕಾರ, ಆ ಸಮಯದಲ್ಲಿಯೂ ಕೂಡ ವಿಚಕ್ಷಣಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಅವನು 09.10.1986 ರಿಂದ 09.05.1992ರ ವರೆಗೆ ಕಾರ್ಯನಿರ್ವಹಿಸುತ್ತಿದ್ದನು. ನಿಶಾನೆ ಪಿ.34, ದಿನಾಂಕ 09.11.1989ರ ಪಾಲುದಾರ ವಿಲೇಖದ ಪ್ರತಿಯಾಗಿದ್ದು, ಇದು, ಎಂ. ಚಂದ್ರಶೇಖರ್

ಮತ್ತು ಎಂ. ವಿಜಯಶೇಖರ್ ಇವರಿಬ್ಬರೂ ಎಂ.ಕೆ. ಮುತ್ತಯ್ಯ ಪಿಳ್ಳೈ ಎಂಬುವರ ಮಕ್ಕಳಾಗಿದ್ದು, ಇವರೊಂದಿಗೆ ಅಪ್ರಾಪ್ತ ಮಾಸ್ಟರ್ ಸಿ. ಸ್ವರೂಪ್ ಫರ್ಮಿನ ಪಾಲುದಾರರಾಗಿದ್ದು, ಈ ಕಾರಣದಿಂದ ಚಂದ್ರಶೇಖರನು ವ್ಯವಸ್ಥಾಪನಾ ಪಾಲುದಾರನಾಗಿದ್ದನೆಂಬುದನ್ನು ದಿನಾಂಕ 01.12.1990ರ ನಿಶಾನೆ 35 ವಿವರಿಸುತ್ತದೆ. ಅವರು ಮೂಲವನ್ನು ಹಾಜರುಪಡಿಸಿಲ್ಲ. ಅವರು, ಅವರ ಬಗ್ಗೆ ತಿಳಿಸುವ ಸಕ್ಷಮ ಸಾಕ್ಷಿದಾರ, ಪ್ರಾಸಾ–2ನ್ನು ಇರಿಸಿದ್ದಾರೆ. ಇದರ ಬದಲು, ರುಜುವಾತಿನ ವಿಷಯಕ್ಕೊಳಪಡುವ ಪ್ರಾಸಾ–13ರ ಮೂಲಕ ಗುರುತಿಸುವುದಕ್ಕಾಗಿ ಈ ಪ್ರತಿಗಳನ್ನು ಗುರುತುಮಾಡಲಾಗಿದೆ. ಹೀಗಾಗಿ, ಈ ದಸ್ತಾವೇಜುಗಳನ್ನು ರುಜುವಾತಾಗುವುದಿಲ್ಲವೆಂದು ಪರಿಗಣಿಸಬೇಕಾಗುತ್ತದೆ.

20. ಪ್ರಾಸಾ–3 ಎಂದು ವಿಚಾರಣೆ ಮಾಡಲಾದ ಶ್ರೀ ಎಸ್. ಸಂಪತ್ ಕೃಷ್ಣ 08.04.1992 ರಂದು ಕ್ಯಾಷಿಯರ್ ಆಗಿದ್ದರು. ಪ್ರಾಸಿಕ್ಯೂಷನ್‌ನ ವಾದ ಏನೆಂದರೆ, ದಿನಾಂಕ 20.04.1991 ರಂದು ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ನ ಹೆಸರಿನಲ್ಲಿದ್ದ ಭದ್ರತೆಯನ್ನು ಆಪಾದಿತನು ಚಂದ್ರಶೇಖರನ ಹೆಸರಿನಲ್ಲಿ ಸಾಲವನ್ನು ಪಡೆದುಕೊಂಡು, ಸದರಿ ಸಾಲವನ್ನು 1,80,000/– ರೂ. ಗಳು + 20,000/– ರೂ. ಗಳು + 1,05,000/– ರೂ. ಗಳು + 95,000 ರೂ. ಗಳ ಮೊತ್ತದ 4 ಚೆಕ್ಕುಗಳಿಂದ 08.04.1992 ರಂದು 3,69,160/– ರೂ. ಗಳಷ್ಟನ್ನು ಮರುಸಂದಾಯ ಮಾಡಲಾಗಿತ್ತು ಎಂಬುದಾಗಿದೆ. ಇದು, 4,00,000/– ರೂ. ಮೊತ್ತವಾಗುತ್ತದೆ. ಸಾಲ ಜಮೆಯಾಗಿದ್ದ ಮೊತ್ತ 3,69,160/– ಮಾತ್ರ ಈ ಸಂಗತಿಯನ್ನು ರುಜುವಾತುಪಡಿಸಲು, ಸಂಪತ್‌ಕೃಷ್ಣನನ್ನು ವಿಚಾರಣೆ ಮಾಡಲಾಗಿತ್ತು. ಅವನು ಪ್ರಾಸಿಕ್ಯೂಷನ್‌ನ ವಾದವನ್ನು ಸಮರ್ಥಿಸಿರಲಿಲ್ಲ. ಅವನ ಸಾಕ್ಷ್ಯದಲ್ಲಿ, ಅವನು, ತಾನು ದಿನಾಂಕ 08.04.1992 ರಂದು ಕ್ಯಾಷಿಯರ್ ಆಗಿ (ನಗದು ಗುಮಾಸ್ತ) ಕಾರ್ಯನಿರ್ವಹಿಸುತ್ತಿದ್ದೆನೆಂದು ಹೇಳಿಕೆ ನೀಡಿದ್ದಾನೆ. 4 ಚೆಕ್ಕುಗಳನ್ನು ಮೆಸರ್ಸ್ ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ನ ಖಾತೆಯ ಸಾಲಕ್ಕೆ 3,69,160/– ರೂ. ಗಳ ಜಮೆ ಚೀಟಿಯನ್ನು ಅವನು ಸ್ವೀಕರಿಸಿದ್ದು, 3,69,160/– ರೂ. ಗಳನ್ನು ಸ್ವೀಕರಿಸಿರುವುದಕ್ಕೆ ಜಮೆ ಚೀಟಿಯ ಹಿಂಬರಹವನ್ನು

ನೀಡಿದ್ದಾನೆ. ಅವನು ಲೆಕ್ಕಗಣನೆಯನ್ನು ವಿವರಿಸಿದ್ದು, ಅವನು ಆ ಚೆಕ್ಕುಗಳಲ್ಲಿ ಒಂದನ್ನು ನೀಡಿದ್ದಾನೆ. ಅವನು ಚೆಕ್ಕುಗಳ ಒಟ್ಟು ಮೊತ್ತ 4,00,000/– ಗಳಾಗಿತ್ತೆಂದು ಮತ್ತು ಜಮೆ ಚೀಟಿಯು 3,69,160/– ರೂ. ಗಳಾಗಿದ್ದವೆಂದು ಸಾಕ್ಷ್ಯಹೇಳಿದ್ದಾನೆ ಮತ್ತು ಟೋಕನ್ ಅನ್ನು ನೀಡಿದ್ದ ವ್ಯಕ್ತಿಗೆ ಬಾಕಿಹಣವನ್ನು ಸಂದಾಯ ಮಾಡಿದ್ದನೆಂದು ತಿಳಿಸಿದ್ದಾನೆ. ಮಾನ್ಯ ಸರ್ಕಾರಿ ಅಭಿಯೋಜಕರು (ಪಬ್ಲಿಕ್ ಪ್ರಾಸಿಕ್ಯೂಟರು) ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡು ಪಾಟೀ–ಸವಾಲನ್ನು ನಡೆಸಿದ್ದರೂ, ಪ್ರಾಸಿಕ್ಯೂಷನನ್ನು ಬೆಂಬಲಿಸುವ ವಾದ ಸ್ವಲ್ಪವಾದರೂ ಕೂಡ ಅವನ ಬಾಯಿಂದ ಹೊರಬಿದ್ದಿಲ್ಲ. 3,69,160/– ರೂ. ಮೊತ್ತವನ್ನು, ಸಾಲವೆಂದು ಸಂದಾಯ ಮಾಡಬೇಕಾದ ವಾಸ್ತವಿಕ ಮೊತ್ತವಾಗಿದ್ದರೆ, 20,000/– ರೂ. ಗಳ ಒಂದು ಚೆಕ್ಕು, ಯಾವುದೇ ರೀತಿಯಲ್ಲೂ ಅಗತ್ಯವಾಗಿರಲಿಲ್ಲ ಮತ್ತು ಮೂರು ಚೆಕ್ಕುಗಳ ಒಟ್ಟು ಮೊತ್ತ ಸಂದಾಯ ಮಾಡಬೇಕಾದ ಮೊತ್ತಕ್ಕಿಂತ ಅಧಿಕವಾಗಿತ್ತು.

21. ಪ್ರಾಸಾ–4 – ಕೃಷ್ಣರಾವ್, ದಿನಾಂಕ:20.04.1991ರಂದು ಕ್ಯಾಷಿಯರ್ ಆಗಿ ಕಾರ್ಯನಿರ್ವಹಿಸಿದ್ದು, ಆ ದಿನಾಂಕದಂದು ಎಂದರೆ ದಿನಾಂಕ:20.04.1991ರಂದು ಚಂದ್ರಶೇಖರ್‌ರವರ ಹೆಸರಿನಲ್ಲಿ ಸಾಲ ಮೊತ್ತಕ್ಕೆ ಅನುಮೋದನೆ ನೀಡಿ ಅದನ್ನು ಬಿಡುಗಡೆ ಮಾಡಲಾಗಿತ್ತು. ಅದೇ ದಿನಾಂಕದಂದು, ಡಾ॥ ಕೆ. ಶ್ರೀನಿವಾಸನ್‌ನ ಸಾಲ ಖಾತೆಯನ್ನು ಮುಕ್ತಾಯಗೊಳಿಸಲಾಗಿತ್ತು. ಅವನು, 4,00,000/–ರೂ. ಗಳ ಸಾಲ ಮೊತ್ತದ ಪೈಕಿ 3,88,511/–ರೂ. ಗಳ ಮೊತ್ತವನ್ನು ಡಾ॥ ಕೆ. ಶ್ರೀನಿವಾಸನ್‌ರವರ ಸಾಲಖಾತೆಯನ್ನು ತೀರುವಳಿ ಮಾಡಲು ಹೊಂದಾಣಿಕೆ ಮಾಡಿದ್ದನು ಮತ್ತು ಬಾಕಿ ಮೊತ್ತವನ್ನು ಮೊದಲ ಆಪಾದಿತ – ಎನ್.ಆರ್. ಭಟ್‌ನಿಗೆ ಸಂದಾಯ ಮಾಡಿದ್ದನು. ಆದರೆ, ನೇರ ನಿರ್ಣಯವನ್ನು ಕ್ರಿಮಿನಲ್ ಸಂ.2191/2006 ಸಿ/ಡಬ್ಲ್ಯೂ 2185/2006ನ್ನು ಹೊಂದಿರುವ ಸಂಬಂಧಪಟ್ಟ ಅಪೀಲಿನಲ್ಲಿ ನೀಡಲಾಗಿದ್ದು, ಅಪರಾಧ ನಿರ್ಣಯ ಮತ್ತು ಶಿಕ್ಷೆಯ ತೀರ್ಪನ್ನು ತಳ್ಳಿಹಾಕಲಾಗಿದೆ. ಹೀಗಾಗಿ, ಇದು ಪ್ರಾಸಿಕ್ಯೂಷನ್ ವಾದಕ್ಕೆ ಸಹಾಯಕವಾಗುವುದಿಲ್ಲ. ವಾಸ್ತವವಾಗಿ, ಪ್ರಾಸಾ–4, ತನ್ನ ಪಾಟೀ–ಸವಾಲಿನಲ್ಲಿ, ಡಾ॥ ಕೆ. ಶ್ರೀನಿವಾಸನ್‌ರ

ಸಾಲಖಾತೆಗೆ ಜಮೆ ಮಾಡಲು ಸಾಲಗಾರನು ಅಧಿಕಾರ ಪತ್ರವನ್ನು ನೀಡಿರಲಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಆಗಿನ ವ್ಯವಸ್ಥಾಪಕರು ನೀಡಿದ ನಿರ್ದೇಶನಗಳ ಪ್ರಕಾರ, ಎಂದರೆ ವರಿಷ್ಠಾಧಿಕಾರಿಯಾಗಿರುವ 1ನೇ ಆಪಾದಿತನ ನಿರ್ದೇಶನಗಳ ಪ್ರಕಾರ ಆದೇಶಗಳನ್ನು ಪಾಲಿಸಿದ್ದೆನೆಂದು ಸ್ವಯಂ ಆಗಿ ತಿಳಿಸಿದ್ದಾನೆ. ಇದನ್ನು ಮಾತ್ರ ತಿದ್ದಲಾಗಿದೆ.

22. ಶ್ರೀಮತಿ ಪ್ರೇಮಾ ಪೈ ರವರನ್ನು ಪ್ರಾಸಾ–5 ಎಂದು ವಿಚಾರಣೆ ಮಾಡಲಾಗಿದೆ. ಇವಳು ವ್ಯವಸ್ಥಾಪಕರ ಪಟ್ಟಿಯನ್ನು ಬರೆದಿರುವ ಅಧಿಕಾರಿಯಾಗಿದ್ದಳು. 4 ಲಕ್ಷ ರೂ.ಗಳಿಗೆ ಸಂಬಂಧಿಸಿದ ನಮೂದನ್ನು ನಿಶಾನೆ ಪಿ.15ರಲ್ಲಿ ಮಾಡಲಾಗಿದೆ. ಅವಳು ತನ್ನ ಪಾಟೀ–ಸವಾಲಿನಲ್ಲಿ ಅವಳು ತನ್ನ ಜಾಗದಲ್ಲಿಲ್ಲದಿರುವಾಗಲೆಲ್ಲ ಅದನ್ನು ಬರೆಯಲು ವ್ಯವಸ್ಥಾಪಕ ಅಥವಾ ಪ್ರಭಾರಿ ಅಧಿಕಾರಿಗೆ ಯಾವುದೇ ಅಡತಡೆಗಳಿರಲಿಲ್ಲವೆಂದು ಮತ್ತು ಅವಳು ಅಲ್ಲಿಲ್ಲದಿರುವಾಗ, ಪ್ರಶ್ನಿತ ನಮೂದನ್ನು ಮಾಡಲಾಗಿದೆಯೆಂದು ಮತ್ತು ನಿಶಾನೆ ಪಿ.15(ಎ) ನಂಬಿಕೆಗೆ ಯೋಗ್ಯವಾಗಿಲ್ಲವೆಂದು ಒಪ್ಪಿಕೊಂಡಿದ್ದಾಳೆ. ಇಡೀ ದಿನದ ಲೆಕ್ಕ ಸರಿಯಾಗಿದೆ ಮತ್ತು ತಾಳೆಯಾಗುತ್ತದೆಯೆಂದು ಹೇಳಿಕೆ ನೀಡಿದ್ದಾಳೆ. ಹೀಗಾಗಿ, ಅವಳ ಬಾಯಿಂದ ಹೊರಗೆಡಹಿದ ಒಪ್ಪಿಗೆಗಳ ಹಿನ್ನೆಲೆಯಲ್ಲಿ ಪ್ರಾಸಿಕ್ಯೂಷನ್‌ಗೆ ಅವಳ ಸಾಕ್ಷ್ಯ ಹೆಚ್ಚು ಮಹತ್ವ ನೀಡುವುದಿಲ್ಲ.

23. ಪ್ರಾಸಿಕ್ಯೂಷನ್ನು, ಪ್ರಾಸಾ–7 ಶ್ರೀಮತಿ ಆನ್ ಜೆ. ನೊರೊನ್ಹರವರ ಸಾಕ್ಷ್ಯವನ್ನು ಅವಲಂಬಿಸಿದೆ. ಅಪೀಲುದಾರನ ಸಹಿಯನ್ನು ರುಜುವಾತುಪಡಿಸಲು ಅವಳನ್ನು ವಿಚಾರಣೆಮಾಡಲಾಗಿದೆ. ದಿನಾಂಕ 20.04.1991ರ ಸಾಲದ ಬಟವಾಡೆ ವಿಷಯದಲ್ಲಿ ನಿಶಾನೆ ಪಿ.3 ದಿನಾಂಕ: 26.03.1991 ಸಾಲಚೀಟಿಯಲ್ಲಿ ಧಾರಣಾಧಿಕಾರವನ್ನು ಗುರುತು ಮಾಡಿಲ್ಲವೆಂಬುದು ಅವಳ ಹೇಳಿಕೆಯಾಗಿದೆ. ನಿಶಾನೆ ಪಿ.6 ಇವಳ ಮುಂದೆ ಬಂದಿರುತ್ತದೆ. ನಿಶಾನೆ ಪಿ.6ನ್ನು ಸೃಜಿಸಿರುವ ಬಗ್ಗೆ ತನಗೆ ಗೊತ್ತಿಲ್ಲವೆಂದು ವಾದಿಸಿದ್ದಾಳೆ ಮತ್ತು ನಿಶಾನೆ ಪಿ.6 ಯಾರ ಕೈಬರವಣಿಗೆ ಎಂದು ಹೇಳಲು ಸಾಧ್ಯವಿಲ್ಲವೆಂದು ತಿಳಿಸಿದ್ದಾಳೆ. ಆದಾಗ್ಯೂ, ಅವಳು, ಆಪಾದಿತನು ಇದನ್ನು ಸಂದಾಯ ಮಾಡಬೇಕೆಂದು ಕಳುಹಿಸಿದ್ದನೆಂದು ಮತ್ತು ಅವನ ಸಹಿ – ನಿಶಾನೆ

ಪಿ.6(ಎ)ಯನ್ನು ಗುರುತಿಸಿದೆನೆಂದು ಅವಳು ಹೇಳಿಕೆ ನೀಡಿದ್ದಾಳೆ. ನಿಶಾನೆ ಪಿ.7 ಸಾಲ ಅರ್ಜಿಯು ಅವಳ ಬಳಿಗೆ ಬಂದಿದ್ದು ನಿಶಾನೆ ಪಿ.7ರ ಅಡಕಾಂಶಗಳು ಅಪೀಲುದಾರನ ಕೈಬರಹದಲ್ಲಿತ್ತೆಂದು ಅವಳು ತಿಳಿಸಿದ್ದಾಳೆ. ಆದರೆ ನಿಶಾನೆ ಪಿ.7(ಬಿ)ನಲ್ಲಿ ಯಾರು ಸಹಿ ಮಾಡಿದ್ದರು ಎಂಬುದು ಅವಳಿಗೆ ಗೊತ್ತಿಲ್ಲ. ಸಾಲವನ್ನು ಮಂಜೂರು ಮಾಡುವುದಕ್ಕಾಗಿ ನಿಶಾನೆ ಪಿ.7(ಸಿ) ಯಲ್ಲಿದ್ದ ಅಪೀಲುದಾರನ ಸಹಿಯನ್ನು ಗುರುತಿಸಿದ್ದಾಳೆ. ಪ್ರಾಸಾ–7ರ ಸಾಕ್ಷ್ಯದ ಸಾರಾಂಶ ಏನೆಂದರೆ, ಸಾಲ ಅರ್ಜಿಯು ಆಪಾದಿತನ ಕೈಬರಹದಲ್ಲಿತ್ತು ಎಂಬುದಾಗಿದೆ. ಆದರೆ ನಿಶಾನೆ ಪಿ.7ರಲ್ಲಿ ಕಂಡುಬರುವ ಸಾಲಗಾರನ ಸಹಿಯು ಆಪಾದಿತನದಾಗಿರಲಿಲ್ಲ. ನಿಶಾನೆ ಪಿ.6, ಸಾಲ ಮಂಜೂರಾತಿ ನಮೂದು ಆಪಾದಿತನ ಕೈಬರಹದಲ್ಲಿಲ್ಲವೆಂಬುದನ್ನು ವಿವರಿಸುತ್ತದೆ. ಅವಳು ಗುರುತಿಸಿರುವ ಮತ್ತೊಂದು ಕೋನ ಯಾವುದೆಂದರೆ ನಿಶಾನೆ ಪಿ.3 ನಿಶ್ಚಿತ ಠೇವಣಿ ರಸೀದಿಯಲ್ಲಿ ಯಾವುದೇ ಧಾರಣಾಧಿಕಾರ ಗುರುತು ಇರಲಿಲ್ಲವೆಂಬುದನ್ನು ಅವಳು ಕಂಡುಹಿಡಿದಿರುವುದು ಮಾತ್ರ ಮತ್ತೊಂದು ದೃಷ್ಟಿಕೋನವಾಗಿದೆ. ವಾಸ್ತವವಾಗಿ, ಅವಳು, ದಿನಾಂಕ: 26.06.1991 ರಂದು ಗಡುವು ತುಂಬುವ ನಿಶ್ಚಿತ ಠೇವಣಿಗಳು ಮತ್ತು ಎಫ್‌ಡಿ ರಸೀದಿಗಳನ್ನು ನವೀಕರಿಸಲಾಗಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾಳೆ ಮತ್ತು ಮೊತ್ತವನ್ನು ಗಡುವು ದಿನಾಂಕಕ್ಕೆ ಮೆಸರ್ಸ್ ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್‌ಗೆ ಸಂದಾಯ ಮಾಡಲಾಗಿತ್ತೆಂದು ಒಪ್ಪಿಕೊಂಡಿದ್ದಾಳೆ. ಎಫ್‌ಡಿ ರಸೀದಿಗಳನ್ನು ಬ್ಯಾಂಕಿಗೆ ನೀಡಿದ ಹೊರತು, ಸಾಲವನ್ನು ಮಂಜೂರು ಮಾಡಲು ಸಾಧ್ಯವಾಗುವುದಿಲ್ಲ.

24. ಪ್ರಾಸಾ 8 – ಶ್ರೀ ಮಂಜುನಾಥನು 1989 ರಿಂದ 1994ರ ವರೆಗೆ ಸಹಾಯಕ ವ್ಯವಸ್ಥಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದನು. ಅವನು ತನ್ನ ಪಾಟೀ–ಸವಾಲಿನಲ್ಲಿ ಅವನು ತನ್ನ ಮುಂದೆ ಬಂದಿದ್ದ ದಸ್ತಾವೇಜುಗಳ ಅಡಿಯಲ್ಲಿ ಬರುವ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಖುದ್ದು ಜ್ಞಾನ ಇರಲಿಲ್ಲವೆಂದು ತಿಳಿಸಿದ್ದಾನೆ. ಅವನು, ತನಗೆ ಸಿಬಿಐ ಪೊಲೀಸರು ತೋರಿಸಿದಾಗ ಎಂದರೆ ಅವನ ಹೇಳಿಕೆಯನ್ನು ದಾಖಲಿಸುವ ಸಮಯದಲ್ಲಿ ಆ ದಸ್ತಾವೇಜುಗಳನ್ನು ನೋಡಿದೆನೆಂದು ಹೇಳಿಕೆ ನೀಡಿದ್ದಾನೆ. ಸಾಲದ ಉದ್ದೇಶ ಮತ್ತು ಇತರ ಬ್ಯಾಂಕಿಂಗ್ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಸುತ್ತೋಲೆಗಳು ಮತ್ತು ಮಾದರಿ

ಸೂಚನೆಗಳಿದ್ದವು. ಅಷ್ಟೇ ಅಲ್ಲದೆ ಅವನು, ನಿಶಾನೆ ಪಿ.1 – ನಿಗದಿತ ಠೇವಣಿ ರಸೀದಿಯು ದೊರಕುತ್ತಿತ್ತೆಂದು ಒಪ್ಪಿಕೊಂಡಿದ್ದಾನೆ. ಆ ನೌಕರನನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ ವಿಚಾರಣೆ ಮಾಡಿರುವುದಿಲ್ಲ.

25. ಪ್ರಾಸಾ–9, ಈಶ್ವರ್ ಭಟ್‌ರವರು ಆರ್.ಎಸ್.ಪವರ್ ಕಂಟ್ರೋಲ್ (ಪ್ರೈ) ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. 20,000/– ರೂ.ಗಳು, 1,80,000/– ರೂ.ಗಳು, 1,05,000/– ರೂ.ಗಳು, 95,000/– ರೂ.ಗಳು ಮತ್ತು 17,000/– ರೂ. ಗಳಿಗೆ ತೆಗೆದುಕೊಂಡಿರುವ ನಾಲ್ಕು ಚೆಕ್ಕುಗಳನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ನು ಇವರನ್ನು ವಿಚಾರಣೆಮಾಡಿತು. ಈ ಚೆಕ್ಕುಗಳ ಉತ್ಪತ್ತಿಯನ್ನು ಚಂದ್ರಶೇಖರ್‌ರ ಸಾಲವನ್ನು ಮರುಸಂದಾಯಮಾಡಲು ಬಳಸಲಾಗಿತ್ತು ಎಂದು 1ನೇ ಆಪಾದಿತನನ್ನು ದೋಷಾರೋಪಣೆಯಲ್ಲಿ ಸಿಕ್ಕಿಸಲು ಪ್ರಾಸಿಕ್ಯೂಷನ್ನು ಉದ್ದೇಶಿಸಿದೆ. ಅವನು ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿಲ್ಲ. ವಾಸ್ತವವಾಗಿ, ಅವನು ಪ್ರತಿಕೂಲ ಸಾಕ್ಷ್ಯವಾಗಿ ಪರಿವರ್ತಿತನಾಗಿದ್ದಾನೆ. ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರು ಪಾಟೀ–ಸವಾಲನ್ನು ನಡೆಸಿದ್ದರೂ, ಅವನು ಪ್ರತ್ಯೇಕವಾಗಿಯೂ ಕೂಡ ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿಲ್ಲ.

26. ಪ್ರಾಸಾ–12 ಕೂಡ ಸಹಾಯಕ ವ್ಯವಸ್ಥಾಪಕನಾಗಿದ್ದನು. ಅವನು, ತನ್ನ ಪಾಟೀ–ಸವಾಲಿನಲ್ಲಿ, ನಿಶಾನೆ ಡಿ1 ರಲ್ಲಿ ಕೆಲವು ಬರವಣಿಗೆಗಳಿವೆಯೆಂದು ಮತ್ತು ಇದಾದನಂತರ ಅವುಗಳನ್ನು ವೈಟ್‌ನರ್ ಹಚ್ಚುವ ಮೂಲಕ ಅಳಿಸಿಹಾಕಲಾಗಿದೆ ಎಂದು ಹೇಳಿಕೆನೀಡಿದ್ದಾನೆ. ಅಷ್ಟೇ ಅಲ್ಲದೆ, ಅವನು, ತನಿಖಾಧಿಕಾರಿಯು, ದಿನಾಂಕ 29.03.1994 ರಂದು ತನ್ನ ಹೇಳಿಕೆಯನ್ನು ದಾಖಲಿಸಿದ್ದನೆಂದು ತಿಳಿಸಿದ್ದಾನೆ. ಆದರೆ, ಅವನು ವೈಟ್‌ನರ್ ಹಾಕುವ ಮೂಲಕ ಅದನ್ನು ಅಳಿಸಿಹಾಕಿರುವ ಬಗ್ಗೆ ತನಿಖಾಧಿಕಾರಿಗೆ ಏನನ್ನೂ ಹೇಳಿರುವುದಿಲ್ಲ.

27. ಈಗಾಗಲೇ ಚರ್ಚಿಸಲಾದಂತೆ, ಆಂತರಿಕ ತನಿಖೆಯನ್ನು ನಡೆಸಿರುವ ಶಿವರಾಮನ್–ಪ್ರಾಸಾ–13, ವಿಚಕ್ಷಣಾ ವರದಿಯನ್ನು ಸಲ್ಲಿಸಿದ್ದನು. ತಾನು ಸಲ್ಲಿಸಿದ

ವರದಿ ಮೇಲೆ ಯಾವುದೇ ದಂಡನೀಯ ಕ್ರಮವನ್ನು ಸೂಚಿಸಿರಲಿಲ್ಲವೆಂಬುದು ಅವನ ವಾದವಾಗಿದೆ. ಅವನು ತಾನು ಆಂತರಿಕ ತನಿಖೆಯನ್ನು ನಡೆಸುವಾಗ, ಆಂತರಿಕ ನಿರೀಕ್ಷಕರುಗಳಿದ್ದರೆಂದು ಒಪ್ಪಿಕೊಂಡಿದ್ದಾನೆ. ಅವನ ಸಾಕ್ಷ್ಯವು, ನಿರೀಕ್ಷಕರ ವರದಿ ಮತ್ತು ವಿಚಕ್ಷಣಾ ವರದಿಯನ್ನು ರುಜುವಾತುಪಡಿಸುತ್ತಿದ್ದು, ಅವು ಉತ್ತಮ ಸಾಕ್ಷ್ಯಗಳಾಗಿವೆ, ಆದರೆ ಅವುಗಳನ್ನು ಮರೆಮಾಚಲಾಗಿದೆಯೆಂಬುದನ್ನು ಒಪ್ಪಿಕೊಂಡಿದ್ದಾರೆ.

28. ಪ್ರಾಸಾ–17, ಆಶಾ ಬಾಳಿಗಾ ಇವರು, ಶಶಿರೇಖಾರ ಬಗ್ಗೆ ಮಾತನಾಡಿರುವುದಿಲ್ಲ ಮತ್ತು ಇವಳನ್ನು ಆರೋಪಪಟ್ಟಿಯಲ್ಲಿ ಸಾಕ್ಷಿದಾರಳಾಗಿ ಉದ್ಧರಿಸಿದ್ದರೂ ಕೂಡ ಶಶಿರೇಖಾಳನ್ನು ವಿಚಾರಣೆ ಮಾಡಿರುವುದಿಲ್ಲ. ನಿಶಾನೆ ಪಿ.7ಕ್ಕೆ ಸಂಬಂಧಪಟ್ಟ ಸಾಲ ವ್ಯವಹರಣೆಯ ಸಂಬಂಧದಲ್ಲಿ ಪ್ರಾಸಾ–17, ಇವರು 4,00,000/– ರೂ. ಮೊತ್ತವನ್ನು ಚಂದ್ರಶೇಖರ್‌ಗೆ ಸಾಲವಾಗಿ ಮಂಜೂರು ಮಾಡಲಾಗಿತ್ತೆಂದು ಹೇಳಿಕೆ ನೀಡಿದ್ದಾರೆ. ಅವಳು, 1ನೇ ಆಪಾದಿತನಿಗಾಗಿ, ಹಾಜರಾಗಿರುವುದಾಗಿ ಹೇಳಿಕೆ ನೀಡಿದ್ದರೂ ಕೂಡ, ಅವಳಿಗೆ ಅಪೀಲುದಾರನ ಕೈಬರಹದ ಬಗ್ಗೆ ಯಾವುದೇ ತಿಳಿವಳಿಕೆಯಿರುವುದು ಕಂಡುಬರುವುದಿಲ್ಲ. ಅಷ್ಟೇ ಅಲ್ಲದೆ, ಅವಳು, ಈ ವಿಷಯಗಳ ಕುರಿತು ಯಾವುದೇ ವಿವರಣೆಯನ್ನು ನೀಡಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾಳೆ. ಹೀಗಾಗಿ ಅವಳ ಸಾಕ್ಷ್ಯವು ಪ್ರಾಸಿಕ್ಯೂಷನ್‌ಗೆ ಹೆಚ್ಚು ಸಹಾಯಕವಾಗುವುದಿಲ್ಲ.

29. ಪ್ರಾಸಾ–18 ಶ್ರೀಮತಿ ಅಮೃತಕಲಾ ಇವರು ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿರುವುದಿಲ್ಲ. 8,300/–ರೂ. ಗಳನ್ನು ಅಪೀಲುದಾರನಿಗೆ ಸಂದಾಯ ಮಾಡಿರುವುದನ್ನು ರುಜುವಾತುಪಡಿಸಲು ಅವಳನ್ನು ವಿಚಾರಣೆ ಮಾಡಲಾಗಿದೆ. ಯಾವುದೇ ರೀತಿಯಲ್ಲಿ ಪ್ರಾಸಿಕ್ಯೂಷನ್‌ನ ವಾದವನ್ನು ಸಮರ್ಥಿಸಲು ಅವಳ ಸಾಕ್ಷ್ಯದಲ್ಲಿ ಏನೂ ಪ್ರಕಟವಾಗಿರುವುದಿಲ್ಲ.

30. ಪ್ರಾಸಾ–19, ದಿನಾಂಕ: 29.04.2016ರ ನ್ಯಾಯಾಲಯ ಆದೇಶದ ಪ್ರಕಾರ ಸರಿಪಡಿಸಲಾಗಿದೆ. ಎಸ್.ಕೆ. ವಿಜಯ್ ರಾಜೀವ್ ತನಿಖಾಧಿಕಾರಿಯಾಗಿದ್ದನು. ಅವನು, ದಿನಾಂಕ: 04.08.1994 ರಂದು, ಅವನು, ಸಿಂಡಿಕೇಟ್ ಬ್ಯಾಂಕ್, ಬಿಡಬ್ಲ್ಯೂಎಸ್ಎಸ್‌ಬಿ ಶಾಖೆಯಿಂದ ದಸ್ತಾವೇಜುಗಳನ್ನು ಪಡೆದುಕೊಂಡಿರುವುದಾಗಿ ಹೇಳಿಕೆನೀಡಿದ್ದಾನೆ. ಇದು, ಜಪ್ತಿಯನ್ನು ರುಜುವಾತುಪಡಿಸಲು ಜಪ್ತಿ ಮೆಮೊವನ್ನು ಬೆಂಬಲಿಸುವುದಿಲ್ಲ. ಅವನು, 1 ಮತ್ತು 2ನೇ ಆಪಾದಿತರ ಮಾದರಿ ರುಜುವನ್ನು ಕೈಬರಹ ತಜ್ಞರಿಗೆ ಕಳುಹಿಸಲಾಗಿದೆಯೆಂದು ತಿಳಿಸಿದ್ದಾನೆ. ಮತ್ತೆ, ಅದಕ್ಕೆ ಸಂಬಂಧಿಸಿದ ಮೆಮೊವನ್ನು ಹಾಜರುಪಡಿಸಿರುವುದಿಲ್ಲ, ಅವನು ಯಾರ ಅಭಿರಕ್ಷೆಯಿಂದ ದಸ್ತಾವೇಜನ್ನು ವಶಪಡಿಸಿಕೊಂಡನೋ ಆ ಅಧಿಕಾರಿಯನ್ನು ವಿಚಾರಣೆಗೊಳಪಡಿಸಿರುವುದಿಲ್ಲ. ವಾಸ್ತವವಾಗಿ, ಪ್ರಾಸಾ–13ರ ಸಾಕ್ಷ್ಯವು, ಸಿಂಡಿಕೇಟ್ ಬ್ಯಾಂಕ್‌ನ ಬಿಡಬ್ಲ್ಯೂಎಸ್ಎಸ್‌ಬಿ ಶಾಖೆಯಿಂದ ವಶಪಡಿಸಿಕೊಂಡ ಆಪಾದಿತ ದಸ್ತಾವೇಜುಗಳಿಗೆ ತದ್ವಿರುದ್ಧವಾಗಿದೆ. ಅವನು, ಅವುಗಳನ್ನು ಕೈಬರವಣಿಗೆ ತಜ್ಞರಿಗೆ ಕಳುಹಿಸುವ ಮೊದಲು ನ್ಯಾಯಾಲಯದಿಂದ ಯಾವುದೇ ಅನುಮತಿಯನ್ನು ಪಡೆದಿರಲಿಲ್ಲ.

31. ಇಬ್ಬರೂ ಆಪಾದಿತರು ಎಂದರೆ, ಶ್ರೀ ಎನ್.ಆರ್. ಭಟ್ ಮತ್ತು ವೆಂಕಟರಾಮನ್‌ರವರನ್ನು, ಡಾ॥ ಕೆ. ಶ್ರೀನಿವಾಸನ್‌ರವರ ಸಾಲ ಖಾತೆಗೆ ಸಂಬಂಧಪಟ್ಟಂತೆ ವಿಶೇಷ ಸಿ.ಸಿ.150/95 ರಲ್ಲಿನ ಕ್ರಿಮಿನಲ್ ಪ್ರಕರಣದಲ್ಲಿ ಅಪರಾಧಿಯೆಂದು ನಿರ್ಣಯಿಸಲಾಗಿದೆ. ಪ್ರತ್ಯೇಕ ಕ್ರಿಮಿನಲ್ ಅಪೀಲು ಸಂ.2190/06 ಮತ್ತು 2185/06 ರಲ್ಲಿ, ಈ ನ್ಯಾಯಾಲಯದ ಮುಂದೆ ಇವರಿಬ್ಬರೂ ಪ್ರತ್ಯೇಕ ಅಪೀಲುಗಳನ್ನು ಸಲ್ಲಿಸಿದ್ದಾರೆ ಮತ್ತು ಇವರನ್ನು ದಿನಾಂಕ: 30.04.2015ರ ಆದೇಶದ ಮೂಲಕ ಖುಲಾಸೆಗೊಳಿಸಲಾಗಿದೆ.

32. ಮಾನ್ಯ ಹಿರಿಯ ವಕೀಲರಾದ ಶ್ರೀ ಸಿ.ಎಚ್. ಜಾಧವ್‌ರವರು, ಈ ಎರಡೂ ಅಪೀಲುಗಳಲ್ಲಿ ಹೊರಡಿಸಿದ ಖುಲಾಸೆ ತೀರ್ಪಿಗೆ ಪ್ರತಿಯಾಗಿ ಅಪೀಲನ್ನು ಸಲ್ಲಿಸಿಲ್ಲವೆಂದು ನಿವೇದಿಸಿದ್ದಾರೆ. ಆದುದರಿಂದ ವಾಸ್ತವವಾಗಿ, ಎರಡೂ

ಅಪೀಲುಗಳಲ್ಲಿರುವ ನಿರ್ಣಯಗಳು ಪ್ರಸ್ತುತ ಪ್ರಕರಣದ್ದಲಿಯೂ ಸಹ ಹೆಚ್ಚಿನ ಸಂಬಂಧ ಹೊಂದಿವೆ. ವಾಸ್ತವವಾಗಿ, ಪ್ರಾಸಾ–15, ಅಮರ್‌ಸಿಂಗ್, ಸಂಬಂಧಪಟ್ಟ ಪ್ರಕರಣಗಳಲ್ಲಿ ಪ್ರಾಸಾ–24 ಆಗಿದ್ದನು. ಅವನು, ತಜ್ಞ–ಶ್ರೀ ಗೋಯಲ್‌ನು ನೀಡಿದ ಕಾರಣಗಳನ್ನು ಒಳಗೊಂಡಿರುವ ವರದಿಯನ್ನು ಅವಲಂಬಿಸಿದ್ದಾನೆ ಮತ್ತು ಅವನನ್ನು ವಿಚಾರಣೆ ಮಾಡಿರುವುದಿಲ್ಲ. ಪ್ರಸ್ತುತ ಕರ್ತೃ ಎಂದರೆ ಡಿ.ಡಿ. ಗೋಯೆಲ್‌ನು ದಸ್ತಾವೇಜನ್ನು ದಯಪಾಲಿಸಿದ ಹೊರತು ಪ್ರಾಸಾ–15ರ ಮೂಲಕ ಸದರಿ ದಸ್ತಾವೇಜನ್ನು ಗುರುತಿಸುವುದಷ್ಟೇ ಪ್ರಾಸಿಕ್ಯೂಷನ್‌ಗೆ ಸಹಾಯಕವಾಗುವುದಿಲ್ಲ. ಪ್ರಾಸಾ–15, ಪೆನ್ ಪ್ರೆಷರ್, ಅಲಂಕರಣಗೊಳಿಸುವಿಕೆ, ಓಪನ್ ಸ್ಟ್ರೋಕ್ ಮುಂತಾದವುಗಳಿಗೆ ಸಂಬಂಧಪಟ್ಟಂತೆ ಭಿನ್ನತೆಗಳ ಕುರಿತು ಏನನ್ನೂ ಮಾತಾಡಿಲ್ಲ. ಆದುದರಿಂದ, ರಾವ್‌ಜಪ್ಪ (ಮೇಲಿನ) ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ನಿರ್ಣಯವು ಆಪಾದಿತನಿಗೆ ಅಪಾರವಾಗಿ ಸಹಾಯಕವಾಗಿದೆ.

33. ಸುಧೀರ್ಘ ತನಿಖೆಯನ್ನು ನಡೆಸಿದ ನಂತರ ತನಿಖಾಧಿಕಾರಿಗೆ ಕೆಲವು ದಸ್ತಾವೇಜುಗಳನ್ನು ಸಲ್ಲಿಸಿದ್ದು, ಮುಖ್ಯ ಸಾಕ್ಷಿದಾರರ ವಿವರಣೆಗಳನ್ನು ದಾಖಲಿಸಲಾಗಿತ್ತು. ಮೆಸರ್ಸ್ ದೀಪಂ ಸಿಲ್ಕ್ಸ್ ಇಂಟರ್‌ನ್ಯಾಷನಲ್ ಬರೆದ ಪತ್ರಕ್ಕೆ ನಿರ್ದಿಷ್ಟ ಉಲ್ಲೇಖವನ್ನು ನೀಡಲಾಗಿದೆ. ಈ ಸಾಕ್ಷ್ಯಧಾರಗಳನ್ನು ಅವನು ಇಟ್ಟುಕೊಂಡ ಹೊರತು, ತನಿಖಾಧಿಕಾರಿಯು ಮುಖ್ಯ ಸಾಕ್ಷಿದಾರರ ವಿವರಣೆಗಳನ್ನು ದಾಖಲಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಮುಖ್ಯ ಸಾಕ್ಷಿದಾರರ ಸಾಕ್ಷ್ಯದಲ್ಲಿ ಗಂಭೀರ ವಿರೋಧಾಭಾಸಗಳು ಉದ್ಭವಿಸಿವೆ. ಈ ದೃಷ್ಟಿಕೋನಗಳನ್ನು ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಾಗ ಪರಿಗಣಿಸಿರುವುದಿಲ್ಲ.

34. ಮಾನ್ಯ ಹಿರಿಯ ವಕೀಲರಾದ ಶ್ರೀ ಪಿ.ಎಸ್. ರಾಜಗೋಪಾಲ್‌ರವರು ಸರಿಯಾಗಿ ಗುರುತಿಸಲಾದಂತೆ, ಪ್ರಾಸಿಕ್ಯೂಷನ್‌ನ ಜೆನೆಸಿಸ್ (ವಾದದಮೂಲ) ಸಂದೇಹಾಸ್ಪದವಾಗಿದೆ. ಅಲ್ಲದೆ ಸಂಭಾವ್ಯತೆಗಳ ಬಾಹುಳ್ಯದ ಮೂಲಕ ಮಾತ್ರ ಅವುಗಳನ್ನು ರುಜುವಾತುಪಡಿಸಿದ ಹೊರತು, ಆದರೆ, ಯುಕ್ತ ಸಂದೇಹವನ್ನು

2. ಎಐಆರ್ 1988 ಎಸ್‌ಸಿ 2154

ಮೀರಿ ರುಜುವಾತುಪಡಿಸುವ ಮೂಲಕ ಮಾಡಿದ ಆಪಾದನೆಗಳ ಗಂಭೀರತೆ ಮಾತ್ರ ಸಾಕಷ್ಟಿರುವುದಿಲ್ಲ. ಯುಕ್ತ ಎಲ್ಲಾ ಸಂದೇಹಗಳನ್ನು ಮೀರಿದ ರುಜುವಾತು ಯಾವುದು ಎಂಬುದನ್ನು ***ಉತ್ತರಪ್ರದೇಶ ರಾಜ್ಯ –ವಿರುದ್ಧ– ಕೃಷ್ಣಗೋಪಾಲ್ ಮತ್ತು ಮತ್ತೊಬ್ಬರು***[2], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸುಧೀರ್ಘವಾಗಿ ಚರ್ಚಿಸಿ, ಸರಿಯಾಗಿ ಪರಿಗಣನೆಯನ್ನು ಮಾಡಿದೆ.

35. ಪ್ರಾಸಿಕ್ಯೂಷನ್ನು ಮತ್ತು ಪ್ರಾಸಿಕ್ಯೂಷನ್‌ನ್ನು ಬೆಂಬಲಿಸದಿರುವ ಮುಖ್ಯ ಸಾಕ್ಷಿದಾರರ ವಾದದಿಂದ ಹೊರಹೊಮ್ಮಿರುವ ಈ ಎಲ್ಲಾ ಗಂಭೀರ ಅಸಂಗತೆಗಳನ್ನು ತೆಗೆದುಕೊಂಡು ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸುವುದನ್ನು ಸಮರ್ಥಿಸಿರುವುದಿಲ್ಲ. ಮತ್ತೊಂದು ಕಡೆ, ಸಂದೇಹದ ಪ್ರಯೋಜನವನ್ನು ಅವರಿಗೆ ನೀಡುವ ಮೂಲಕ ಅವರನ್ನು ಖುಲಾಸೆಗೊಳಿಸುವುದಕ್ಕೆ ಹಕ್ಕುಳ್ಳವರಾಗಿರುವರು. ತದನುಸಾರವಾಗಿ ವಿವಾದಾಂಶ ಸಂ.(1)ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

36. **ವಿವಾದಾಂಶ ಸಂ.(2)**: ವಿವಾದಾಂಶ ಸಂ.(1)ರ ನಕಾರಾತ್ಮಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಅಪೀಲನ್ನು ಒಟ್ಟಾರೆಯಾಗಿ ಪುರಸ್ಕರಿಸಬೇಕಾಗಿದ್ದು, ಆಪಾದಿತನನ್ನು ಅವನ ವಿರುದ್ಧ ಆಪಾದಿಸಲಾದ ಎಲ್ಲಾ ಅಪರಾಧಗಳನ್ನು ಖುಲಾಸೆಗೊಳಿಸಬೇಕಾಗುತ್ತದೆ. ಇದರ ಪರಿಣಾಮವಾಗಿ, ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ**

ಭಾರತ ದಂಡ ಸಂಹಿತೆಯ 374(2)ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು, XX1ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ವಿಶೇಷ ಸಿ.ಸಿ.ಸಂ.131/00 ಯಲ್ಲಿ ಹೊರಡಿಸಿದ ಅಪರಾಧ ನಿರ್ಣಯದ ಮತ್ತು

ಶಿಕ್ಷೆಯ ತೀರ್ಪನ್ನು ಮತ್ತು ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಧೀಶರು, ಬೆಂಗಳೂರು ಇವರು ಹೊರಡಿಸಿದ ತೀರ್ಪನ್ನು ತಳ್ಳಿಹಾಕುವ ಮೂಲಕ ಸಂಪೂರ್ಣವಾಗಿ ಪುರಸ್ಕರಿಸಲಾಗಿದೆ. ತದನುಸಾರವಾಗಿ, ಅವನ ವಿರುದ್ಧ ವಿಧಿಸಲಾದ ಎಲ್ಲಾ ಆರೋಪಗಳಿಂದ ಆಪಾದಿತನನ್ನು ಖುಲಾಸೆಗೊಳಿಸಲಾಗಿದೆ. ಆಪಾದಿತನಿಗೆ ನೀಡಿದ ಜಾಮೀನು ಬಂಧಪತ್ರಗಳನ್ನು ಮತ್ತು ಜಾಮೀನುಗಳನ್ನು ರದ್ದುಗೊಳಿಸಲಾಗಿದೆ.

37. ಅದನ್ನು ಬಿಟ್ಟುಕೊಡುವ ಮೊದಲು, ಭಾರತ ದಂಡ ಸಂಹಿತೆಯ 309ನೇ ಪ್ರಕರಣ ಮತ್ತು ಅಧಿವಿಚಾರಣೆಗಳನ್ನು ನಡೆಸುವಾಗ ಕ್ರಿಮಿನಲ್ ನ್ಯಾಯಾಲಯಗಳು ಅಳವಡಿಸಿಕೊಂಡ ಪ್ರಕ್ರಿಯೆಯನ್ನು ಎತ್ತಿಹಿಡಿಯುವುದು ಅಗತ್ಯವಾಗಿರುತ್ತದೆ. ಈ ಸಂಬಂಧದಲ್ಲಿ, 'ಅಧಿವಿಚಾರಣಾ ಪೂರ್ವ ಸಮ್ಮೇಳನ'ವನ್ನು ನಡೆಸಿದ್ದು, ಇದು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಪ್ರಮುಖ ವಿವಾದಾಂಶವನ್ನು ಆಧರಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯುವು ವಿಧಿಸಲಾದ ಸ್ಥೂಲ ಮಾರ್ಗಸೂಚಿಗಳನ್ನು, ಮುಂದಿನ ಪುಟಗಳಲ್ಲಿ ಚರ್ಚಿಸಲಾಗಿದೆ.

38. ಅಧಿವಿಚಾರಣಾ ನ್ಯಾಯಾಲಯ ದಾಖಲೆಗಳನ್ನು ಅವಗಾಹಿಸುವಾಗ, ನ್ಯಾಯಾಲಯವು, ವಿಶೇಷ ಸಿ.ಸಿ. 131/00 ರಲ್ಲಿ ನಿರ್ವಹಿಸಲಾದ ಆದೇಶ ಪಟ್ಟಿಯನ್ನು ನೋಡುವ ಅವಕಾಶವನ್ನು ಹೊಂದಿರುತ್ತದೆ. 13.06.2001 ರಂದು ಆರೋಪಗಳನ್ನು ರೂಪಿಸಿ, ಸಮನುಗಳನ್ನು ಸಾಕ್ಷಿದಾರರಿಗೆ ನೀಡಿದ್ದು, 27.06.2001 ರಲ್ಲಿ ಹಿಂದಿರುಗಿಸಲಾಗಿದೆ. ಪ್ರಾಸಿಕ್ಯೂಷನ್ನು ಅಧಿವಿಚಾರಣೆಯನ್ನು ದಿನಾಂಕ: 24.09.2004 ರಂದು ಮುಕ್ತಾಯಗೊಳಿಸಿದೆ, ಎಂದರೆ ಅಧಿವಿಚಾರಣೆ ಪ್ರಾರಂಭವಾದ 3 ವರ್ಷ 3 ತಿಂಗಳುಗಳ ನಂತರ ಮುಕ್ತಾಯಗೊಳಿಸಿದೆ. ದಿನಾಂಕ: 06.10.2004 ರಂದು ಭಾರತ ದಂಡ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಆಪಾದಿತನ ಸಾಕ್ಷ್ಯವನ್ನು ದಾಖಲಿಸಲು ಪ್ರಕರಣವನ್ನು ದಾಖಲುಮಾಡಲಾಗಿದೆ. ಹೇಳಿಕೆಗಳನ್ನು ದಾಖಲಿಸಲು ಲೆಕ್ಕವಿಲ್ಲದಷ್ಟು ಮುಂದೂಡುವಿಕೆಗಳನ್ನು ಮಾಡಲಾಗಿದ್ದು, ಅಂತಿಮವಾಗಿ ದಿನಾಂಕ: 30.09.2006 ರಂದು ಅಪರಾಧ ನಿರ್ಣಯಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

39. ಅಧಿವಿಚಾರಣೆಯನ್ನು ನಡೆಸುವಲ್ಲಿ ಆದ ಅತಿಯಾದ ವಿಳಂಬವನ್ನು ಗಮನಿಸಿ, ಈ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 309ನೇ ಪ್ರಕರಣದ ಉದ್ದೇಶವನ್ನು ಸಾಧಿಸುವ ಸಲುವಾಗಿ ದಿನದಿನವೂ ಅಧಿವಿಚಾರಣೆಯನ್ನು ನಡೆಸುವ ವಿಷಯದಲ್ಲಿ ರಾಜ್ಯದಲ್ಲಿರುವ ಎಲ್ಲಾ ಕ್ರಿಮಿನಲ್ ನ್ಯಾಯಾಲಯಗಳಿಗೆ ಕೆಲವು ಪರಿಣಾಮಕಾರಿ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿದೆಯೆಂದು ಅಭಿಪ್ರಾಯಪಟ್ಟಿದೆ.

## ಭಾರತ ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಪ್ರಕಾರ ಅನುದಿನವೂ ಅಧಿವಿಚಾರಣೆಯನ್ನು ನಡೆಸುವಲ್ಲಿ ಅಧಿವಿಚಾರಣಾ ಪೂರ್ವ ಅಧಿವೇಶನವನ್ನು ನಡೆಸುವುದರ ಮಹತ್ವ

40. ಭಾರತ ದಂಡ ಸಂಹಿತೆಯ 309ನೇ ಪ್ರಕರಣವನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

> ***309. ವ್ಯವಹರಣೆಗಳನ್ನು ಮುಂದೂಡುವ ಅಥವಾ ಮುಂದಕ್ಕೆ ಹಾಕುವ ಶಕ್ತಿ.*** *– (1) ಪ್ರತಿಯೊಂದು ವಿಚಾರಣೆ ಅಥವಾ ಆರೋಪ ವಿಚಾರಣೆಯಲ್ಲಿ, ವ್ಯವಹರಣೆಗಳನ್ನು, ಸಾಧ್ಯವಾದಷ್ಟು ಬೇಗನೆ ನಡೆಸತಕ್ಕದ್ದು, ಮತ್ತು ವಿಶೇಷವಾಗಿ ಸಾಕ್ಷಿಗಳ ವಿಚಾರಣೆಯು ಒಮ್ಮೆ ಪ್ರಾರಂಭವಾದರೆ ಹಾಜರಿರುವ ಎಲ್ಲ ಸಾಕ್ಷಿಗಳ ವಿಚಾರಣೆ ಮುಗಿಯುವವರೆಗೆ, ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಅದನ್ನು ಮಾರನೆಯ ದಿನದಿಂದಾಚೆಗೆ ಮುಂದಕ್ಕೆ ಹಾಕುವುದು ಅವಶ್ಯಕವೆಂದು ನ್ಯಾಯಾಲಯಕ್ಕೆ ಕಂಡು ಬಂದ ಹೊರತು, ಅದನ್ನು ಪ್ರತಿ ದಿನವೂ ಮುಂದುವರಿಸತಕ್ಕದ್ದು.*
>
> *ಪರಂತೂ, ವಿಚಾರಣೆ ಅಥವಾ ಅಧಿವಿಚಾರಣೆಯು, ಭಾರತೀಯ ದಂಡ ಸಂಹಿತೆಯ (1860ರ 45) 376ನೇ ಪ್ರಕರಣ, 376ಎ ಪ್ರಕರಣ, 376ಬಿ ಪ್ರಕರಣ, 376ಸಿ ಪ್ರಕರಣ ಅಥವಾ 376ಡಿ ಪ್ರಕರಣದ*

*ಮೇರೆಗಿನ ಅಪರಾಧಕ್ಕೆ ಸಂಬಂಧಪಡುವಾಗ, ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಆರೋಪ ಪಟ್ಟಿಯನ್ನು ಸಲ್ಲಿಸಿದ ದಿನಾಂಕದಿಂದ ಸಾಧ್ಯವಾದಷ್ಟು ಎರಡು ತಿಂಗಳುಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.*

*(2) ಅಪರಾಧವನ್ನು ಗಮನಿಸಿ ಕ್ರಮ ತೆಗೆದುಕೊಂಡ ತರುವಾಯ, ಅಥವಾ ಆರೋಪ ವಿಚಾರಣೆ ಪ್ರಾರಂಭವಾದ ತರುವಾಯ, ಯಾವುದೇ ವಿಚಾರಣೆ ಅಥವಾ ಆರೋಪ ವಿಚಾರಣೆಯ ಪ್ರಾರಂಭವನ್ನು ಮುಂದೂಡುವುದು ಅಥವಾ ಮುಂದಕ್ಕೆ ಹಾಕುವುದು ಅವಶ್ಯ ಅಥವಾ ಸೂಕ್ತವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ಅದು ಕಾಲಕಾಲಕ್ಕೆ ತಾನು ಸೂಕ್ತವೆಂದು ಆಲೋಚಿಸುವಂಥ ಕಾಲದವರೆಗೆ ಮತ್ತು ತಾನು ಸೂಕ್ತವೆಂದು ಮುಂದೂಡಬಹುದು ಅಥವಾ ಮುಂದಕ್ಕೆ ಹಾಕಬಹುದು ಮತ್ತು ಆಪಾದಿತನು ಅಭಿರಕ್ಷೆಯಲ್ಲಿದ್ದರೆ, ಅವನನ್ನು ವಾರೆಂಟಿನ ಮೂಲಕ ರಿಮ್ಯಾಂಡ್ ಮಾಡಬಹುದು;*

*ಪರಂತು, ಯಾವ ಮ್ಯಾಜಿಸ್ಟ್ರೇಟನು ಯಾರೇ ಆಪಾದಿತ ವ್ಯಕ್ತಿಯನ್ನು ಒಂದು ಬಾರಿಗೆ ಹದಿನೈದು ದಿನಗಳಿಗೆ ಮೀರಿದ ಅವಧಿಗೆ ಅಭಿರಕ್ಷೆಯಲ್ಲಿಡಲು ಈ ಪ್ರಕರಣದ ಮೇರೆಗೆ ರಿಮ್ಯಾಂಡ್ ಮಾಡತಕ್ಕದ್ದಲ್ಲ;*

*ಮತ್ತೂ ಪರಂತು, ಸಾಕ್ಷಿಗಳು ಹಾಜರಿದ್ದಾಗ, ಲಿಖಿತದಲ್ಲಿ ಅಭಿಲೇಖಿಸಬೇಕಾದ ವಿಶೇಷ ಕಾರಣಗಳಿಗಾಗಿ ಹೊರತು, ಅವರನ್ನು ವಿಚಾರಣೆ ಮಾಡದೆ ಮುಂದೂಡತಕ್ಕದ್ದಲ್ಲ ಅಥವಾ ಮುಂದಕ್ಕೆ ಹಾಕತಕ್ಕದ್ದಲ್ಲ;*

*ಅದೂ ಅಲ್ಲದೆ, ಅವರ ಮೇಲೆ ವಿಧಿಸಲು ಉದ್ದೇಶಿಸಿದ ಶಿಕ್ಷೆಯ ವಿರುದ್ಧ ಕಾರಣ ತೋರಿಸುವುದಕ್ಕೆ ಆಪಾದಿತ ವ್ಯಕ್ತಿಗೆ*

*ಅವಕಾಶ ಕೊಡುವ ಉದ್ದೇಶಕ್ಕಾಗಿ ಮಾತ್ರ ಯಾವುದೇ ಮುಂದೂಡಿಕೆಯನ್ನು ಕೊಡತಕ್ಕದ್ದಲ್ಲ.*

*(ಮತ್ತೂ ಪರಂತು,*

*ಆ ಪಕ್ಷಕಾರರ ನಿಯಂತ್ರಣವನ್ನು ಮೀರಿರುವ ಸನ್ನಿವೇಶಗಳಲ್ಲಿ, ಅದನ್ನು ಹೊರತುಪಡಿಸಿದ ಪಕ್ಷಕಾರರ ಮನವಿಗೆ ಮುಂದಕ್ಕೆ ಹಾಕತಕ್ಕದ್ದಲ್ಲ.*

*ವಾಸ್ತವವಾಗಿ, ಪಕ್ಷಕಾರರ ಪ್ಲೀಡರನು, ಮತ್ತೊಂದು ನ್ಯಾಯಾಲಯದಲ್ಲಿ ಕಾರ್ಯನಿರತನಾಗಿದ್ದರೆ, ಮುಂದಕ್ಕೆ ಹಾಕಲು ಈ ಸಂಗತಿಯು ಕಾರಣವಾಗತಕ್ಕದ್ದಲ್ಲ.*

*ಸಾಕ್ಷಿದಾರನು, ನ್ಯಾಯಾಲಯದಲ್ಲಿ ಹಾಜರಿದ್ದು, ಆದರೆ, ಪಕ್ಷಕಾರ ಅಥವಾ ಪ್ಲೀಡರನು ಹಾಜರಿರದಿದ್ದರೆ ಅಥವಾ ಪಕ್ಷಕಾರ ಅಥವಾ ಅವನ ಪ್ಲೀಡರು ಕೋರ್ಟ್‌ನಲ್ಲಿ ಹಾಜರಿದ್ದರೂ, ಸಾಕ್ಷಿದಾರನನ್ನು ವಿಚಾರಣೆ ಮಾಡಲು ಅಥವಾ ಪಾಟೀ ಸವಾಲು ನಡೆಸಲು ಸಿದ್ಧವಿರುವುದಿಲ್ಲ, ನ್ಯಾಯಾಲಯವು ಸಾಕ್ಷಿದಾರನನ್ನು ವಿಚಾರಣೆ ಮಾಡಲು ಅಥವಾ ಪಾಟೀ ಸವಾಲು ನಡೆಸಲು ಸಿದ್ಧವಾಗಿದ್ದರೆ, ನ್ಯಾಯಾಲಯವು, ಸೂಕ್ತವೆಂದು ಭಾವಿಸಿದರೆ, ಸಾಕ್ಷಿದಾರನ ಹೇಳಿಕೆಯನ್ನು ದಾಖಲಿಸಬಹುದು ಮತ್ತು ಸಂದರ್ಭಾನುಸಾರ ಸಾಕ್ಷಿದಾರನ ಮುಖ್ಯ ವಿಚಾರಣೆ ಅಥವಾ ಪಾಟೀ ಸವಾಲನ್ನು ಬಿಟ್ಟುಬಿಡುವುದು ಸೂಕ್ತವೆಂದು ಭಾವಿಸಿದರೆ ಅಂಥ ಆದೇಶಗಳನ್ನು ದಾಖಲಿಸಬಹುದು.*

***ವಿವರಣೆ 1:*** *ಆಪಾದಿತನು ಅಪರಾಧವನ್ನು ಮಾಡಿರಬಹುದೆಂದು ಸಂಶಯಪಡಲು ಸಾಕಷ್ಟು ಸಾಕ್ಷ್ಯವನ್ನು ಪಡೆದಿದ್ದರೆ ಮತ್ತು ರಿಮ್ಯಾಂಡ್ ಮಾಡುವುದರಿಂದ ಹೆಚ್ಚಿನ ಸಾಕ್ಷ್ಯವನ್ನು*

*ಪಡೆಯಬಹುದಾದ ಸಂಭವವಿದೆಯೆಂದು ಕಂಡು ಬಂದರೆ ರಿಮ್ಯಾಂಡ್ ಮಾಡಲು ಇದು ಯುಕ್ತವಾದ ಕಾರಣವಾಗುತ್ತದೆ.*

***ವಿವರಣೆ 2:*** *ಮುಂದಕ್ಕೆ ಹಾಕಲು ಅಥವಾ ಮುಂದೂಡಲು ಇರುವ ನಿಬಂಧನೆಗಳು ಸೂಕ್ತವಾದ ಸಂದರ್ಭಗಳಲ್ಲಿ ಪ್ರಾಸಿಕ್ಯೂಷನ್ ಅಥವಾ ಆಪಾದಿತರು ವೆಚ್ಚಗಳನ್ನು ಸಂದಾಯ ಮಾಡಬೇಕೆಂಬುದನ್ನು ಒಳಗೊಳ್ಳುತ್ತವೆ.*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಸಾಮಾನ್ಯ ಓದಿನಿಂದ ಕ್ರಿಮಿನಲ್ ನ್ಯಾಯಾಲಯವು, ಅನುದಿನದ ಆಧಾರದ ಮೇಲೆ ಅಧಿವಿಚಾರಣೆಯನ್ನು ನಡೆಸಲು ಮತ್ತು ತುಂಬಾ ಬೇಗನೆ ವಿಷಯವನ್ನು ವಿಲೇವಾರಿ ಮಾಡಬೇಕು ಎಂಬುದನ್ನು ಬಯಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಕ್ರಿಮಿನಲ್ ಕಾನೂನು (ತಿದ್ದುಪಡಿ) ಅಧಿನಿಯಮ, 2013ರ ಮೂಲಕ, (1)ನೇ ಉಪ–ಪ್ರಕರಣ ಮತ್ತು ಪರಂತುಕಗಳೆರಡನ್ನು ತಿಳಿಸಲಾಗಿದ್ದು, ಇದರಲ್ಲಿ ದಿನನಿತ್ಯದ ಆಧಾರದ ಮೇಲೆ ಅಧಿವಿಚಾರಣೆಯನ್ನು ನಡೆಸುವುದನ್ನು ಕಡ್ಡಾಯಗೊಳಿಸಿದ್ದು, ಅತ್ಯಗತ್ಯವಾಗಿದ್ದಾಗ ಮಾತ್ರ ದಾಖಲಿಸಬೇಕಾದ ಕಾರಣಗಳಿಗಾಗಿ ಮುಂದೂಡಲು ಅವಕಾಶ ನೀಡಬೇಕು. ಹೊಸ ಪರಂತುಕದ ಮೇರೆಗೆ ಅದರಲ್ಲಿ ನಮೂದಿಸಲಾದ ಅಪರಾಧಗಳಿಗೆ ಸಂಬಂಧಪಟ್ಟ ಅಧಿವಿಚಾರಣೆಯನ್ನು, ದೋಷಾರೋಪಪಟ್ಟಿಯನ್ನು ಸಲ್ಲಿಸಿದ ಎರಡು ತಿಂಗಳುಗಳೊಳಗೆ ಪೂರ್ಣಗೊಳಿಸಬೇಕು.

41. ***ಹುಸ್ಸೈನರ ಖಾಟೂನ್ –ವಿರುದ್ಧ– ಬಿಹಾರ ರಾಜ್ಯ***[3], ಪ್ರಕರಣದಲ್ಲಿ ಅಭಿಪ್ರಾಯಪಟ್ಟಿರುವಂತೆ ಯುಕ್ತವಾದ ತ್ವರಿತ ಅಧಿವಿಚಾರಣೆಯು, ಆಪಾದಿತನ ಮೂಲಭೂತ ಹಕ್ಕಾಗಿದ್ದು, ಇದನ್ನು ಭಾರತ ಸಂವಿಧಾನದ 21ನೇ ಅನುಚ್ಛೇದದಲ್ಲಿ ವಿವರಿಸಲಾಗಿದೆ. ***ಪಿ. ರಾಮಚಂದ್ರರಾವ್ –ವಿರುದ್ಧ– ಕರ್ನಾಟಕ ರಾಜ್ಯ***[4], ಮಾನ್ಯ

3. ಎಐಆರ್ 1979 ಎಸ್‌ಸಿ 1360

4. [2002]4 ಎಸ್‌ಸಿಸಿ 578

ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠವು, ಜಾಮೀನನ್ನು ತಿರಸ್ಕರಿಸಿದಾಗ, ಆಪಾದಿತನು ದೀರ್ಘಕಾಲ, ಸೆರೆಮನೆಯಲ್ಲಿರುವುದಿಲ್ಲ. ಆದರೆ ಇದು ಅತ್ಯವಶ್ಯಕವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಆದರೆ, ತ್ವರಿತಗತಿಯ ಅಧಿವಿಚಾರಣೆಯನ್ನು ತಿರಸ್ಕರಿಸಬೇಕಾಗಿದೆಯೇ ಎಂಬ ಪ್ರಶ್ನೆಯನ್ನು ನಿರ್ಧರಿಸುವಾಗ, ನ್ಯಾಯಾಲಯವು, ಆಪಾದಿತನೇ ಅಳವಡಿಸಿಕೊಂಡ ತಂತ್ರಗಳ ಕಾರಣದಿಂದ ವಿಳಂಬವಾಗಿತ್ತೇ ಅಥವಾ ನ್ಯಾಯಾಲಯಗಳಲ್ಲಾದ ದಟ್ಟಣೆಯಿಂದ ಆಗಿದೆಯೇ ಅಥವಾ ಪ್ರಾಸಿಕ್ಯೂಟರುಗಳ ಸಿಬ್ಬಂದಿ ಕೊರತೆಯ ಕಾರಣದಿಂದಾಗಿದೆಯೇ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಈ ನಡುವೆ ಸಾಕ್ಷಿದಾರರ ಪಾಟೀ–ಸವಾಲನ್ನು ಅದೇ ದಿನ ನಡೆಸಬೇಕು ಮತ್ತು ಆ ಉದ್ದೇಶಕ್ಕಾಗಿ ಪ್ರಕರಣವನ್ನು ಮುಂದೂಡುವುದು ಯುಕ್ತವಲ್ಲ. ಮುಂದೂಡುವಿಕೆಯನ್ನು ಮಾಡುತ್ತಿರುವಾಗಲೂ ಕೂಡ, ನ್ಯಾಯಾಲಯವು ಸರಿಯಾಗಿ ಗುರುತಿಸಲಾದ ತತ್ವಗಳ ಆಧಾರದ ಮೇಲೆ ನ್ಯಾಯಿಕವಾಗಿ ವಿವೇಚನೆಯನ್ನು ಚಲಾಯಿಸಬೇಕು.

42. ಸಾಕ್ಷಿದಾರನು ನ್ಯಾಯಾಲಯದಲ್ಲಿ ಹಾಜರಿದ್ದರೆ, ಅವನು/ಅವಳನ್ನು ಆ ದಿನದಂದೇ ವಿಚಾರಣೆ ಮಾಡಬೇಕು. ಹೆಚ್ಚಿನ ಸಾಕ್ಷಿದಾರರು ದುಬಾರಿ ವೆಚ್ಚದಲ್ಲಿ ಅನಾನುಕೂಲ ರೀತಿಯಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ತಮ್ಮ ವೃತ್ತಿಯನ್ನು ಬದಿಗಿಟ್ಟು, ಪ್ರಾಯಶಃ ಅವರು ಆದಾಯವನ್ನು ಕಳೆದುಕೊಂಡು ಹಾಜರಾಗುತ್ತಿದ್ದರು ಎಂಬುದನ್ನು ನ್ಯಾಯಾಲಯವು ತಿಳಿದುಕೊಳ್ಳಬೇಕು. ಹಲವಾರು ಪ್ರಕರಣಗಳಲ್ಲಿ ಪ್ರಯಾಣ ಭತ್ಯೆ ಮತ್ತು ಆಹಾರದ ಕನಿಷ್ಠ ಭತ್ಯೆಯನ್ನು ನ್ಯಾಯಾಲಯದಲ್ಲಿನ ಕೊರತೆ ಹಣದ ಕಾರಣದಿಂದ ನ್ಯಾಯಾಲಯವು ಸಂದಾಯ ಮಾಡುವುದಿಲ್ಲ. ಸಮನುಗಳ ಮೂಲಕ ಅಥವಾ ಇತರ ಪ್ರಕ್ರಿಯೆಯ ಮೂಲಕ ಮತ್ತು ಬೆಳಿಗ್ಗೆಯಿಂದ ಮನೆಯ ಬಾಗಿಲಿನಲ್ಲಿ ನಿಲ್ಲುವ ಮೂಲಕ. ಮತ್ತೊಂದು ದಿನಕ್ಕೆ ಪ್ರಕರಣವನ್ನು ಮುಂದೂಡಲಾಗಿದೆ ಎಂದು ಆಗ ಹೇಳಲಾಗಿದ್ದರೆ, ಅದು ಅವರಿಗೆ ಅನ್ಯಾಯ ಮಾಡಿದಂತೆ ಮತ್ತು ಅನಾನುಕೂಲವುಂಟು ಮಾಡಿದಂತಾಗುತ್ತದೆ. ಅವರು ಅವರ ವಾಗ್ದಾನದ ಕುರಿತು ಅವರು ಜೋರಾಗಿ ಮಾತನಾಡದಿರಬಹುದು ಆದರೆ ಇಕ್ಕಟ್ಟಿಗೆ ಸಿಲುಕುತ್ತಾರೆ. ಅಂಥ ಸಮಯದಲ್ಲಿ ಸಂಬಂಧಪಟ್ಟವರಿಗೆ ಶಾಪಹಾಕುತ್ತಾರೆ.

ಹಳ್ಳಿಗಾಡಿನ ಹೆಂಗಸನ್ನು, ಇನ್ನಾರ ಬಳಿಯೋ ಚಿಕ್ಕ ಮಗುವನ್ನು ಬಿಟ್ಟು ಅವಳ ಊರಿನಿಂದ 75–100 ಕಿ.ಮೀ.ವರೆಗೆ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಹೇಳಿ ಅವಳನ್ನು ವಿಚಾರಣೆ ಮಾಡದೆ ಹಿಂದಕ್ಕೆ ಕಳುಹಿಸಿದರೆ ಅವರಿಗೆ ದಿಕ್ಕುತೋಚದಂತಾಗುತ್ತದೆ.

43. ಸಾಕ್ಷಿದಾರನು ಅವನ/ಅವಳ ಸ್ವಂತ ಸ್ಥಳದಿಂದ ಸಂಬಂಧಪಟ್ಟ ನ್ಯಾಯಾಲಯಕ್ಕೆ ಬರಲು ಮತ್ತು ಹಿಂದಕ್ಕೆ ಹೋಗಲು ಸಾಕಷ್ಟು ಸಮಯವನ್ನು ತೆಗೆದುಕೊಂಡಿರುತ್ತದೆ. ಈ ಸಂಬಂಧದಲ್ಲಿ, ನ್ಯಾಯಾಲಯಗಳು, ಅವರನ್ನು ವಿಚಾರಣೆ ಮಾಡಲು ಗೊತ್ತುಪಡಿಸಿದ ದಿನದಂದು ಸಾಕ್ಷಿದಾರರು ಹಾಜರಾಗುವುದನ್ನು ನಿಶ್ಚಿತಗೊಳಿಸಬೇಕು ಮತ್ತು ನೈಜವಾದ ಮತ್ತು ತಪ್ಪಿಸಲು ಸಾಧ್ಯವಾಗದ ಸನ್ನಿವೇಶಗಳನ್ನು ಹೊರತುಪಡಿಸಿದರೆ, ವಿಚಾರಣೆ ಮಾಡದೇ ಅವರನ್ನು ಹಿಂತಿರುಗಿಸಬಾರದು. ***ಉತ್ತರಪ್ರದೇಶ ರಾಜ್ಯ –ವಿರುದ್ಧ– ಶಂಭು ನಾಥ್ ಸಿಂಗ್*** [7], ಪ್ರಕರಣದಲ್ಲಿ, ಅಂಥ ಮೂಲ ಆಚರಣೆಯನ್ನು ಪ್ರತಿಯೊಬ್ಬರೂ ಸುಧಾರಣೆ ಮಾಡಬೇಕು, ಸಂಬಂಧಪಟ್ಟ ಪೀಠಾಸೀನ ಅಧಿಕಾರಿಯು ಕರ್ತವ್ಯದ ಸಂಬಂಧದಲ್ಲಿ ಬದ್ಧತೆ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟಿದೆ.

44. ಬೆಂಥಮ್ ಅಭಿಪ್ರಾಯಪಟ್ಟಿರುವಂತೆ, ಸಾಕ್ಷಿದಾರರು ನ್ಯಾಯಾಲಯದ ಕಣ್ಣು ಮತ್ತು ಕಿವಿಗಳಾಗಿರುತ್ತಾರೆ. ಅವರು ಸತ್ಯವನ್ನು ಶೋಧಿಸಲು ನ್ಯಾಯಾಲಯಕ್ಕೆ ನೆರವಾಗುತ್ತಾರೆ. ಇದು ಕ್ರಿಮಿನಲ್ ಪ್ರಕರಣದ ಅಧಿವಿಚಾರಣೆಯು, ಸತ್ಯದ ಅನ್ವೇಷಣೆಯನ್ನು ಮಾಡುತ್ತಾ ಕ್ರಮಿಸುವುದಾಗಿದೆ ಮತ್ತು ಸಾಕ್ಷಿದಾರರ ಸಹಾಯವಿಲ್ಲದೆ ಅನ್ವೇಷಣೆ ಮಾಡಲಾಗುವುದಿಲ್ಲ. ಸದೃಶವಾಗಿ ಮುಖ್ಯ ವಿಚಾರಣೆಯನ್ನು ಒಂದುದಿನ ಪಾಟೀ–ಸವಾಲನ್ನು ಮಾರನೇ ದಿನ ಅಥವಾ ಇನ್ನೊಂದು ದಿನಕ್ಕೆ ಬರಲು ಹೇಳಿದರೆ, ಅವರಿಗೆ ಬೆದರಿಕೆ ಒಡ್ಡಿ ಅಥವಾ ಆಮಿಷತೋರಿಸಿ ಅವರನ್ನು ಗೆಲ್ಲುವ ಅವಕಾಶವನ್ನು ತಳ್ಳಿಹಾಕದೆ ಇರಲಾಗುವುದಿಲ್ಲ. ಕ್ರಿಮಿನಲ್ ಪ್ರಕರಣಗಳಲ್ಲಿ, ಬೆದರಿಕೆ ಒಡ್ಡುವ

5. [2010]4 ಎಸ್‌ಸಿಸಿ 667

6. [2015]3 ಎಸ್‌ಸಿಸಿ 220

7. [2013]7 ಎಸ್‌ಸಿಸಿ 108

ಮೂಲಕವಾಗಲಿ ಅಥವಾ ಸಾಕ್ಷಿದಾರರಿಗೆ ಆಮಿಷ ಒಡ್ಡುವ ಮೂಲಕವಾಗಲಿ ಅಥವಾ ಅವರನ್ನು ಗೆಲ್ಲುವ ಮೂಲಕವಾಗಲಿ ಅಂಥ ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬ ಸಂಗತಿಗಳು ಅಪರೂಪವೇನಲ್ಲ. ಇಂಥವು ನಡೆಯುವುದಕ್ಕೆ ಅವಕಾಶ ಕೊಟ್ಟರೆ ನ್ಯಾಯವನ್ನು ಅಣಕಿಸಿದಂತಾಗುತ್ತದೆ.

45. ಈ ಸಂಬಂಧದಲ್ಲಿ, ***ವಿನೋದ್ ಕುಮಾರ್ –ವಿರುದ್ಧ– ಪಂಜಾಬ್ ರಾಜ್ಯ***[6], ಪ್ರಕರಣದಲ್ಲಿ ನೀಡಲಾದ ತೀರ್ಮಾನ ಇದಕ್ಕೆ ಸಂಬಂಧಪಡುತ್ತದೆ. ಅಧಿವಿಚಾರಣೆಯನ್ನು ನಡೆಸುವಾಗ ಸಮನು ಮಾಡುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ ಮತ್ತು ಸರ್ವೋಚ್ಚ ನ್ಯಾಯಾಲಯವು ಅಗತ್ಯ ನಿರ್ದೇಶನಗಳನ್ನು ನೀಡುತ್ತದೆ, ಹಾಗೆಯೇ ತ್ವರಿತ ಗತಿಯ ಅಧಿವಿಚಾರಣೆಯ ಉದ್ದೇಶವನ್ನು ಈಡೇರಿಸಲು ಸದರಿ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ***ಗುರ್‌ನಾಯಿಬ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ***[7], ಪ್ರಕರಣದಲ್ಲಿ ನೀಡಲಾದ ನಿರ್ಣಯವು ***ವಿನೋದ್ ಕುಮಾರ್*** ಪ್ರಕರಣವನ್ನು ಅವಲಂಬಿಸಿದೆ. ಗುರ್‌ನಾಯಿಬ್ ಸಿಂಗ್‌ರವರ ಪ್ರಕರಣದಲ್ಲಿ ನೀಡಲಾದ ನಿರ್ಣಯದ 26ನೇ ಕಂಡಿಕೆಯನ್ನು, ***ವಿನೋದ್ ಕುಮಾರ್***ರವರ ಪ್ರಕರಣದ ಕಂಡಿಕೆಗೆ ಉಲ್ಲೇಖಿಸಲಾಗಿದೆ. ಅದು ಈ ಮುಂದಿನಂತಿರುತ್ತದೆ.

> *4. ಹಿಂದೆ ಹೇಳಲಾದ ಸಂದರ್ಭದಲ್ಲಿ, ಗುಮೇಬ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ: (ಎಸ್‌ಸಿಸಿ ಪಿ.121, ಕಂಡಿಕೆ 26) ಪ್ರಕರಣ ಒಂದು ಭಾಗವನ್ನು ಪುನರುಚ್ಚರಿಸಲಾಗಿದೆ.*
>
> *‘‘26. ... ನಾವು ಕಾನೂನನ್ನು ಪುನರುಚ್ಚರಿಸಲು ಒತ್ತಾಯಪಡಿಸುತ್ತೇವೆ ಮತ್ತು ತುಂಬಾ ಅಡ್ಡಿ ಉಂಟುಮಾಡಿರುವ ದೃಶ್ಯಾವಳಿಯನ್ನು ಚಿತ್ರಿಸಲಾದಂತೆ ಯಾವ ರೀತಿಯಲ್ಲಿ ಅಧಿವಿಚಾರಣೆಯನ್ನು ನಡೆಸಲಾಗಿತ್ತೋ ಆ ರೀತಿಗೆ ಸಂಬಂಧಪಟ್ಟಂತೆ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತೇವೆ. ದಾಖಲೆಯಿಂದ ಕಂಡುಬರುವಂತೆ, ಆ ಅಧಿವಿಚಾರಣೆಯನ್ನು ಅತಿಯಾದ*

*ಅವ್ಯವಸ್ಥೆಯಿಂದ ನಡೆಸಲಾಗಿತ್ತು ಮತ್ತು ಕ್ರಮಬದ್ಧತೆಯಿರಲಿಲ್ಲ. ಕೇಳಿದ ಮಾತ್ರಕ್ಕೆ ಮುಂದೂಡುವಿಕೆ ಮಾಡಲಾಗಿತ್ತು. ಸಾಕ್ಷಿದಾರರ ಪಾಟೀ–ಸವಾಲನ್ನು, ಯಾವುದೇ ವಿಶೇಷ ಕಾರಣಗಳನ್ನು ದಾಖಲುಮಾಡದೆ ಮುಂದೂಡಲಾಗಿತ್ತು, ತುಂಬಾ ಅಂತರದ ನಂತರ ದಿನಾಂಕಗಳನ್ನು ನೀಡಲಾಗಿತ್ತು. ಕಾನೂನಿನ ಆಜ್ಞಾಪಕ ಮತ್ತು ಕಾಲಕಾಲಕ್ಕೆ ನ್ಯಾಯಾಲಯವು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯವನ್ನು ಸಂಪೂರ್ಣವಾಗಿ ಇಕ್ಕಟ್ಟಿನಲ್ಲಿಡುವುದು ಕಂಡುಬಂದಿತ್ತು. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಗ್ರಹಿಸಲಾದಂತೆ ಅದು ಅದರ ಪ್ರಾಮುಖ್ಯತೆ ಮತ್ತು ಪವಿತ್ರತೆಯನ್ನು ಹೊಂದಿದೆ. ಈ ಸಂಬಂಧದಲ್ಲಿ ತಲಾಬ್ ಹಾಜಿ ಹುಸೇನ್ –ವಿರುದ್ಧ– ಮಧುಕರ್ ಪುರುಷೋತ್ತಮ್ ಮೊಂಡಕರ್ ಪ್ರಕರಣದಲ್ಲಿ ಉದ್ಘೋಷಣೆಯ ಲಾಭವನ್ನು ಉಲ್ಲೇಖಿಸಬಹುದಾಗಿದ್ದು, ಇಲ್ಲಿ, ಸರಿಯಾದ ಅಧಿವಿಚಾರಣೆಗೆ ಬರುವ ಗಂಡಾಂತರವನ್ನು ತೊಡೆದುಹಾಕುವುದನ್ನು ಮತ್ತು ಯಾವುದೇ ಅಡತಡೆಯಿಲ್ಲದೆ ಅಥವಾ ಅಡ್ಡಿಗಳಿಲ್ಲದೆ ಸುಗಮವಾಗಿ ಅಧಿವಿಚಾರಣೆಗಳನ್ನು ನಡೆಸಲು ಅವಕಾಶ ನೀಡಲಾಗಿದೆಯೆಂಬುದನ್ನು ಖಚಿತಪಡಿಸುವುದು ಕ್ರಿಮಿನಲ್ ನ್ಯಾಯಾಲಯಗಳ ಆದ್ಯ ಮತ್ತು ಪ್ರಮುಖ ಕರ್ತವ್ಯವಾಗಿರುತ್ತದೆ. ಇದಕ್ಕಾಗಿ, ತನ್ನ ನಡವಳಿಕೆಯ ಮೂಲಕ ಆಪಾದಿತ ವ್ಯಕ್ತಿಯು ಗಂಡಾಂತರದಲ್ಲಿ ಸಿಲುಕಿಕೊಂಡು ಸರಿಯಾದ ಅಧಿವಿಚಾರಣೆಯನ್ನು ಮಾಡಲಾಗುವುದಿಲ್ಲವೆಂಬುದನ್ನು ತಿಳಿಸಲಾಗಿದೆ.*

46. ***ಸ್ವರಣ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ***[8], ಪ್ರಕರಣದಲ್ಲಿ ನೀಡಲಾದ ನಿರ್ಣಯವು, ***ವಿನೋದ್ ಕುಮಾರ್***ರವರ ಪ್ರಕರಣವನ್ನು ಅವಲಂಬಿಸಿದ್ದು, ಸದರಿ ಪ್ರಕರಣದಲ್ಲಿರುವ 28ನೇ ಕಂಡಿಕೆಯನ್ನು ವಿನೋದ್ ಕುಮಾರ್‌ರವರ ಪ್ರಕರಣದ 5ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿದ್ದು, ಅದು ಈ ಮುಂದಿನಂತಿರುತ್ತದೆ:

8. (2000) 5 ಎಸ್‌ಸಿಸಿ 668

*5. ಸದರಿ ಪ್ರಕರಣದಲ್ಲಿ, ಇದನ್ನು ಟಿಪ್ಪಣಿಮಾಡಿದ್ದು, ಸ್ವರಣ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ ಪ್ರಕರಣದಿಂದ ಮುಂದಿನ ಭಾಗವನ್ನು ಮತ್ತೆ ನೀಡಲಾಗಿದೆ: (ಗುರ್‌ನಾಯಿಬ್ ಸಿಂಗ್ ಪ್ರಕರಣ ಎಸ್‌ಸಿಸಿ.ಪಿ.ಪಿ.121–22 ಕಂಡಿಕೆ 28)*

*"28. ... "36 ... ಸಾಕ್ಷಿದಾರರಿಗೆ ತಾಳ್ಮೆ ಕೆಡುವವರೆಗೆ ಮತ್ತು ಅದನ್ನು ಬಿಟ್ಟುಬಿಡುವವರೆಗೆ ಕ್ರಿಮಿನಲ್ ಪ್ರಕರಣವನ್ನು ಮತ್ತೆ ಮತ್ತೆ ಮುಂದೂಡುವುದು ಹೆಚ್ಚೂ ಕಡಿಮೆ ಫ್ಯಾಷನ್ ಆಗಿ ಪರಿಣಮಿಸಿದೆ. ಸಾಕ್ಷಿದಾರನನ್ನು ಗೆಲ್ಲುವವರೆಗೆ ಅಥವಾ ಅವರಿಗೆ ದಣಿವಾಗುವವರೆಗೆ ಒಂದು ಅಥವಾ ಇನ್ನೊಂದು ನೆಪದಿಂದ ಮುಂದೂಡುವಿಕೆಗಳನ್ನು ಮಾಡುವುದು ನೀತಿಗೆಟ್ಟ ವಕೀಲರ ಆಟವಾಗಿದೆ. ಸಾಕ್ಷಿದಾರರನ್ನು ಹೆದರಿಸುವುದಷ್ಟೇ ಅಲ್ಲ, ಅವನನ್ನು ಅಪಹರಿಸುವುದು, ನಿರ್ವೀಯರನ್ನಾಗಿ ಮಾಡುವುದು, ಹೋಗುವಂತೆ ಮಾಡುವುದು, ಲಂಚ ನೀಡುವುದನ್ನೂ ಸಹ ಮಾಡಲಾಗುತ್ತದೆ. ಅವನಿಗೆ ಯಾವುದೇ ರಕ್ಷಣೆಯಿರುವುದಿಲ್ಲ. ಯಾವುದೇ ಸಿಂಧುವಾದ ಕಾರಣವಿಲ್ಲದೆ ವಿಷಯವನ್ನು ಮುಂದೂಡುವಲ್ಲಿ ಪಕ್ಷಕಾರನಿಗೆ ನ್ಯಾಯವಿಫಲಗೊಳಿಸಲು ಉದ್ದೇಶವಿಲ್ಲದೆ. ಇವು ಕಾರಣವಾಗುತ್ತವೆ."*

47. ***ಶಂಭುನಾಥ್ ಸಿಂಗ್ (ಮೇಲಿನ)*** ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿಚಾರಣೆ ಮಾಡದೆ ಹಿಂದಕ್ಕೆ ಕಳುಹಿಸಿದ ಸಾಕ್ಷಿದಾರರ ಅವಸ್ಥೆಯ ಬಗ್ಗೆ ಸ್ಪಷ್ಟವಾಗಿ ಅಭಿಪ್ರಾಯವ್ಯಕ್ತಪಡಿಸಿದೆ. ಸದರಿ ನಿರ್ಣಯವನ್ನು 6ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿದ್ದು ***ವಿನೋದ್ ಕುಮಾರ್***ರವರ ಪ್ರಕರಣವನ್ನು ಅವಲಂಬಿಸಿದೆ ಮತ್ತು ಅದು ಇದಕ್ಕೆ ಸಂಬಂಧಪಟ್ಟಿರುವುದರಿಂದ ಈ ಕೆಳಗೆ ಉಲ್ಲೇಖಿಸಲಾಗಿದೆ:–

*6. ಈ ಸಂಬಂಧದಲ್ಲಿ ಉತ್ತರಪ್ರದೇಶ ರಾಜ್ಯ –ವಿರುದ್ಧ– ಶಂಭುನಾಥ್ ಸಿಂಗ್ ಪ್ರಕರಣದಲ್ಲಿ ಪ್ರಾಧಿಕಾರಕ್ಕೆ ಉಲ್ಲೇಖಿಸುವುದೂ*

*ಕೂಡ ಫಲಪ್ರದವಾಗಿದ್ದು, ಇದರಲ್ಲಿ, ಈ ನ್ಯಾಯಾಲಯವು, ವಿಚಾರಣೆಗೆ ಸಂಪೂರ್ಣವಾಗಿ ಒಪ್ಪಿಕೊಂಡಿರುವ ಸಾಕ್ಷಿದಾರರು ಹಾಜರಾಗಿದ್ದರೂ ಪ್ರಕರಣವನ್ನು ಮುಂದೂಡಿರುವ ಸೆಷನ್ಸ್ ನ್ಯಾಯಾಲಯದ ಪದ್ಧತಿಯ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದ್ದು, ಹೀಗೆ ಅಭಿಪ್ರಾಯಪಟ್ಟಿದೆ (ಶಂಭುನಾಥ್ ಸಿಂಗ್ ಪ್ರಕರಣ. ಎಸ್‌ಸಿಸಿ 99.671–72, ಕಂಡಿಕೆ 9)*

*"9. ಸಾಕ್ಷಿದಾರನು ನ್ಯಾಯಾಲಯದಲ್ಲಿ ಹಾಜರಿದ್ದರೆ, ಅವನನ್ನು ಅದೇ ದಿನದಂದು ವಿಚಾರಣೆ ಮಾಡಲೇಬೇಕು ಎಂಬುದನ್ನು ನಾವು ಹೆಚ್ಚು ಸ್ಪಷ್ಟಪಡಿಸುತ್ತೇವೆ. ಸಾಕ್ಷಿದಾರರು ತಮ್ಮ ಸ್ವಂತ ಕಸುಬನ್ನು ಬಿಟ್ಟು ನ್ಯಾಯಾಲಯಕ್ಕಷ್ಟೆ ಹಾಜರಾಗುವುದು ಅವರಿಗೆ ಅತೀ ದುಬಾರಿ ವೆಚ್ಚದ ಕಾರ್ಯವಾಗುತ್ತದೆ. ಖಂಡಿತವಾಗಿ ಅವರು, ಸಂಕಟಕ್ಕೀಡಾಗಿ, ಆದಾಯದ ನಷ್ಟವನ್ನು ಅನುಭವಿಸುತ್ತಾರೆಂಬುದನ್ನು ನ್ಯಾಯಾಲಯವು ಅರಿತುಕೊಳ್ಳಲೇ ಬೇಕು. ನ್ಯಾಯಾಲಯವು ಸಾಕ್ಷಿದಾರನಿಗೆ ನೀಡಬಹುದಾಗಿರುವ ಭಾಟ್ಟಾ (ಭತ್ಯೆ)ದ ಅತ್ಯಲ್ಪ ಮೊತ್ತವು, ಸಾಮಾನ್ಯವಾಗಿ ಅವನು ಭರಿಸುವ ಆರ್ಥಿಕ ನಷ್ಟಕ್ಕೆ ಅತೀ ಕಡಿಮೆ ಪರಿಹಾರವಾಗಿರುತ್ತದೆ. ಸಮನುಗಳ ಮೂಲಕ ಅಥವಾ ಇತರ ಪ್ರಕ್ರಿಯೆಗಳ ಮೂಲಕ ಕರೆಯಲಾಗುವ ಸಾಕ್ಷಿದಾರರು, ಬೆಳಿಗ್ಗೆಯಿಂದ ದಿನದ ಸಂಜೆಯವರೆಗೆ ಬಾಗಿಲಲ್ಲಿ ನಿಂತಿದ್ದು, ದಿನದ ಕಡೆಯಲ್ಲಿ ಪ್ರಕರಣವನ್ನು ಮತ್ತೊಂದು ದಿನಕ್ಕೆ ಮುಂದೂಡಲಾಗಿದೆ ಎಂಬುದನ್ನು ಕೇಳಿಸಿಕೊಳ್ಳುವುದು ಅಧಿವಿಚಾರಣಾ ನ್ಯಾಯಾಲಯದಲ್ಲಿ ದುರವಸ್ಥೆಯಾಗಿರುತ್ತದೆ. ಈ ಅನಾಗರಿಕ ಪದ್ಧತಿಯನ್ನು ಅಧಿವಿಚಾರಣಾ ನ್ಯಾಯಾಲಯಗಳ ಪೀಠಾಸೀನ ಅಧಿಕಾರಿಗಳು ಸುಧಾರಿಸಲೇಬೇಕಾಗಿದ್ದು, ಸಂಬಂಧಪಟ್ಟ ವ್ಯವಸ್ಥೆಮಾಡಲಾದ ಪ್ರತಿಯೊಬ್ಬರು ಇದನ್ನು ಸುಧಾರಿಸಿಕೊಳ್ಳಬಹುದಾಗಿದ್ದು, ಕರ್ತವ್ಯಕ್ಕೆ ಸಂಬಂಧಿಸಿದ ಬದ್ಧತೆಯನ್ನು ಹೊಂದಬೇಕು."*

48. ಮೇಲಿನ ನಿರ್ಣಯಗಳಲ್ಲಿ ಒತ್ತಿಹೇಳಲಾದ ತತ್ವಗಳನ್ನು ಪುನರುಚ್ಚರಿಸುತ್ತಾ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಎಲ್ಲಾ ಕ್ರಿಮಿನಲ್ ನ್ಯಾಯಾಲಯಗಳಿಗೆ ಈ ಆಜ್ಞೆಯನ್ನು ಎಚ್ಚರಿಕೆಯಿಂದ ಪಾಲಿಸುವಂತೆ ಮಾರ್ಗದರ್ಶನ ನೀಡಿದೆ. ***ವಿನೋದ್ ಕುಮಾರ್‌ರ***ವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳು 57.4 ಮತ್ತು 57.5ನೇ ಕಂಡಿಕೆಯಲ್ಲಿ ಇದ್ದು ಅವುಗಳನ್ನು ಈ ಮುಂದೆ ನೀಡಲಾಗಿದ್ದು, ಹಾಗೆಯೇ ಆ ನಿರ್ದೇಶನಗಳನ್ನು ಭಾರತ ಸಂವಿಧಾನದ 141ನೇ ಅನುಚ್ಛೇದದ ಮೇರೆಗೆ ಎಲ್ಲಾ ನ್ಯಾಯಾಲಯಗಳ ಮೇಲೆ ಹೇರಿದ್ದು, 57.4 ಮತ್ತು 57.5ನೇ ಕಂಡಿಕೆಗಳನ್ನು ಈ ಮುಂದೆ ಮತ್ತೆ ನೀಡಲಾಗಿದೆ:–

> ***57.4*** *ವಾಸ್ತವವಾಗಿ, ಅಂಥ ದೀರ್ಘಾವಧಿಯ ನಂತರ ಪಾಟೀ–ಸವಾಲಿಗಾಗಿ ಸಾಕ್ಷಿದಾರರನ್ನು ಕರೆಯುವುದು ಯಾವುದೇ ರೀತಿಯಲ್ಲೂ ಗಣನಾರ್ಹವಲ್ಲ, ಮುಖ್ಯ ವಿಚಾರಣೆಯು ಮುಗಿದಿದ್ದರೆ, ಅದೇ ದಿನದಂದು ವಿಚಾರಣೆಯನ್ನು ಮುಕ್ತಾಯಗೊಳಿಸಬೇಕು ಎಂಬುದು ಕಡ್ಡಾಯವಾಗಿರುತ್ತದೆ. ಸಾಕ್ಷಿದಾರನ ವಿಚಾರಣೆಯು ತಡಗಂಟೆಗಳವರೆಗೆ ಮುಂದುವರಿದರೆ, ಪಾಟೀ–ಸವಾಲಿಗಾಗಿ ಮಾರನೇ ದಿನಕ್ಕೆ ಅಧಿವಿಚಾರಣೆಯನ್ನು ಮುಂದೂಡಬಹುದು. ಪಾಟೀ–ಸವಾಲನ್ನು ಅಷ್ಟು ದೀರ್ಘಕಾಲಕ್ಕೆ ಮುಂದೂಡಬೇಕೆಂಬುದನ್ನು ಕಾನೂನಿನಲ್ಲಿ ಊಹಿಸಲೂ ಅಸದಳ. ಇದನ್ನು ಯುಕ್ತ ಮತ್ತು ಸರಿಯಾದ ಅಧಿವಿಚಾರಣೆಯ ಪರಿಕಲ್ಪನೆಗೆ ಮೀಸಲಿರಿಸಲಾಗಿದೆ.*

> ***57.5*** *ನ್ಯಾಯಾಲಯದ ಕರ್ತವ್ಯ, ಕಾನೂನಿನ ಪ್ರಕಾರ ಆಪಾದಿತನ ಹಿತಾಸಕ್ತಿ ಕಾಯ್ದುಕೊಳ್ಳುವಷ್ಟೇ ಅಲ್ಲ, ಸಾಮಾಜಿಕ ಮತ್ತು ಸಾಮೂಹಿಕ ಹಿತಾಸಕ್ತಿ ಸಂರಕ್ಷಿಸುವುದೂ ಕೂಡ ಆಗಿರುತ್ತದೆ. ಈ ನ್ಯಾಯಾಲಯದ ಸರಣಿ ತೀರ್ಪುಗಳಿದ್ದರೂ ಮುಂದೂಡುವ ಚಾಳಿಯು, ವಾಸ್ತವವಾಗಿ, ಈ ಜಾಡ್ಯ ಮುಂದುವರಿಯುತ್ತಿದೆಯೆಂಬುದನ್ನು ತಿಳಿಸುವುದು ಖೇದವುಂಟು ಮಾಡುವ ವಿಷಯವಾಗಿದೆ. ಎಷ್ಟು ದೀರ್ಘಕಾಲದಿಂದ*

*ನಾವು "ಏಳಿ ಎದ್ದೇಳಿ" ಎಂದು ಎಚ್ಚರಿಸುತ್ತಿದ್ದೇವೆ. ನಿರಂತರವಾಗಿ ಕಸಿವಿಸಿಯಾಗುತ್ತಲೇ ಇದೆ. ಆದುದರಿಂದ ತೀರ್ಪಿನ ಪ್ರತಿಗಳನ್ನು ಮನವಿಯ ರೀತಿಯಲ್ಲಿ ಅಧಿವಿಚಾರಣೆಗೆ ಸಂಬಂಧಪಟ್ಟ ತತ್ವಗಳನ್ನು ಪಾಲಿಸಲು ಮತ್ತು ಅಗತ್ಯ ರೀತಿಯಲ್ಲಿ ಅಧಿವಿಚಾರಣೆಗೆ ಸಂಬಂಧಪಟ್ಟ ಪಾಟೀ–ಸವಾಲನ್ನು ಮುಂದೂಡದಿರುವಂತೆ ಮತ್ತು ಅವರ ಇಚ್ಛೆಯಂತೆ ಅಥವಾ ಪ್ರತಿವಾದಿ ವಕೀಲರ ಬಿಡುವಿನ ವೇಳೆಗೆ ಪಾಟೀ–ಸವಾಲನ್ನು ಮುಂದೂಡಬಾರದೆಂದು ಆಜ್ಞಾಪಿಸಿ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರಿಗೆ ಇವುಗಳನ್ನು ಪಸರಿಸಲು ಎಲ್ಲಾ ಉಚ್ಚ ನ್ಯಾಯಾಲಯಗಳ ಮಾನ್ಯ ಮುಖ್ಯ ನ್ಯಾಯಮೂರ್ತಿಗಳಿಗೆ ಕಳುಹಿಸಲು ಚಿಂತನೆ ನಡೆಸಿದ್ದು, ಇದರಿಂದಾಗಿ, ಕಟ್ಟಕಡಗೆ ಅಧಿವಿಚಾರಣೆಗಾಗಿ ಕ್ಷಮೆ ಕೋರುವ ಅಧಿವಿಚಾರಣೆಯನ್ನು ಮಾಡುವಂತಾಗುತ್ತದೆ ಮತ್ತು ಇಡೀ ಸಮಾಜ ಕಾನೂನಿನ ಕುಯುಕ್ತಿಗೆ ಸಿಲುಕುವಂತಾಗುತ್ತದೆ. ಕಾನೂನು ಏಕಾಕಿಯಾಗಿರಲು ಸಾಧ್ಯವಿಲ್ಲ; ಅದು ಅನಾಥವಾಗುತ್ತದೆ ಎಂಬುದು ನೆನಪಿನಲ್ಲಿರಲಿ.*

***ವಿನೋದ್ ಕುಮಾರ್*** ಪ್ರಕರಣದಲ್ಲಿ ನೀಡಲಾದ ಈ ನಿರ್ದೇಶನಗಳ ಹಿನ್ನೆಲೆಯಲ್ಲಿ, ಅಂಥ ಷರತ್ತಿನ ಯಾವುದೇ ಉಲ್ಲಂಘನೆಯು, ನ್ಯಾಯಾಲಯ ನಿಂದನೆಯಲ್ಲದೆ ಬೇರೇನೂ ಅಲ್ಲ. ಹೀಗಾಗಿ, ದಂಡ ಪಕ್ರಿಯಾ ಸಂಹಿತೆಯ 309ನೇ ಪ್ರಕರಣದ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗುವ ಎಲ್ಲಾ ಕ್ರಮಗಳನ್ನು ಕ್ರಿಮಿನಲ್ ನ್ಯಾಯಾಲಯಗಳು ಕೈಗೊಳ್ಳಬೇಕಾಗುತ್ತದೆ. ವಾಸ್ತವವಾಗಿ, ***ಅಕಿಲ್ –ವಿರುದ್ಧ– ರಾಜ್ಯ (ಎನ್‌ಸಿಟಿ ಡೆಲ್ಲಿ)***[9] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಬದ್ಧತೆಯನ್ನು ಎಂದರೆ, ಕ್ರಿಮಿನಲ್ ಅಧಿವಿಚಾರಣೆಯನ್ನು ನಡೆಸುವ ನ್ಯಾಯಾಧೀಶರನ್ನು ಅಪೇಕ್ಷಿಸುವುದನ್ನು ಒತ್ತಿ ಹೇಳಿದೆ. ***ಉತ್ತರಪ್ರದೇಶ ರಾಜ್ಯ –ವಿರುದ್ಧ– ಶಂಭುನಾಥ್ ಸಿಂಗ್ ಮೇಲಿನ*** ಪ್ರಕರಣದ ನಿರ್ಣಯದಲ್ಲಿ ನಂಬಿಕೆಯಯಿಟ್ಟಿದೆ. ಸದರಿ ಪ್ರಕರಣದಲ್ಲಿ

9. 2013 (7) ಎಸ್‌ಸಿಸಿ 125

ನಿರ್ಣಯದ 8ನೇ ಕಂಡಿಕೆಯನ್ನು ಉಲ್ಲೇಖಿಸಲಾಗಿದ್ದು, ಇದಕ್ಕೆ ಸಂಬಂಧಪಟ್ಟಿರುತ್ತದೆ. ಇದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

*41. **ಉತ್ತರಪ್ರದೇಶ ರಾಜ್ಯ –ವಿರುದ್ಧ– ಶಂಭುನಾಥ್ ಸಿಂಗ್**[3] ಪ್ರಕರಣದಲ್ಲಿನ ಈ ನ್ಯಾಯಾಲಯದ ಸಮಗ್ರ ನಿರ್ಣಯದಲ್ಲಿ, ಈ ಆಯಾಮದ ಕಾನೂನು ಸ್ಥಾನಮಾನವು ವಿಸ್ತೃತವಾಗಿರುವುದಕ್ಕೆ ಸಂಬಂಧಪಡುತ್ತದೆ. 10–14 ಮತ್ತು 18ನೇ ಕಂಡಿಕೆಗಳಿಗೆ ಉಪಯುಕ್ತ ಪರಾಮರ್ಶೆಯನ್ನು ಮಾಡಬಹುದಾಗಿದೆ; (ಎಸ್‌ಸಿಸಿ ಪಿಪಿ. 672–74)*

*"10.ದಂಡ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತತೆಗಾಗಿ ಸಂಹಿತೆ 309ನೇ ಪ್ರಕರಣವು, ಉಪಬಂಧ ಮಾತ್ರವಾಗಿದ್ದು, ಇದು ಕ್ರಿಮಿನಲ್ ವ್ಯವಹರಣೆಗಳಲ್ಲಿ ನಿಲುವಳಿಗಳನ್ನು ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಅಧಿಕಾರವನ್ನು ಪ್ರಧಾನ ಮಾಡುತ್ತದೆ. ಅಂಥ ನಿಲುವಳಿಗಳನ್ನು ಹೊರಡಿಸುವುದಕ್ಕೆ ಸಂಬಂಧಿಸಿದಂತೆ ವಿಧಾನ ಮಂಡಲವು ವಿಧಿಸುವ ಷರತ್ತುಗಳನ್ನು ಪ್ರಕರಣದಲ್ಲಿ ಸೇರಿಸಲಾಗಿದೆ. ಇದನ್ನು ಹೀಗೆ ಓದಲಾಗಿದೆ:*

*            *            *            *

*11. ಮೊದಲನೇ ಉಪ–ಪ್ರಕರಣವು (ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ) ವ್ಯವಹರಣೆಗಳನ್ನು ತ್ವರಿತವಾಗಿ ನಡೆಸತಕ್ಕದ್ದು ಎಂಬುದನ್ನು ಅಧಿವಿಚಾರಣಾ ನ್ಯಾಯಾಲಯಗಳಿಗೆ ವಿಧಿಸಿದೆ, ಆದರೆ, "ಎಷ್ಟು ಸಾಧ್ಯವೋ ಅಷ್ಟು ತ್ವರಿತವಾಗಿ" ಎಂಬ ಪದಗಳು ಕೆಲವೊಮ್ಮೆ ಜಂಟಿಯಾಗಿ ಅರ್ಥ ಕೊಡುತ್ತವೆ. ಅಂಥ ವಿಳಂಬವು, ಅಧಿವಿಚಾರಣೆಗಳಲ್ಲಿ ಕೆಲವು ವ್ಯತ್ಯಾಸಗಳಾಗುತ್ತವೆ. ಹೀಗಿದ್ದರೂ,*

ಅಧಿವಿಚಾರಣೆಯ ಮುಂದಿನ ಹೆಚ್ಚಿನ ಹಂತದಲ್ಲಿ ನ್ಯಾಯಾಲಯವು ಅಳವಡಿಸಿಕೊಳ್ಳಬೇಕಾದ ಹೆಚ್ಚಿನ ದೃಢ ನಿಲುವು ತಳೆಯಲು ಉಪ–ಪ್ರಕರಣದ ಮುಖ್ಯ ಶಾಖೆಯು ನಿರ್ದಿಷ್ಟವಾಗಿದೆ. ಆ ಹಂತ ಯಾವುದೆಂದರೆ, ಸಾಕ್ಷಿದಾರರ ವಿಚಾರಣೆಯು ಪ್ರಾರಂಭವಾಗುವ ಹಂತವಾಗಿದೆ. ಎಷ್ಟು ಸಾಧ್ಯವೋ ಅಷ್ಟು ಬೇಗ ಎಂಬ ಪದಗಳನ್ನು ಬಳಸುವ ಮೂಲಕ ಉಪ–ಪ್ರಕರಣದ ಪ್ರಾರಂಭಿಕ ಮುಖ್ಯ ಶಾಖೆಯಲ್ಲಿ ಇರುವ ಕಠಿಣ ಆಜ್ಞಾಪನೆಯನ್ನು ದುರ್ಬಲಗೊಳಿಸಿರುವ ಶಾಸನವನ್ನು, ತುಂಬಾ ಕಟ್ಟುನಿಟ್ಟಾದ ಮುಂದಿನ ಹಂತದ (ಸಾಕ್ಷಿದಾರರ ವಿಚಾರಣೆ ಪ್ರಾರಂಭಿಸಿದಾಗ) ಅಗತ್ಯತೆ ಪೂರೈಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಒಮ್ಮೆ ಪ್ರಕರಣವು ಆ ಹಂತವನ್ನು ದಾಟಿದರೆ, ಶಾಸನಬದ್ಧ ಆದೇಶ ಎಂದರೆ, ''ಹಾಜರಿರುವ ಎಲ್ಲಾ ಸಾಕ್ಷಿದಾರರನ್ನು ವಿಚಾರಣೆ ಮಾಡುವವರೆಗೂ ಅಂಥ ವಿಚಾರಣೆಯನ್ನು ಪ್ರತಿದಿನವೂ ಮುಂದುವರೆಸತಕ್ಕದ್ದು. ನ್ಯಾಯಾಲಯವು, ಮುಂದೂಡುವಿಕೆಯು, ''ಅಗತ್ಯವಾಗಿರುವ ಮುಂದಿನ ದಿನವನ್ನು ಮೀರುತ್ತದೆಯೆಂದು ಅಭಿಪ್ರಾಯಪಟ್ಟರೆ, ಷರತ್ತನ್ನು ನ್ಯಾಯಾಲಯಕ್ಕೆ ಯಾವಾಗ ನೀಡಬಹುದಾಗಿತ್ತೊ ಆ ಕಾರಣಗಳಿಗಾಗಿ ಅದನ್ನು ದಾಖಲಿಸತಕ್ಕದ್ದು ಎಂಬುದು ಸದರಿ ಕಟ್ಟುನಿಟ್ಟಿಗೆ ಇರುವ ಒಂದೇ ವಿನಾಯಿತಿಯಾಗಿದೆ. ಇದರ ದುರ್ಬಲತೆಯನ್ನೂ ಕೂಡ ನ್ಯಾಯಾಲಯದ ಮುಂದೆ ಸಾಕ್ಷಿದಾರರು ಹಾಜರಿಲ್ಲದಿರುವಾಗ ಬಳಸಿಕೊಳ್ಳಲಾಗಿದೆ. ಅಂಥ ಸನ್ನಿವೇಶದಲ್ಲಿ, ನ್ಯಾಯಾಲಯವು, (2)ನೇ ಉಪ–ಪ್ರಕರಣದ ಎರಡನೇ ಪರಂತುಕವನ್ನು ಮತ್ತೊಂದು ಷರತ್ತನ್ನು ವಿಧಿಸುವುದನ್ನು ಅತೀ ಹೆಚ್ಚಿನ ಆಕಸ್ಮಿಕಗಳನ್ನು ಹೊರತುಪಡಿಸಿ ಮುಂದೂಡುವ ಯಾವುದೇ ಅಧಿಕಾರವನ್ನು ನೀಡಿರುವುದಿಲ್ಲ.

ಮತ್ತೂ ಪರಂತು, ಸಾಕ್ಷಿದಾರು ಹಾಜರಿದ್ದಾಗ, ಲಿಖಿತದಲ್ಲಿ ದಾಖಲಿಸಬೇಕಾದ ವಿಶೇಷ ಕಾರಣಗಳಿಗಾಗಿ ಅದನ್ನು ಹೊರತುಪಡಿಸಿ,

ಅವರನ್ನು ವಿಚಾರಣೆ ಮಾಡದೆ, ಯಾವುದೇ ಮುಂದೂಡುವಿಕೆ ಅಥವಾ ಮುಂದಕ್ಕೆ ಹಾಕುವ ಕೆಲಸವನ್ನು ಮಾಡತಕ್ಕದ್ದಲ್ಲ.

12. ಹೀಗೆ, ಕಾನೂನು ಸ್ಥಾನಮಾನ ಎಂದರೆ ಒಮ್ಮೆ ಸಾಕ್ಷಿದಾರರ ವಿಚಾರಣೆಯು ಪ್ರಾರಂಭವಾದರೆ, ಹಾಜರಿರುವ ಎಲ್ಲಾ ಸಾಕ್ಷಿದಾರರನ್ನು ವಿಚಾರಣೆ ಮಾಡುವವರೆಗೆ (ಯಾವ ಪಕ್ಷಕಾರರನ್ನು ಬಿಟ್ಟುಬಿಡಲಾಗಿದೆಯೋ ಅವರನ್ನು ಹೊರತುಪಡಿಸಿ) ಪ್ರತಿದಿನವೂ ನ್ಯಾಯಾಲಯವು ಅಧಿವಿಚಾರಣೆಯನ್ನು ಮುಂದುವರಿಸಬೇಕು. ಸದರಿ ಕ್ರಮದಿಂದ ಬದಲಾವಣೆ ಮಾಡಿಕೊಂಡರೆ ಆ ಕಾರಣಗಳನ್ನು ನ್ಯಾಯಾಲಯವು ದಾಖಲಿಸಬೇಕು. ಸಾಕ್ಷಿದಾರರು ನ್ಯಾಯಾಲಯದಲ್ಲಿ ಹಾಜರಿದ್ದಾಗ, ಅಗತ್ಯತೆಯಂತೆ ನಿಷೇಧಿಸಿದ್ದರೂ ಕೂಡ, ಆ ನ್ಯಾಯಾಲಯವು ಅವರನ್ನು ವಿಚಾರಣೆ ಮಾಡಬೇಕು. ಮುಂದೂಡುವಿಕೆಗಾಗಿ ಸೂಚಿಸುವ ಆದೇಶದಲ್ಲಿ ಗುರುತಿಸಿರುವ ಕಾರಣಗಳಿರುವ "ವಿಶೇಷ ಕಾರಣಗಳಿದ್ದರೆ" ಮಾತ್ರ ನ್ಯಾಯಾಲಯದಲ್ಲಿ ಹಾಜರಿರುವ ಸಾಕ್ಷಿದಾರರ ವಿಚಾರಣೆ ಮಾಡದೆ ಪ್ರಕರಣವನ್ನು ಮುಂದೂಡಲು ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದು.

13. ಅಧಿವಿಚಾರಣಾ ನ್ಯಾಯಾಲಯಗಳು, ನಿರ್ಭೀತಿಯಿಂದ ಸದರಿ ಆಜ್ಞೆಯನ್ನು ಕಡೆಗಣಿಸುತ್ತಿರುವುದು ಬಹುತೇಕ ಸಾಮಾನ್ಯ ರೂಢಿಯಾಗಿದೆ ಮತ್ತು ನಿಯತವಾಗಿ ಸಂಭವಿಸುತ್ತಿದೆಯೆಂದು ತಿಳಿಸಲು ಖೇದವಾಗುತ್ತಿದೆ. ಸಾಕ್ಷಿದಾರರು ಹಾಜರಾಗಿದ್ದಾಗಲೂ ಕೂಡ, ಗಂಭೀರ ಕಾರಣಗಳಿರದಿದ್ದಾಗಲೂ ಪ್ರಕರಣಗಳನ್ನು ಮುಂದೂಡಲಾಗಿದೆ. ಇದನ್ನು ಕೇಳಿದ ಮಾತ್ರದಿಂದಲೇ ಅಂಥ ಸನ್ನಿವೇಶಗಳಲ್ಲೂ ಮುಂದೂಡುವ ಕೆಲಸವನ್ನು ಮಾಡಲಾಗಿದೆ. ಅಂಥ ಸಂಬಂಧಪಟ್ಟ ವಕೀಲರ ಮನವೊಲಿಸಿ ದಾವೆಯನ್ನು ಪದೇ

*ಪದೇ ಮುಂದೂಡುವಿಕೆಯನ್ನು ಮಾಡಲಾಗುತ್ತದೆ. ಆ ಆಧಾರದ ಮೇಲೆ, ಮುಂದೂಡುವುದರ ಬಗ್ಗೆ ಶಾಸನಗಳು ಅಸಮಾಧಾನ ಗೊಂಡಿವೆ. ವಕೀಲರಿಗೆ ಎಂಥದೇ ಅನಾನುಕೂಲಕರವಾದ ಸಂದರ್ಭ, ಸಂಹಿತೆಯ 309ನೇ ಪ್ರಕರಣದ ಆಜ್ಞೆಯನ್ನು ಉಪೇಕ್ಷಿಸಲು "ವಿಶೇಷ ಕಾರಣ" ವಾಗುವುದಿಲ್ಲವೆಂಬುದನ್ನು ನಾವು ಸ್ಪಷ್ಟಪಡಿಸುತ್ತಿದ್ದೇವೆ.*

*14. ಶಾಸನವು ವಿಧಿಸಿದ ಸಾಕ್ಷಿದಾರರ ಪ್ರತಿದಿನದ ವಿಚಾರಣೆಯು, ಆಪಾದಿತನ ಅಥವಾ ಅವನ ವಕೀಲರು ಸಹಕರಿಸದ ಕಾರಣದಿಂದ ಅನುಸಾರವಾಗಿರುವುದಿಲ್ಲ ಎಂದು ಯಾವುದೇ ನ್ಯಾಯಾಲಯ ಗುರುತಿಸಿದರೆ, ನ್ಯಾಯಾಲಯವು, ಉಪ–ಪ್ರಕರಣದಲ್ಲಿ ಸೂಚಿಸಲಾದ ಯಾವುದೇ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು ಎಂದರೆ ಆಪಾದಿತನನ್ನು ವಶಕ್ಕೆ ವಾಪಸ್ಸು ಕಳುಹಿಸುವುದು ಅಥವಾ ಅಂಥ ಮುಂದೂಡುವಿಕೆಯನ್ನು ಬಯಸುವ ಪಕ್ಷಕಾರನಿಗೆ ವೆಚ್ಚ ವಿಧಿಸುವುದು (ನ್ಯಾಯಾಲಯಕ್ಕೆ ಹಾಜರಾಗಲು ಆದ ವೆಚ್ಚವನ್ನು ಒಳಗೊಂಡಂತೆ, ಸಾಕ್ಷಿದಾರರಿಗೆ ಆದ ನಷ್ಟದೊಂದಿಗೆ ವೆಚ್ಚವನ್ನು ಸಮವ್ಯಾಪಕಗೊಳಿಸಬೇಕು. ಮತ್ತೊಂದು ಆಯ್ಕೆ ಎಂದರೆ, ಆಪಾದಿತನು ಗೈರುಹಾಜರಾದಾಗ ಮತ್ತು ಸಾಕ್ಷಿದಾರನನ್ನು ವಿಚಾರಣೆಗೆ ಹಾಜರುಪಡಿಸಿದಾಗ, ನ್ಯಾಯಾಲಯವು, ಅವನ ಜಾಮೀನನ್ನು ರದ್ದುಪಡಿಸಬಹುದು. ಅವನು ಇಲ್ಲದಿದ್ದರೂ ಕೂಡ ಹಾಜರಿರುವ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಕ್ರಮ ಮುಂದುವರಿಸಲು ಅವನ ವಕೀಲನನ್ನು ಅವನ ಪರವಾಗಿ ಅನುಮತಿ ಕೋರಲು ಅರ್ಜಿಯನ್ನು ಸಲ್ಲಿಸಿದ ಹೊರತು, ಅಲ್ಲದೆ, ತಾನು ಪ್ರಕರಣದಲ್ಲಿರುವ ನಿರ್ದಿಷ್ಟ ಆಪಾದಿತನಾಗಿ ಗುರುತಿನ ಬಗ್ಗೆ ಯಾವುದೇ ವಿವಾದವಿರುವುದಿಲ್ಲವೆಂದು ಲಿಖಿತದಲ್ಲಿ ಮುಚ್ಚಳಿಕೆಯನ್ನು ಆಪಾದಿತನು ನೀಡುವುದು)*

* * * *

*18. ಸಂಹಿತೆಯ 309ನೇ ಪ್ರಕರಣದಲ್ಲಿ ಉಳಿಸಿಕೊಂಡ ಕಾನೂನು ಆಜ್ಞೆಗಳನ್ನು ಬದಲಾಯಿಸಿಕೊಂಡು ಮೂಲ ಸೌಲಭ್ಯಗಳನ್ನು ದೂಷಿಸುವ ಮೂಲಕ ಯಾವುದೇ ರೀತಿಯಲ್ಲಿ ತಪ್ಪಿಸಿಕೊಳ್ಳುವ ಬಗ್ಗೆ ನುಣುಚಿಕೊಳ್ಳುವುದು ಸಮರ್ಥನೆಯಲ್ಲ. ತನ್ನ ಕಾರ್ಯವನ್ನು ನಿರ್ವಹಿಸಲು ಬದ್ಧನಾಗಿರುವ ವಿವೇಕವುಳ್ಳ ನ್ಯಾಯಿಕ ಅಧಿಕಾರಿಯು ಅಂಥ ಕಾನೂನಾತ್ಮಕ ಆಜ್ಞೆಗಳನ್ನು ಅನುಸರಿಸುವ ಸಂಬಂಧ ಇರುವ ಮೂಲಭೂತ ಸೌಕರ್ಯಗಳೊಂದಿಗೆ ನಿರ್ವಹಿಸಬಹುದು. ಹಳೆಯ ಬೋಧೆಯಲ್ಲಿರುವ ಆದೇಶವು, ಸೋಮಾರಿಯು ಯಾವಾಗಲೂ ತನ್ನ ಉಪಕರಣಗಳನ್ನು ದೂಷಿಸುತ್ತಿದ್ದು, ಅದು ವ್ಯವಸ್ಥೆಯಲ್ಲಿರುವ ನ್ಯೂನತೆಗಳಲ್ಲಿ ತಪ್ಪುಗಳನ್ನು ಅಂಥ ನಿರ್ದೇಶನಗಳನ್ನು ನಿರ್ವಹಿಸುವಲ್ಲಿನ ಅವರ ಹಿಂಜರಿಕೆಗೆ ಈಗಿರುವ ಮೂಲ ಸೌಕರ್ಯಗಳ ಕುಂದುಕೊರತೆಗಳನ್ನು ಹುಡುಕುವ ಸೋಮಾರಿತನದ ನ್ಯಾಯಿಕ ಅಧಿಕಾರಿಗಳಿಗೆ ಮಾತ್ರ ಇದು ಉತ್ತರವಾಗಿರುತ್ತದೆ.*

49. ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಎರಡನೇ ಪರಂತುಕವು, ಪಕ್ಷಕಾರನ ಕೋರಿಕೆಯಂತೆ, ಮುಂದೂಡುವ ಪದ್ಧತಿಯನ್ನು ಕೊನೆಗೊಳಿಸುವ ಉದ್ದೇಶವನ್ನು ಹೊಂದಿದೆ. ಅಷ್ಟೇ ಅಲ್ಲದೆ, 309ನೇ ಪ್ರಕರಣದ (2)ನೇ ಉಪ–ಪ್ರಕರಣದ (2)ನೇ ಖಂಡವು, ಕಾರಣಗಳನ್ನು ದಾಖಲಿಸದ ಹೊರತು ಮುಂದೂಡುವುದಕ್ಕೆ ಸಮ್ಮತಿಯನ್ನು ನೀಡತಕ್ಕದ್ದಲ್ಲವೆಂಬುದನ್ನು ತಿಳಿಸುತ್ತದೆ. ಹೀಗಾಗಿ, ಬಲವಾದ ಮತ್ತು ಯುಕ್ತ ಆಧಾರಗಳನ್ನು ಹೊರತುಪಡಿಸಿ ಮತ್ತು ಪರಿಸ್ಥಿತಿಯ ಒತ್ತಡ ಅನಿವಾರ್ಯವಾಗಿದ್ದ ಸಂದರ್ಭವನ್ನು ಹೊರತುಪಡಿಸಿ ಮುಂದೂಡುವುದನ್ನು ಸಮ್ಮತಿಸಬಾರದು.

50. ಕ್ರಿಮಿನಲ್ ನ್ಯಾಯವು, ತ್ವರಿತ ಗತಿಯಲ್ಲಾಗಬೇಕು ಮತ್ತು ಖಚಿತವಾಗಿರಬೇಕು ಮತ್ತು ಘಟನೆಗಳು ಜನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವಾಗಲೇ ಎಷ್ಟು ಸಾಧ್ಯವೋ ಅಷ್ಟು ಬೇಗನೆ ಅಧಿವಿಚಾರಣೆಯನ್ನು ನಡೆಸಬೇಕು ಎಂಬುದು ಸಾರ್ವಜನಿಕ

ಹಿತಾಸಕ್ತಿ ಬೇಡಿಕೆಯಾಗಿದ್ದು ಇದು ನಿಷ್ಪಕ್ಷಪಾತ ಅಧಿವಿಚಾರಣೆಗೆ ಕಾರಣವಾಗುತ್ತದೆ. ಈ ಪ್ರಮುಖ ತತ್ವವನ್ನು ಮನಸಿನಲ್ಲಿಟ್ಟುಕೊಂಡು, ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣವನ್ನು ಅಕ್ಷರಶಃ ಹಾಗೂ ಭಾವತಃ ದೃಷ್ಟಿಯಲ್ಲಿ ಅನ್ವಯಿಸಬೇಕು. ಕ್ರಿಮಿನಲ್ ಅಧಿವಿಚಾರಣೆಗಳನ್ನು ಪರಿಣಾಮಕಾರಿಯಾಗಿ ನಡೆಸುವ ಸಲುವಾಗಿ, ಮೇಲಾಗಿ ದಿನನಿತ್ಯದ ಆಧಾರದ ಮೇಲೆ ಈ ಸಂಬಂಧದಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

51. ಈ ನ್ಯಾಯಾಲಯವು, **"ಅಧಿವಿಚಾರಣಾ ಪೂರ್ವ ಸುನಾವಣೆ"** ಯನ್ನು, ಪೀಠಾಸೀನ ಅಧಿಕಾರಿ, ಸರ್ಕಾರಿ ಅಭಿಯೋಜಕರು, ಆಪಾದಿತರು, ಆಪಾದಿತನ ವಕೀಲ, ಇವರನ್ನು ಒಳಗೊಂಡು ನಡೆಸಬೇಕಾಗುತ್ತದೆ ಮತ್ತು ನಿರೀಕ್ಷಕರು ಅಥವಾ ಸಂಬಂಧಪಟ್ಟ ಪೊಲೀಸು ಠಾಣೆಯ ಉಪ–ನಿರೀಕ್ಷಕರಂಥ ಸಂಬಂಧಪಟ್ಟ ಜವಾಬ್ದಾರಿಯುತ ಪೊಲೀಸು ಅಧಿಕಾರಿಗಳನ್ನು ಒಳಗೊಂಡು ನಡೆಸಬೇಕಾಗುತ್ತದೆ.

51ಎ. ಸರ್ಕಾರಿ ಅಭಿಯೋಜಕರು, ಅವರು ವಿಚಾರಣೆಮಾಡಲು ಬಯಸುವ ಪ್ರಾಸಿಕ್ಯೂಷನ್ ಸಾಕ್ಷಿದಾರರ ಪಟ್ಟಿಯ ಕುರಿತು ಮತ್ತು ನಿರ್ದಿಷ್ಟ ದಿನಾಂಕಗಳಿಗೆ ಸಂಬಂಧಿಸಿದಂತೆ ಅವರನ್ನು ವಿಚಾರಣೆ ಮಾಡುವ ಅಂದಾಜು ಸಮಯದವರೆಗೆ ಆದ್ಯಂತ ಸಿದ್ಧತೆ ನಡೆಸಿ ಬಂದಲ್ಲಿ, ಆಗ **"ಅಧಿವಿಚಾರಣಾ ಪೂರ್ವ ಸುನಾವಣೆ"** ನಡೆಸಿದರೆ ಅದು ತುಂಬ ಸಹಾಯಕವಾಗುತ್ತದೆ. ಅಭಿಯೋಜಕರು ವಿಚಾರಣೆ ಮಾಡಲು ಉದ್ದೇಶಿಸಿದ ಸಾಕ್ಷಿದಾರರು ಅವರು ಹಾಜರಾಗಲು ಬಯಸಿರುವ ನಿರ್ದಿಷ್ಟಪಡಿಸಲಾದ ದಿನಾಂಕಗಳಂದು ಲಭ್ಯವಿರುವರು ಎಂಬುದನ್ನು ನ್ಯಾಯಾಲಯಗಳು ಖಚಿತಪಡಿಸಬೇಕು.

52. ಕೊಲೆ ಪ್ರಕರಣದಲ್ಲಿ, ಕೊಲೆಗೆ ಸಾಕ್ಷಿಯಾಗಿರುವ ಮೃತನ ಪತ್ನಿಯು ಮಾತ್ರ ಪ್ರತ್ಯಕ್ಷ ಸಾಕ್ಷಿದಾರರಾಗಿರುವರು ಎಂದು ಭಾವಿಸಿಕೊಳ್ಳೋಣ. ಅವಳು ಸಾಕ್ಷಿದಾರಳಾಗಿರುತ್ತಾಳೆ ಮತ್ತು ಅವಳ ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅವಳು ಹಾಜರಾಗದಿದರೆ ನ್ಯಾಯಾಲಯವು, ಅವಳ ಹಾಜರಾತಿಯನ್ನು ಉಳಿಸಿಕೊಳ್ಳಲು

ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಂಡ ನಂತರ, ಕನಿಷ್ಠ ಪಕ್ಷ ಮುಂದಿನ ಸುನಾವಣೆ ದಿನಾಂಕದಂದು ಅಧಿವಿಚಾರಣೆಯನ್ನು ಮುಂದೂಡಬಹುದು. ಅಂಥ ಕಿರಿಕಿರಿಗಳನ್ನು ತಪ್ಪಿಸಲು. ಅಧಿವಿಚಾರಣೆಯನ್ನು ನಿಗದಿಪಡಿಸುವ ಮೊದಲು, ಅಧಿವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಂಥ ಸಾಕ್ಷಿದಾರನು ಲಭ್ಯವಾಗುವುದನ್ನು ಖಚಿತಪಡಿಸಬೇಕಾಗುತ್ತದೆ ಮತ್ತು ನ್ಯಾಯಾಲಯಕ್ಕೆ ತಿಳಿಯಪಡಿಸಬೆಕಾಗುತ್ತದೆ.

53. ಇದಲ್ಲದೆ, ಅತ್ಯಾಚಾರ ಪ್ರಕರಣದಲ್ಲಿ, ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯು ಪ್ರಧಾನ ಸಾಕ್ಷಿದಾರಳಾಗಿರುತ್ತಾಳೆ. ಪ್ರಾಸಿಕ್ಯೂಷನ್ ಮತ್ತು ಪೊಲೀಸರು, ಅವಳನ್ನು ವಿಚಾರಣೆಮಾಡಲು ಸಾಧ್ಯವಾಗುವ ಹಾಗೆ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆತರಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅವಳನ್ನು ನ್ಯಾಯಾಲಯಕ್ಕೆ ಕರೆತರಲು ಯಾವುದೇ ನಿರ್ಲಕ್ಷ್ಯತೋರಿದರೆ, ಬಾಹ್ಯ ಒತ್ತಡಗಳಿಂದ ಹಸ್ತಕ್ಷೇಪ ಮಾಡುವ ಅಥವಾ ಅಡ್ಡಿಯನ್ನುಂಟುಮಾಡುವ ಸಂಭವವಿರಬಹುದಾಗಿರುತ್ತದೆ. ಪ್ರಾಸಿಕ್ಯೂಷನ್‌ನ ಪರವಾಗಿ ವಿಚಾರಣೆಮಾಡಲಾದ ಪ್ರಮುಖ ಸಾಕ್ಷಿದಾರರ ಬಾಯಿಯಿಂದ ಕೆಲವು ಪ್ರಮುಖ ಲೋಪಗಳು ಹೊರಬಿದ್ದರೆ. ಅಂಥ ಲೋಪಗಳನ್ನು ಆಪಾದಿತನು ತನಿಖಾಧಿಕಾರಿಗೆ ಒಪ್ಪಿಸಬೇಕಾಗುತ್ತದೆ. ಹೀಗಾಗಿ, ಗೊತ್ತುಪಡಿಸಿದ ದಿನಾಂಕದಂದು, ತನಿಖಾಧಿಕಾರಿಯ ಹಾಜರಾತಿಯು ಸಹ ಸಮಾನವಾಗಿ ಅತ್ಯವಶ್ಯಕವಾಗಿರುತ್ತದೆ ಮತ್ತು ಇದನ್ನು ಖಚಿತಪಡಿಸಬೇಕು.

54. ತನಿಖಾಧಿಕಾರಿಯು, ಸೇವೆಯಿಂದ ನಿವೃತ್ತಿಯಾಗಿರುವನೆಂದು, ತನ್ನ ಮಗಳನ್ನು ನೋಡಲು ಯುಎಸ್‌ಎಗೆ ಹೋಗಿರುವನೆಂದು ಭಾವಿಸಿಕೊಳ್ಳೋಣ. ಆಗ, ಅವನು ಸದ್ಯದ ಭವಿಷ್ಯದಲ್ಲಿ ಸಿಗುವ ಸಂಭವ ತುಂಬಾ ನಿರಾಶಾದಾಯಕವಾಗಿದ್ದು, ಇದರಿಂದ ಅವನು ಹಿಂದಿರುಗುವವರೆಗೆ ಅಧಿವಿಚಾರಣೆಯನ್ನು ಮುಂದೂಡಲಾಗಿರುತ್ತದೆ. ಆದುದರಿಂದ, ಈ ಪ್ರಕರಣಕ್ಕೆ ಗುರುತು ಮಾಡಲಾಗಿರುವ ತನಿಖೆಗೆ ಒಳಪಡಿಸಲಾಗಿರುವ ವ್ಯಕ್ತಿಗಳ ಸಹಾಯವನ್ನು ಪಡೆದುಕೊಳ್ಳುವ ಮೂಲಕ ಅಂಥ ಸನ್ನಿವೇಶಗಳಿಂದ ಹೊರಬರಬಹುದಾಗಿದೆ.

55. ಕೆಲವು ಪ್ರಕರಣಗಳಲ್ಲಿ, ಸಾಕ್ಷಿದಾರರಿಗೆ ನ್ಯಾಯಾಲಯದ ಸ್ಥಳೀಯ ಭಾಷೆ ಅಥವಾ ಇಂಗ್ಲೀಷ್ ಭಾಷೆ ಗೊತ್ತಿರುವುದಿಲ್ಲ. ಹೀಗಾಗಿ, ಅವರ ಸಾಕ್ಷ್ಯವನ್ನು ಭಾಷಾಂತರಿಸಲು ಭಾಷಾಂತರಕಾರರು ಅವಶ್ಯವಾಗುತ್ತಾರೆ. ಇದು ತುಂಬಾ ಸಮಯವನ್ನು ತೆಗೆದುಕೊಳ್ಳುತ್ತದೆ. ಈ ಅಂಶವನ್ನು, ಅಧಿವಿಚಾರಣೆಯ ದಿನಾಂಕವನ್ನು ನಿಗದಿಪಡಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಪರಿಣಾಮಕಾರಿ ಭಾಷಾಂತರಕಾರರು/ ಅರ್ಥವಿವರಕರು ನ್ಯಾಯಾಲಯದಲ್ಲಿ ದೊರಕದಿದ್ದರೆ, ಅಂಥ ಅರ್ಥವಿವರಕರನ್ನು ಮುಂಚಿತವಾಗಿ ಕರೆಸಿಕೊಳ್ಳಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಹಾಗೆಯೇ ಸ್ಥಳೀಯ ಭಾಷೆ ಅಥವಾ ಇಂಗ್ಲೀಷ್‌ನಲ್ಲಿ ಮಾತನಾಡಲಾಗದಿರುವ ಸಾಕ್ಷಿದಾರರನ್ನು ಆ ಆಧಾರದ ಮೇಲೆ ಹಿಂದಕ್ಕೆ ಕಳುಹಿಸಲಾಗುವುದಿಲ್ಲ.

56. ಸದೃಶವಾಗಿ, ಮಕ್ಕಳ ಸಾಕ್ಷಿದಾರರು, ತಮ್ಮ ಸಾಕ್ಷ್ಯವನ್ನು ನೀಡಲು ನ್ಯಾಯಾಲಯದ ಮುಂದೆ ಹಾಜರಾಗುವರು. ಪೀಠಾಸೀನ ಅಧಿಕಾರಿಯು, ಭಾರತೀಯ ಪ್ರಮಾಣ ಅಧಿನಿಯಮದ ಸಂಬಂಧಪಟ್ಟ ಉಪಬಂಧಗಳ ಸಂಪೂರ್ಣ ತಿಳಿವಳಿಕೆಯನ್ನು ಹೊಂದಿರಲೇಬೇಕು. ಮಗು ಅಥವಾ ಹೆಂಗಸು, ಸಾಕ್ಷಿದಾರರಾಗಿ ನ್ಯಾಯಾಲಯಕ್ಕೆ ಬಂದಾಗಲೆಲ್ಲಾ ಅವರನ್ನು ಸೌಜನ್ಯಪೂರ್ವಕವಾಗಿ ನಡೆಸಿಕೊಳ್ಳಬೇಕು.

57. ದಂಡ ಪ್ರಕ್ರಿಯಾ ಸಂಹಿತೆಯ 294ನೇ ಪ್ರಕರಣವನ್ನು, ನ್ಯಾಯಾಲಯಗಳು ಪದೇ ಪದೇ ಬಳಸಿಕೊಳ್ಳುವುದಿಲ್ಲವೆಂಬುದನ್ನು ಸಹ ನೋಡಬಹುದು. ಸಾಂದರ್ಭಿಕ ಸಾಕ್ಷ್ಯವನ್ನಾಧರಿಸಿದ ಕೊಲೆಯ ಸಂದರ್ಭದಲ್ಲಿ ಆಪಾದಿತನು, ಮರಣವು, ಹತ್ಯೆ ಮಾಡಿದುದರಿಂದಾಗಿದೆ ಎಂದು ಒಪ್ಪಿಕೊಂಡರೆ, ಸಮ್ಮತಿ ಮೂಲಕ ಗುರುತುಮಾಡಲಾದ ಮರಣೋತ್ತರ ಶವಪರೀಕ್ಷೆಯನ್ನು ಪಡೆದುಕೊಳ್ಳಲು ನ್ಯಾಯಾಲಯವನ್ನು ಕೋರಿಕೊಳ್ಳುವ ಪ್ರಮೇಯವೇನೂ ಪ್ರಾಸಿಕ್ಯೂಷನ್‌ಗೆ ಬರುವುದಿಲ್ಲ. ಇದರಿಂದ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ ವೈದ್ಯರ ಸಾಕ್ಷ್ಯವನ್ನು ಕೈಬಿಡಬಹುದು. ಸಮ್ಮತಿಯ ಮೂಲಕ ಗುರುತುಮಾಡಲಾದ ಹಲವಾರು ದಸ್ತಾವೇಜುಗಳನ್ನು ಪಡೆದುಕೊಳ್ಳುವಂಥ ಸದೃಶ ಸಂದರ್ಭಗಳಿದ್ದು, ಅಂಥ ಗುರುತುಮಾಡಲಾದ ದಸ್ತಾವೇಜುಗಳು, ಯಾವುದೇ ರೀತಿಯಲ್ಲಿ ಆಪಾದಿತನ

ಹಕ್ಕುಗಳ ಅಥವಾ ಹಿತಾಸಕ್ತಿಯ ಪಕ್ಷಪಾತವಿರುವುದಿಲ್ಲ. ಹೆಚ್ಚಿನ ಸಾಕ್ಷ್ಯದ ಮೌಲ್ಯವನ್ನು ಹೊಂದಿರುವ ಮೊತ್ತದ ವರದಿ, ರಾಸಾಯನಿಕ ವರದಿ, ರಕ್ತದ ಮಾದರಿ ವರದಿ ಮೊದಲಾದವುಗಳನ್ನು ಪಡೆದುಕೊಳ್ಳುವಲ್ಲಿ ಇದನ್ನು ಮುಖ್ಯವೆಂದು ಭಾವಿಸಲಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 294ನೇ ಪ್ರಕರಣವನ್ನು ಕೆಳಗೆ ಮರು ಹಾಜರುಪಡಿಸಲಾಗಿದೆ.

*"**294. ಕೆಲವು ದಸ್ತಾವೇಜುಗಳ, ವಿದ್ಯುಕ್ತ ರುಜುವಾತು ಅನಾವಶ್ಯಕ.**– (1) ಪ್ರಾಸಿಕ್ಯೂಷನ್ನು ಅಥವಾ ಆಪಾದಿತನು ನ್ಯಾಯಾಲಯದಲ್ಲಿ ಯಾವುದೇ ದಸ್ತಾವೇಜನ್ನು ದಾಖಲು ಮಾಡಿರುವಲ್ಲಿ, ಅಂಥ ಪ್ರತಿಯೊಂದು ದಸ್ತಾವೇಜಿನ ವಿವರಗಳನ್ನು ಒಂದು ಪಟ್ಟಿಯಲ್ಲಿ ಸೇರಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಪ್ರಾಸಿಕ್ಯೂಷನನ್ನು ಅಥವಾ ಆಪಾದಿತನನ್ನು ಅಥವಾ ಪ್ರಾಸಿಕ್ಯೂಷನ್ನಿನ ಅಥವಾ ಆಪಾದಿತನ ಪ್ಲೀಡರನು ಯಾರಾದರೂ ಇದ್ದರೆ, ಅವನನ್ನು ಅಂಥ ಪ್ರತಿಯೊಂದು ದಸ್ತಾವೇಜಿನ ನೈಜತೆಯನ್ನು ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಕರೆಯತಕ್ಕದ್ದು.*

*(2) ದಸ್ತಾವೇಜುಗಳ ಪಟ್ಟಿಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.*

*(3) ಯಾವುದೇ ದಸ್ತಾವೇಜಿನ ನೈಜತೆಯ ಬಗ್ಗೆ ವಿವಾದವಿಲ್ಲದಿರುವಾಗ, ಯಾರಿಂದ ಅದು ಸಹಿಯಾಗಿದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯ ಸಹಿಯ ರುಜುವಾತಿಲ್ಲದೆ ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಆರೋಪ ವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಅಂಥ ದಸ್ತಾವೇಜನ್ನು ಸಾಕ್ಷ್ಯವಾಗಿ ಓದಬಹುದು.*

*ಪರಂತು, ನ್ಯಾಯಾಲಯವು ತನ್ನ ವಿವೇಚನಾನುಸಾರ, ಅಂಥ ಸಹಿಯನ್ನು ರುಜುವಾತುಪಡಿಸಬೇಕೆಂದು ಅಗತ್ಯಪಡಿಸಬಹುದು."*

58. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮಕ್ಕೆ ಸಂಬಂಧಪಟ್ಟ ಪ್ರಕರಣಗಳಲ್ಲಿ, ಇರುವ ಆದಾಯದ ಸಂಪನ್ಮೂಲಗಳಿಗೆ ಹೊಂದಿಕೊಳ್ಳದ ಆಸ್ತಿ ಆರ್ಜನೆ, ನೂರಾರು ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಆ ದಸ್ತಾವೇಜುಗಳ ಬಗ್ಗೆ ಮಾತನಾಡಲು ಸಾಕ್ಷಿದಾರರಾಗಿ ಅಸಂಖ್ಯಾತ ಸಾಕ್ಷಿದಾರರನ್ನು ಆರೋಪಪಟ್ಟಿಯಲ್ಲಿ ಉದ್ಧರಿಸಲಾಗುತ್ತದೆ. ಉದಾಹರಣೆಗೆ ಬ್ಯಾಂಕುಗಳು ಹೊರಡಿಸಿದ ನಿಶ್ಚಿತ ಠೇವಣಿ, ಎಲ್‌ಐಸಿ ಪಾಲಿಸಿಗಳು, ನೀರಿನ ವೆಚ್ಚಗಳಿಗೆ ಸಂದಾಯ ಮಾಡಿರುವುದರ ರಸೀದಿಗಳು, ವಿದ್ಯುಚ್ಛಕ್ತಿ ಚಾರ್ಜುಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು ಹೊರಡಿಸಿದಂಥ ಇತರ ದಸ್ತಾವೇಜು ಅಂಥ ಪಕ್ಷಕಾರರಿಗೆ ವಾಸ್ತವವಾಗಿ ಬಾಧಕವಾಗದಿದ್ದರೆ, ಸಮ್ಮತಿ ಮೂಲಕ ಕ್ರಮದ ವಿಷಯವನನ್ನು ಗುರುತುಮಾಡಬಹುದಾಗಿದೆ. ಈ ಪ್ರಯೋಗವನ್ನು ಸಕ್ರಿಯ ನೆರವಿನೊಂದಿಗೆ ಮಾಡಲಾಗುತ್ತದೆ ಮತ್ತು ಆಪಾದಿತನನ್ನು ಪ್ರತಿನಿಧಿಸುವ ವಕೀಲರು ಮತ್ತು ಸಂಬಂಧಪಟ್ಟ ಪಬ್ಲಿಕ್ ಪ್ರಾಸಿಕ್ಯೂಟರ್ ಸಹಕಾರದೊಂದಿಗೆ ಮಾಡಲಾಗುತ್ತದೆ, ಅಸಂಖ್ಯಾತ ಸಾಕ್ಷಿದಾರರ ಸಾಕ್ಷ್ಯವನ್ನು ಈ ದಸ್ತಾವೇಜುಗಳನ್ನು ಗುರುತುಮಾಡುವ ಮೂಲಕ ವಿನಾಯಿತಿಗೊಳಿಸಬಹುದು. ಹೀಗೆ ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸಬಹುದು.

59. ಈ ಹಂತದಲ್ಲಿ, ಸಂಬಂಧಪಟ್ಟ ಪ್ರಾಸಿಕ್ಯೂಟರ್ ಪ್ರಕರಣದ ಮತ್ತು ಯಾವ ಸಾಕ್ಷಿದಾರರಿಗೆ ವಿಚಾರಣೆಮಾಡಲು ಉದ್ದೇಶಿಸಿದೆಯೋ ಆ ಮುಖ್ಯ ಸಾಕ್ಷಿದಾರರ ಸಂಕ್ಷಿಪ್ತ ಹಿನ್ನೆಲೆಯನ್ನು ನೀಡಲೇಬೇಕು ಎಂದು ತಿಳಿಸುವುದು ಯುಕ್ತವಾಗುತ್ತದೆ. ಸಾಮಾನ್ಯವಾಗಿ, ಅಧಿವಿಚಾರಣೆಯನ್ನು ನಿರ್ಧರಿಸುವಾಗ ಹೊರಡಿಸುವ ಆದೇಶ ಈ ಮುಂದಿನಂತಿದೆ:

> ಅಧಿವಿಚಾರಣೆಯನ್ನು, 14 ರಿಂದ 16ನೇ ಜುಲೈ 2016 ರಂದು ನಡೆಸಲು ಆದೇಶಿಸಲಾಗಿದೆ. ಪ್ರಾಸಿಕ್ಯೂಷನ್ನು ಸಲ್ಲಿಸಿದ ಮೆಮೋ ಪ್ರಕಾರ ಸಾಕ್ಷಿದಾರರಿಗೆ ಸಮನುಗಳನ್ನು ಹೊರಡಿಸಲಾಗಿದೆ.

ಈ 3 ದಿನಗಳ ಅವಧಿಯಲ್ಲಿ ಎಲ್ಲಾ ಸಾಕ್ಷಿದಾರರನ್ನು ವಿಚಾರಣೆಮಾಡಲು ಸಾಧ್ಯವಾಗದಿದ್ದಾಗ, ಅಧಿವಿಚಾರಣೆಯನ್ನು ಹಲವಾರು ದಿನಗಳಿಗೆ ವಿಸ್ತರಿಸಬಹುದು. ಜುಲೈ, 16ರ ನಂತರ ತಕ್ಷಣದ ಮತ್ತೊಂದು ಅಧಿವಿಚಾರಣೆಯು ಈಗಾಗಲೇ ನಿಗದಿಯಾಗಿದ್ದರೆ ಅಧಿವಿಚಾರಣೆಯನ್ನು ಕೆಲವು ತಿಂಗಳುಗಳಿಗೆ ಮುಂದೂಡಬಹುದು. ಆದುದರಿಂದ ಈ **'ಅಧಿವಿಚಾರಣಾ ಪೂರ್ವ ಸುನಾವಣೆ'** ಯನ್ನು, ಮುಂಚಿತವಾಗಿ, ಹಲವಾರು ಅನಿರೀಕ್ಷಿತ ಸನ್ನಿವೇಶಗಳನ್ನು ಚೆನ್ನಾಗಿ ಕೂಲಂಕುಷವಾಗಿ ವಿಚಾರಮಾಡಿ, ಪರಿಣಾಮಕಾರಿಯಾಗಿ ನಡೆಸಲೇಬೇಕು. ಹೀಗಾಗಿ **'ಅಧಿವಿಚಾರಣಾ ಪೂರ್ವ ಸುನಾವಣೆ'**ಯು ಔಪಚಾರಿಕವಾಗಬಾರದಷ್ಟೆ, ಆದರೆ, ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದಲ್ಲಿ ಆಜ್ಞಾಪಿಸಲಾದಂಥ ಅಧಿವಿಚಾರಣೆಯನ್ನು ನಡೆಸಲು ಸಹಾಯಕವಾಗುವ ಕ್ರಮದಂಥ ಉಪಯುಕ್ತ ಪ್ರಯೋಗವಾಗಿರಬೇಕು. ವಾಸ್ತವವಾಗಿ, ***ಅಖಿಲಾ***ರವರ ಪ್ರಕರಣದ (ಮೇಲಿನ) 42ನೇ ಕಂಡಿಕೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಆಡಳಿತಾತ್ಮಕ ಕಡೆಯಿಂದ ನಿರ್ದೇಶನಗಳನ್ನು ನೀಡಿದ್ದು ಉಲ್ಲಂಘಿಸುವಂಥ ನ್ಯಾಯಿಕ ಅಧಿಕಾರಿಗಳೊಂದಿಗೆ ವ್ಯವಹರಿಸುವಂತೆ ಅಧಿವಿಚಾರಣಾ ನ್ಯಾಯಾಲಯಗಳಿಗೂ ಕೂಡ ನಿರ್ದೇಶಿಸಲಾಗಿದೆ. ಅಂಥ ಎಲ್ಲಾ ಅಹಿತಕರ ವಿಷಯಗಳನ್ನು ತಪ್ಪಿಸಲು, ಅನುದಿನವೂ ಅಧಿವಿಚಾರಣೆಯನ್ನು ನಡೆಸುವ ಮಾರ್ಗದಲ್ಲಿ ಬರಬಹುದಾದ ಎಲ್ಲಾ ಅಡೆತಡೆಗಳನ್ನು ಮತ್ತು ಅವುಗಳನ್ನು ಪರಿಹರಿಸಲು ಅಧಿವಿಚಾರಣೆಯ ದಿನಾಂಕವನ್ನು ನಿಗದಿಗೊಳಿಸುವ ಮೊದಲು ಇದನ್ನು ಪೀಠಾಸೀನ ಅಧಿಕಾರಿಗಳು ಮುಂಗಾಣಿಸಬೇಕು. ಸಂಬಂಧಪಟ್ಟ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದೊಂದಿಗೆ ಪರಿಣಾಮಕಾರಿಯಾಗಿ ಅನುಸರಣೆಗೊಳಿಸಲು ನ್ಯಾಯಾಲಯಕ್ಕೆ ಸಹಾಯಕವಾಗುವುದನ್ನು ನಿರೀಕ್ಷಿಸುತ್ತದೆಯೆಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ಈ ತೀರ್ಪಿನಲ್ಲಿ ಅಧಿಸೂಚಿಸಿದ ಮಾರ್ಗಸೂಚಿಗಳನ್ನು ನಿಶ್ಶೇಷಗೊಳಿಸಿರುವುದಿಲ್ಲ ಆದರೆ ಅವು ದೃಷ್ಟಾಂತ ರೂಪದಲ್ಲಿವೆ.

60. ಆರೋಪಪಟ್ಟಿಯಲ್ಲಿ ಸಾಕ್ಷಿದಾರರೆಂದು ಉದ್ಧರಿಸಲಾಗಿರುವ ವ್ಯಕ್ತಿಗಳು 30 ರಿಂದ 40 ವರೆಗೆ ಇರುವರು ಎಂದು ಭಾವಿಸೋಣ. ಅಂಥ ಮೆಮೋವನ್ನು ಒಪ್ಪಿಕೊಂಡರೆ, ಅಧಿವಿಚಾರಣೆಯನ್ನು ಪ್ರಾಸಿಕ್ಯೂಷನ್ನು ಸಲ್ಲಿಸಿದ ಮೆಮೋದಲ್ಲಿ

ಬಿಂಬಿಸಲಾದಂಥ ಸಾಕ್ಷಿದಾರರ ವಿಚಾರಣೆಯ ಆದೇಶಕ್ಕನುಸಾರವಾಗಿ ನಡೆಸುವುದು. ನಿರ್ದಿಷ್ಟ ಉಪಬಂಧವು, ಸಿವಿಲ್ ಪ್ರಕ್ರಿಯಾ ಸಂಹಿತೆ XVIII ಆದೇಶದಲ್ಲಿ ಕಂಡುಬಂದಿದ್ದು, ಇದು, ಮೊದಲು ಪಕ್ಷಕಾರರ ವಿಚಾರಣೆಯನ್ನು ನಂತರ ಅವರ ಸಾಕ್ಷಿದಾರರ ವಿಚಾರಣೆಯನ್ನು ನಂತರ ಮಾಡಬೇಕೆಂಬುದನ್ನು ಕಡ್ಡಾಯಗೊಳಿಸುತ್ತದೆ. ಕೊಲೆ ಅಪರಾಧದಲ್ಲಿ ಒಳಗೊಂಡಿರುವ ಕ್ರಿಮಿನಲ್ ಪ್ರಕರಣದಲ್ಲಿ, ಪ್ರಾಸಿಕ್ಯೂಷನ್ನು ಶವಪರೀಕ್ಷೆಯನ್ನು ಮಾಡಿದ ವೈದ್ಯರನ್ನು ಮೊದಲು ವಿಚಾರಣೆಮಾಡಲು ಉದ್ದೇಶಿಸಬಹುದು. ಇಂಥ ಪ್ರಕ್ರಿಯೆಯು, ದಂಡ ಪ್ರಕ್ರಿಯಾ ಸಂಹಿತೆಯ ಆದೇಶದ ಸಂಬಂಧದಲ್ಲಿ ಕಂಡುಬರುವುದಿಲ್ಲ. ಇದರಲ್ಲಿ ಸಾಕ್ಷಿದಾರರನ್ನು ವಿಚಾರಣೆಮಾಡುವ ಅಗತ್ಯವಿರುತ್ತದೆ. ಆದುದರಿಂದ, ಭಾರತೀಯ ಸಾಕ್ಷ್ಯ ಅಧಿನಿಯಮದ 135ನೇ ಪ್ರಕರಣವು, 10ನೇ ಅಧ್ಯಾಯದಲ್ಲಿ ಕಂಡುಬಂದಿದ್ದು, ಅದು, ಸಾಕ್ಷಿದಾರರನ್ನು ವಿಚಾರಣೆಮಾಡುವ ಆದೇಶದ ಬಗ್ಗೆ ತಿಳಿಸುತ್ತಿದ್ದು, ಅದನ್ನು ಈ ಮುಂದೆ ಮರುಹಾಜರುಪಡಿಸಲಾಗಿದೆ:

> *135. ಸಾಕ್ಷಿದಾರರನ್ನು ಹಾಜರುಪಡಿಸುವ ಮತ್ತು ವಿಚಾರಣೆ ಮಾಡುವ ಆದೇಶ: ಯಾವ ಆದೇಶದಲ್ಲಿ ಸಾಕ್ಷಿದಾರರನ್ನು ಹಾಜರುಪಡಿಸಲಾಗಿದೆಯೋ ಮತ್ತು ವಿಚಾರಣೆ ಮಾಡಲಾಗಿದೆಯೋ ಆ ಆದೇಶವನ್ನು ಅನುಕ್ರಮವಾಗಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕ್ರಿಯೆಗೆ ಸಂಬಂಧಪಟ್ಟ ತತ್ಕಾಲದಲ್ಲಿರುವ ಕಾನೂನು ಮತ್ತು ಪದ್ಧತಿಯನ್ನು ವಿನಿಯಮನಗೊಳಿಸತಕ್ಕದ್ದು. ಅಂಥ ಯಾವುದೇ ಕಾನೂನು ಇಲ್ಲದಿದ್ದಲ್ಲಿ ನ್ಯಾಯಾಲಯದ ವಿವೇಚನೆ ಮೂಲಕ ವಿನಿಯಮನಗೊಳಿಸತಕ್ಕದ್ದು".*

61. ಸಾಕ್ಷ್ಯ ಅಧಿನಿಯಮದ 135ನೇ ಪ್ರಕರಣವನ್ನು ವಿಶದವಾಗಿ ಓದಿದ ಮೇಲೆ, ಸಾಕ್ಷಿದಾರರ ವಿಚಾರಣಾ ಆದೇಶಕ್ಕೆ ಸಂಬಂಧಪಟ್ಟಂಥ ಯಾವುದೇ ಅಂಥ ಕಾನೂನು ಇಲ್ಲದಿದ್ದಾಗ, ಆದೇಶದ ಸಂಬಂಧದಲ್ಲಿ ನ್ಯಾಯಿಕವಾಗಿ ನ್ಯಾಯಾಲಯವು ವಿವೇಚನೆಯನ್ನು ಚಲಾಯಿಸಬೇಕಾಗಿದ್ದು, ಇದರಲ್ಲಿ, ಸಾಕ್ಷಿದಾರರನ್ನು ವಿಚಾರಣೆಮಾಡುವ

ಅಗತ್ಯತೆ ಇರುವುದಿಲ್ಲ. ಅಂಥ ಆದೇಶವನ್ನು ಹೊರಡಿಸುವಾಗ ಆಪಾದಿತನ ಅಥವಾ ಸಂದರ್ಭಾನುಸಾರ ಸಂತ್ರಸ್ತರ ಪ್ರಕರಣಕ್ಕೆ ಕಾರಣವಾಗಬಹುದಾದ ಪೂರ್ವಾಗ್ರಹಗಳೇನಾದರೂ ಇದ್ದರೆ ನ್ಯಾಯಾಲಯವು ಪ್ರಕರಣದ ಸ್ವರೂಪವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ವೈದ್ಯರುಗಳಿಗೆ, ಸಾಕ್ಷ್ಯವನ್ನು ನೀಡಲು ಸಮನು ಮಾಡಿದಾಗಲೆಲ್ಲ, ಅವರು ಸಂಬಂಧಪಟ್ಟ ಸ್ಥಳಕ್ಕೆ ಹೋಗಬಹುದಾದ ಹಾಗೆ ಮತ್ತು ರೋಗಿಗಳನ್ನು ನೋಡಿಕೊಳ್ಳುವ ಆದ್ಯತೆಯ ಆಧಾರದ ಮೇಲೆ ಅವರನ್ನು ವಿಚಾರಣೆ ಮಾಡಬೇಕಾಗುತ್ತದೆಯೆಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ.

62. ಹೊಸದಾಗಿ ನೇಮಕಗೊಂಡ ಸಿವಿಲ್ ನ್ಯಾಯಾಧೀಶರಿಗಾಗಿ, ಸೂಕ್ತ ತರಬೇತಿ ಪ್ರಮಾಣ ಮಾದರಿಯನ್ನು ಸಿದ್ಧಪಡಿಸಲು ದಿವಂಗತ ಡಾ॥ ನ್ಯಾಯಮೂರ್ತಿ ವಿ.ಎಸ್. ಮಳೀಮಠ್‌ರವರ ಅಧ್ಯಕ್ಷತೆಯಲ್ಲಿ ಈ ನ್ಯಾಯಾಲಯವು ಒಂದು ಸಮಿತಿಯನ್ನು ರಚಿಸಿತ್ತು. ಮಾನ್ಯ ಅಧ್ಯಕ್ಷರಿಗೆ, ಮುನ್ಸಿಫ್/ದಂಡಾಧಿಕಾರಿಯವರ ಪದವೃಂದದಿಂದ ಮೇಲಕ್ಕೇರಿದ್ದ ಇಬ್ಬರು ನಿವೃತ್ತ ನ್ಯಾಯಾಧೀಶರುಗಳು ಸಮರ್ಥವಾಗಿ ನೆರವಾಗಿದ್ದರು. ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣದಲ್ಲಿ, ಯಾವರೀತಿಯಲ್ಲಿ ಸಾಕ್ಷ್ಯವನ್ನು ದಾಖಲು ಮಾಡಬೇಕು ಎಂಬುದಕ್ಕೆ ಸಂಬಂಧಪಟ್ಟಂತೆ ಸಮಿತಿಯು ಸವಿವರವಾದ ವರದಿಯನ್ನು ಸಲ್ಲಿಸಿತ್ತು. ಸಮಿತಿಯು ನೀಡಿದ ಪ್ರಮುಖ ಸುಳಿವುಗಳು ತುಂಬಾ ಪ್ರಾಯೋಗಿಕವಾಗಿದ್ದು ಇದಕ್ಕೆ ಸಂಬಂಧಿಸಿವೆ. ಹೀಗಾಗಿ ಅವುಗಳನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

**ರಹಸ್ಯ ವ್ಯವಹರಣೆಗಳು:**

*29) ಸಿವಿಲ್ ಪ್ರಕರಣಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ XXXII£ೀ ಆದೇಶವು, (1)ನೇ ನಿಯಮದ (2)ನೇ ಉಪನಿಯಮದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ದಾವೆ ಅಥವಾ ವ್ಯವಹರಣೆಗಳನ್ನು, ನ್ಯಾಯಾಲಯವು ಹಾಗೆ ಬಯಸಿದರೆ ರಹಸ್ಯವಾಗಿ ನಡೆಸತಕ್ಕದ್ದು (ಕೌಟುಂಬಿಕ ವಿವಾದಗಳು) ಎಂಬುದನ್ನು ಉಪಬಂಧಿಸುತ್ತದೆ ಮತ್ತು ಎರಡೂ ಪಕ್ಷಕಾರರು ಹಾಗೆ ಬಯಸಿದರೆ*

*ಹಾಗೆ ಮಾಡುವುದು ಹೊಣೆಗಾರಿಕೆಯಾಗಿರುತ್ತದೆ. ನಿರ್ದಿಷ್ಟಪಡಿಸಲಾದ ಪ್ರವರ್ಗದ ಪ್ರಕರಣಗಳ ಸಂಬಂಧದಲ್ಲಿ ರಹಸ್ಯವಾಗಿ ಅಧಿವಿಚಾರಣೆಯನ್ನು ನಡೆಸುವ ಉಪಬಂಧಗಳೇನಾದರೂ ಇದ್ದರೆ, ನ್ಯಾಯಾಲಯವು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನ್ಯಾಯಾಧೀಶರ ಕೊಠಡಿಯಲ್ಲಿ ಅಥವಾ ಬಹಿರಂಗ ನ್ಯಾಯಾಲಯದಲ್ಲಿದ್ದರೆ, ಪಕ್ಷಕಾರರು ಮತ್ತು ಅವರ ವಕೀಲರು ಮತ್ತು ಅವಶ್ಯಕ ನ್ಯಾಯಾಲಯ ಸಿಬ್ಬಂದಿಯನ್ನು ಹೊರತುಪಡಿಸಿ ಹಿಂತೆಗೆದುಕೊಳ್ಳುವ ಎಲ್ಲಾ ವ್ಯಕ್ತಿಗಳಿಗೆ ಸೂಚಿಸುವ ಮೂಲಕ ರಹಸ್ಯವಾಗಿ ವ್ಯವಹರಣೆಗಳನ್ನು ನಡೆಸಬೇಕೆಂದು ಹೇಳಲಾಗಿದೆ. ಉದಾಹರಣೆಗೆ:– ಹಿಂದೂ ವಿವಾಹ ಅಧಿನಿಯಮ, 1955ರ 22ನೇ ಪ್ರಕರಣವು, ಸದರಿ ಅಧಿನಿಯಮದ ಮೇರೆಗಿನ ಪ್ರತಿಯೊಂದು ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸತಕ್ಕದ್ದೆಂಬುದನ್ನು ಉಪಬಂಧಿಸಿದೆ.*

30) ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ದಂಡ ಪ್ರಕ್ರಿಯಾ ಸಂಹಿತೆಯ 327(2)ನೇ ಪ್ರಕರಣದಲ್ಲಿ ವಿಶೇಷ ಉಪಬಂಧವಿದ್ದು, ಭಾರತೀಯ ದಂಡ ಸಂಹಿತೆಯ 376, 376–ಎ, 376–ಬಿ, 376–ಸಿ, 376–ಡಿ ಪ್ರಕರಣಗಳ ಮೇರೆಗೆ ದಂಡನೀಯವಾದ ಲೈಂಗಿಕ ಅಪರಾಧಗಳನ್ನು ರಹಸ್ಯವಾಗಿ ನಡೆಸತಕ್ಕದ್ದು. ಸಾಕ್ಷಿ –ವಿರುದ್ಧ– ಭಾರತ ಒಕ್ಕೂಟ ನಡುವೆ ಎಐಆರ್ 2004 ಎಸ್‌ಸಿ 3566ರಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದ್ದು, ಇದರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

"31. ಸತ್ಯವನ್ನು ಹೊರತೆಗೆಯುತ್ತಿರುವ ನ್ಯಾಯಾಲಯದ ಮುಂದಿನ ಸಂಪೂರ್ಣ ವಿಚಾರಣೆಗೆ, ಯಾವುದೇ ಮುಜುಗರವಿಲ್ಲದ ಮುಕ್ತವಾತಾವರಣದಲ್ಲಿ ಸಂಪೂರ್ಣ ಘಟನೆ ಬಗ್ಗೆ ಹೇಳಿಕೆ ನೀಡಲು

ಸಂತ್ರಸ್ತ ಅಥವಾ ಸಾಕ್ಷಿದಾರರು ಸಮರ್ಥರಾಗುವುದು ಸಂಪೂರ್ಣವಾಗಿ ಅಗತ್ಯವಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 273ನೇ ಪ್ರಕರಣವು, ಆಪಾದಿತನ ಸಮ್ಮುಖದಲ್ಲಿ ಸಾಕ್ಷ್ಯವನ್ನು ಪಡೆದುಕೊಳ್ಳುವುದನ್ನು ಅಗತ್ಯಪಡಿಸುತ್ತದೆ. ಆದಾಗ್ಯೂ, ಆಪಾದಿತನು, ಸಂತ್ರಸ್ತ ಅಥವಾ ಸಾಕ್ಷಿದಾರರ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿರಬೇಕೆಂಬ ರೀತಿಯಲ್ಲಿ ಸಾಕ್ಷ್ಯವನ್ನು ದಾಖಲಿಸಬೇಕು ಎಂದು ಹೇಳಲಾಗುವುದಿಲ್ಲ.

..........................................................................................................."

"32. ಆಪಾದಿತನ ನೋಟವೊಂದೇ, ಸಂತ್ರಸ್ತರ ಅಥವಾ ಸಾಕ್ಷಿದಾರರ ಮನಸ್ಸಿನಲ್ಲಿ ಅತಿಯಾದ ಭಯ ಹುಟ್ಟಿಸಲು ಕಾರಣವಾಗಬಹುದು ಅಥವಾ ಅವರಿಗೆ ಆಘಾತವನ್ನುಂಟುಮಾಡಬಹುದು. ಅಂಥ ಸನ್ನಿವೇಶದಲ್ಲಿ ಅವನು ಅಥವಾ ಅವನಿಗೆ ಘಟನೆಯ ಸಂಪೂರ್ಣ ವಿವರಗಳನ್ನು ನೀಡಲು ಆಗದಿರಬಹುದು, ಇದರ ಪರಿಣಾಮದಿಂದ ನ್ಯಾಯ ವಿಫಲವಾಗಬಹುದು. ಆದುದರಿಂದ, ಸಂತ್ರಸ್ತ ಅಥವಾ ಸಾಕ್ಷಿದಾರರು, ಆಪಾದಿತನ ಶರೀರವನ್ನು ಅಥವಾ ಮುಖದ ಗಾಯವನ್ನು ನೋಡಲು ಬಯಸದಿದ್ದಲ್ಲಿ, ಪರದೆಯನ್ನು ಅಥವಾ ಕೆಲವು ಸಿದ್ಧತೆಗಳನ್ನು ಮಾಡಬಹುದು. ಪಾಟೀ–ಸವಾಲಿನಲ್ಲಿ ಅತ್ಯಾಚಾರಕ್ಕೊಳಗಾದ ಸಂತ್ರಸ್ತ ಮತ್ತು ಮಕ್ಕಳ ದುರುಪಯೋಗದ ಸಂಬಂಧ ಮುಜುಗರಕ್ಕೀಡುಮಾಡಲು ಅಥವಾ ದಿಕ್ಕುತಪ್ಪಿಸಲು ಉದ್ದೇಶಪೂರ್ವಕವಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ರೂಪಿಸಲಾಗಿರುತ್ತದೆ. ನಾಚಿಕೆ ಅಥವಾ ಮುಜುಗರ ಆಗದಂತೆ ತಡೆಯುವುದು ಇದರ ಉದ್ದೇಶವಾಗಿದ್ದು, ಸಂತ್ರಸ್ತರು, ಆಪಾದಿತನು ಎಸಗಿದ ಕೆಲವು ಕೃತ್ಯಗಳ ವಿವರಗಳನ್ನು ಮಾತನಾಡದಿರಬಹುದು ಅಥವಾ ನೀಡದಿರಬಹುದು. ಆದುದರಿಂದ, ಮುಜುಗರವನ್ನುಂಟು ಮಾಡುವ ಭಾಷೆಯಲ್ಲಿ ಸಂತ್ರಸ್ತ ಅಥವಾ ಸಾಕ್ಷಿದಾರರಿಗೆ ಅದನ್ನು

ಕೇಳಬಹುದಾದ ನ್ಯಾಯಾಲಯದ ಪೀಠಾಸೀನ ಅಧಿಕಾರಿಗೆ ಲಿಖಿತದಲ್ಲಿ, ಪಾಟೀ–ಸವಾಲಿನಲ್ಲಿ ಆಪಾದಿತನು ಕೇಳಬೇಕಾದ ಪ್ರಶ್ನೆಗಳನ್ನು ನೀಡಬೇಕಿದ್ದರೆ, ಇದು ಅದಕ್ಕಿಂತ ಉತ್ತಮ. ಅತ್ಯಾಚಾರಕ್ಕೊಳಗಾದ ಮಗು ಅಥವಾ ಸಂತ್ರಸ್ತರಿಗೆ ಸಾಕ್ಷ್ಯನೀಡಲು ಅಗತ್ಯಪಡಿಸಿದಾಗಲೆಲ್ಲ, ಸಾಕಷ್ಟು ಬಿಡುವುಗಳನ್ನು ನೀಡಬೇಕೆಂದು, ಅರ್ಜಿದಾರನು ನೀಡಿದ ಇತರ ಸಲಹೆಗೆ ಯಾವುದೇ ಕಠಿಣತರವಾದ ಆಕ್ಷೇಪಣೆಗಳಿರುತ್ತವೆ. ದಂಡ ಪ್ರಕ್ರಿಯಾ ಸಂಹಿತೆಯ 327ನೇ ಪ್ರಕರಣದ (2)ನೇ ಉಪ–ಪ್ರಕರಣದ ಉಪಬಂಧಗಳನ್ನು, ಭಾರತ ದಂಡ ಸಂಹಿತೆಯ 354 ಮತ್ತು 377ನೇ ಪ್ರಕರಣಗಳ ಮೇರೆಗಿನ ಅಪರಾಧಗಳ ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿಯೂ ಸಹ ಅನ್ವಯಿಸಬೇಕು." ಸರ್ವೋಚ್ಚ ನ್ಯಾಯಾಲಯದ ಈ ಅಭಿಪ್ರಾಯೋಕ್ತಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಮತ್ತು ನ್ಯಾಯಾಧೀಶರು, ಲೈಂಗಿಕ ಅಪರಾಧಗಳಿಗೆ ಸಂಬಂಧಪಟ್ಟ ಪ್ರಕರಣಗಳನ್ನು ವ್ಯವಹರಿಸುವಾಗ ಅಗತ್ಯ ವಿವೇಕವನ್ನು ಪ್ರದರ್ಶಿಸಬೇಕು.

## ದಾಖಲಿತ ಸಾಕ್ಷ್ಯದಲ್ಲಿ ಕೆಲವು ಉಪಯುಕ್ತ ಸುಳಿವುಗಳು

ಸಾಕ್ಷ್ಯವನ್ನು ದಾಖಲಿಸುವಾಗ, ಕಾನೂನು ಪುಸ್ತಕಗಳಲ್ಲಿ ಪರಿಹಾರ / ಮಾರ್ಗದರ್ಶನ ದೊರಕದ ಸಂದರ್ಭದಲ್ಲಿ ನ್ಯಾಯಾಧೀಶರು ಕೆಲವು ಸಂಕೀರ್ಣ ಸನ್ನಿವೇಶಗಳನ್ನು ಎದುರಿಸುತ್ತಾರೆ. ಪರಿಹಾರವನ್ನು ಕಂಡುಕೊಳ್ಳಲು ಸಾಕ್ಷ್ಯ ದಾಖಲಿಸುವ ಪ್ರಕ್ರಿಯೆಯನ್ನು ಮುಂದೂಡಲು ಸಾಧ್ಯವಾಗುವುದಿಲ್ಲ. ಹೀಗಾಗಿ, ನ್ಯಾಯಾಧೀಶರು ಅಂಥ ಸನ್ನಿವೇಶವನ್ನು ಧೈರ್ಯವಾಗಿ ಮತ್ತು ಪರಿಣಾಮಕಾರಿಯಾಗಿ ಎದುರಿಸಲು ಪ್ರತಿಕ್ರಿಯಿಸುವುದಕ್ಕೆ ಸಿದ್ಧವಾಗುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನ್ಯಾಯಾಧೀಶರು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಉಪಯುಕ್ತ ಸುಳಿವುಗಳು ಈ ಮುಂದಿನಂತಿವೆ:–

1) ನ್ಯಾಯವನ್ನು ಮುಕ್ತಾಯಗೊಳಿಸುವುದಕ್ಕೆ ಅಡಚಣೆಯನ್ನುಂಟುಮಾಡುವ ಅಥವಾ ಅಡ್ಡಿಪಡಿಸುವುದನ್ನು ಹೊರತುಪಡಿಸಿದರೆ, ನ್ಯಾಯಾಧೀಶರು, ನೀಡುವ ಎಲ್ಲಾ ಸಾಕ್ಷ್ಯಗಳನ್ನು ಸ್ವೀಕರಿಸಲು ಬದ್ಧರಾಗಿರುವರು. ಮುಖ್ಯ ಸಾಕ್ಷಿದಾರರ ವಿಷಯಗಳನ್ನು ಆಲಿಸಲು ವಿಫಲವಾದರೆ, ಇದು ನಿಷ್ಪಕ್ಷಪಾತ ಅಧಿವಿಚಾರಣೆಯನ್ನು ನಿರಾಕರಿಸಿದಂತಾಗುತ್ತದೆ.

2) ಇತರ ಸಾಕ್ಷಿದಾರರ ಸಾಕ್ಷ್ಯವನ್ನು ನೀಡುವಾಗ, ನ್ಯಾಯಾಲಯ ಕೊಠಡಿಯಿಂದ ಸಾಕ್ಷಿದಾರರನ್ನು ಬಿಟ್ಟುಬಿಡಲು ನಿರ್ದೇಶಿಸುವ ವಿವೇಚನೆಯನ್ನು ಹೊಂದಿರುತ್ತದೆ.

3) ನ್ಯಾಯಾಲಯವು, ತನ್ನ ವ್ಯವಹಾರವನ್ನು ನಿಯಂತ್ರಿಸುವ ಅಥವಾ ನ್ಯಾಯವನ್ನು ಮುಕ್ತಾಯಗೊಳಿಸಲು ಯಾವುದೇ ಆದೇಶವನ್ನು ಮಾಡುವ ಅಂತರ್ನಿಹಿತ ಅಧಿಕಾರವನ್ನು ಹೊಂದಿರುತ್ತದೆ. ಆದುದರಿಂದ ನ್ಯಾಯಾಲಯವು, ಮತ್ತೊಬ್ಬ ಸಾಕ್ಷಿದಾರನ ಹೇಳಿಕೆಯನ್ನು ದಾಖಲಿಸುವಾಗ ಸಾಕ್ಷ್ಯವನ್ನು ನೀಡಬೇಕಾಗಿರುವ ಸಾಕ್ಷಿದಾರನು ಹಾಜರಿರಬೇಕು ಎಂದು ಆದೇಶಿಸಬೇಕು.

4) ನ್ಯಾಯಾಲಯದ ಹೊರಗಡೆ ಎರಡೂ ಕಡೆಯ ಸಾಕ್ಷಿದಾರರನ್ನು ಇರಿಸಿಕೊಳ್ಳುವುದು ಮತ್ತು ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸುವ ಅವಧಿಯಲ್ಲಿ, ಪಕ್ಷಕಾರರನ್ನು ಮಾತ್ರ ಉಳಿಸಿಕೊಳ್ಳುವುದು ನ್ಯಾಯಸಮ್ಮತ ಕ್ರಮವಾಗಿರುತ್ತದೆ.

5) ಪಾಟೀ–ಸವಾಲು ಮಾಡುವವರು, ಗೂಂಡಾ ಪ್ರವೃತ್ತಿಯವರಿಗೆ ಅವಕಾಶ ನೀಡಬಾರದು ಅಥವಾ ಸಾಕ್ಷಿದಾರರ ಅನುಚಿತ ಅನುಕೂಲವನ್ನು ಪಡೆದುಕೊಳ್ಳಬಾರದು.

6) ನ್ಯಾಯಾಲಯವು, ನ್ಯಾಯದ ಹಿತಾಸಕ್ತಿಗಾಗಿ ಯಾವುದೇ ಸಮಯದಲ್ಲಿ ಸಾಕ್ಷಿದಾರನಿಗೆ ಯಾವುದೇ ಪ್ರಶ್ನೆಯನ್ನು ಕೇಳುವ ಅಧಿಕಾರವನ್ನು ಹೊಂದಿರತಕ್ಕದ್ದು.

7) ಸಾಕ್ಷಿದಾರರು ನ್ಯಾಯದಾನಕ್ಕೆ ಸಹಾಯಕವಾಗುವ ತಮ್ಮ ಪವಿತ್ರ ಕರ್ತವ್ಯವನ್ನು ನಿರ್ವಹಿಸಲು ನ್ಯಾಯಾಲಯಕ್ಕೆ ಹಾಜರಾಗುವುದನ್ನು ನೆನಪಿನಲ್ಲಿಡಲೇಬೇಕು. ಆದುದರಿಂದ ಅವರನ್ನು ಗೌರವದಿಂದ ಕಾಣಲು ಆದ್ಯರಾಗಿರುವರು ಮತ್ತು ಅವರು ನ್ಯಾಯಾಲಯ ಸಭಾಂಗಣದಲ್ಲಿ ದೃಢವಿಶ್ವಾಸದಿಂದಿರುವುದನ್ನು ಮತ್ತು ಆರಾಮವಾಗಿ ಇರುವುದನ್ನು ನ್ಯಾಯಾಧೀಶರು ನೋಡಬೇಕು. ಎಐಆರ್ 1981 ಎಸ್‌ಸಿ ಪುಟ 1036 (ರಾಮ್ ಚಂದರ್ –ವಿರುದ್ಧ– ಹರ್ಯಾಣ ರಾಜ್ಯ) ಇದರಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ:–

‘‘ನ್ಯಾಯವನ್ನು ನೀಡುವಲ್ಲಿ ಪರಿಣಾಮಕಾರಿ ಸಾಧನವಾಗಿರುವುದು, ಪೀಠಾಸೀನ ನ್ಯಾಯಾಧೀಶರು, ಬರೀ ಪ್ರೇಕ್ಷಕನಾಗಿರಬಾರದು ಮತ್ತು ಕೇವಲ ಅದನ್ನು ದಾಖಲು ಮಾಡುವ ಯಂತ್ರವಾಗಬಾರದು. ಅವರು ತಮ್ಮ ಅತೀ ಬುದ್ಧಿವಂತಿಕೆಯನ್ನು ತೋರಿಸುವ ಮೂಲಕ ಅಧಿವಿಚಾರಣೆಯಲ್ಲಿ ಪಾಲ್ಗೊಳ್ಳುವಂತಾಗಬೇಕು’’.

8) ಪಕ್ಷಕಾರರ ವಕೀಲರು ತಮ್ಮ ಕಕ್ಷಿದಾರನು ಗೆಲುವನ್ನು ಪಡೆಯಬೇಕೆಂದು ಅಧಿವಿಚಾರಣೆಯನ್ನು ನಡೆಸುವಲ್ಲಿ ಮುಖ್ಯವಾಗಿ ಆಸಕ್ತಿ ತೋರಿಸುವುದನ್ನು ಅರ್ಥಮಾಡಿಕೊಳ್ಳಲಾಗದು. ಆದರೆ ಪೀಠಾಸೀನ ನ್ಯಾಯಾಧೀಶರ ಹೊಣೆಗಾರಿಕೆ, ಎರಡು ಧ್ಯೇಯೋದ್ದೇಶಗಳಾದ, ಸತ್ಯವನ್ನು ಶೋಧಿಸುವಿಕೆ ಮತ್ತು ತ್ವರಿತವಾಗಿ ನ್ಯಾಯಸಮ್ಮತ ನಿರ್ಣಯ ನೀಡುವುದಾಗಿದ್ದು ಅದನ್ನು ಸಾಧಿಸುವ ವ್ಯವಹರಣೆಗಳನ್ನು ನಡೆಸಬೇಕು. ಅಧಿವಿಚಾರಣೆಯ ವಸ್ತುವಿಷಯ ಎಂಥದೇ ಸೂಕ್ಷ್ಮಗ್ರಾಹಿಯಾದರೂ ಕೂಡ, ನ್ಯಾಯಾಲಯ ಕೊಠಡಿಯು,

ಭಾವೋದ್ರೇಕಗೊಳ್ಳುವ, ಭಾವನಾತ್ಮಕವಾದ ಆಟವಾಡುವ ಮತ್ತು ಆವೇಶವನ್ನು ತಂದುಕೊಳ್ಳುವ ಸ್ಥಳವಲ್ಲ.

9) ಕೆಲವೊಮ್ಮೆ ವಕೀಲರು, ಸಾಕ್ಷಿದಾರರನ್ನು ಗೊಂದಲಕ್ಕೀಡುಮಾಡುವ ಸಲುವಾಗಿ ಮತ್ತು ಹೇಗಾದರೂ ಮಾಡಿ ತನಗೆ ಅನುಕೂಲವಾಗುವ ಉತ್ತರಗಳನ್ನು ಪಡೆಯಲು ಸಂಕೀರ್ಣ ಪ್ರಶ್ನೆಗಳನ್ನು ಇಡಬಹುದು. ಸಾಕ್ಷಿದಾರನಿಂದ ಬರುವ ಉತ್ತರ ಕಕ್ಷಿದಾರನಿಗೆ ಅನಾನುಕೂಲವಾಗುವಂತಿದ್ದರೆ, ಅವನು ತನಗೆ ಬೇಕಾದ ಉತ್ತರ ಪಡೆದುಕೊಳ್ಳಲು ಸಾಕ್ಷಿದಾರರಿಗೆ ಗೂಂಡಾಗಿರಿಯನ್ನು ಮಾಡಿಸಬಹುದು. ಅಂಥ ಸನ್ನಿವೇಶದಲ್ಲಿ, ನ್ಯಾಯಾಧೀಶರು ದೃಢನಾಗಿರಬೇಕು ಮತ್ತು ಸಾಕ್ಷಿದಾರರು ನೀಡಿದ ವಾಸ್ತವಿಕ ಉತ್ತರವನ್ನು ದಾಖಲಿಸಬೇಕು.

10) ವ್ಯವಹರಣೆ ಕೋರಿಕೆ ನಿರ್ವಹಣೆಯಲ್ಲಿ, ಎದುರು ಪಕ್ಷಕಾರನು ಪತಿ, ಪತ್ನಿಯ ಸಂಬಂಧವನ್ನು ನಿರಾಕರಿಸಬಹುದು. ವಾದಿ/ಅರ್ಜಿದಾರನ ಪಾಟೀ–ಸವಾಲು ನಡೆಯುವ ಸಮಯದಲ್ಲಿ, ಅವಳು ಯಾವುದೇ ರೀತಿಯಲ್ಲೂ ಕಾನೂನು ಸಮ್ಮತವಾಗಿ ವಿವಾಹವಾದ ಪತ್ನಿಯಲ್ಲವೆನ್ನುವ ಪ್ರಶ್ನೆಯನ್ನು ಇಟ್ಟರೆ, ಅವಳಿಗೆ ಆಘಾತವಾಗಬಹುದು, ಭಾವುಕಳಾಗಬಹುದು ಮತ್ತು ಕುಸಿದುಬೀಳಬಹುದು. ಅಂಥ ಸನ್ನಿವೇಶಗಳಲ್ಲಿ ನ್ಯಾಯಾಲಯವು, ಸಂತೈಸುವ ಪ್ರಯತ್ನಮಾಡಬಹುದು ಮತ್ತು ಅವಳು ಶಾಂತಸ್ಥಿತಿ ತಲುಪಲು ಅವಳನ್ನು ಸಮಾಧಾನಪಡಿಸಬಹುದು ಮತ್ತು ಭರವಸೆಯಿಂದ ಪ್ರಶ್ನೆಗಳಿಗೆ ಉತ್ತರಿಸಲು ನೆರವಾಗಬಹುದು.

11) ಅಸಭ್ಯ ಮತ್ತು ಪ್ರಶ್ನೆಗಳನ್ನು ಅಥವಾ ಲಜ್ಜೆಯನ್ನುಂಟುಮಾಡುವ ಅಥವಾ ಅಪಮಾನಿಸುವ ಉದ್ದೇಶವಿರುವ ಪ್ರಶ್ನೆಗಳನ್ನು ಸಾಕ್ಷಿದಾರರಿಗೆ

ಕೇಳಿದರೆ, ನ್ಯಾಯಾಲಯವು, ಸಾಕ್ಷ್ಯ ಅಧಿನಿಯಮದ 151 ಮತ್ತು 152ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಮಿತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಂಥ ಪ್ರಶ್ನೆಗಳನ್ನು ನಿಷೇಧಿಸುವ ಅಧಿಕಾರವನ್ನು ಚಲಾಯಿಸಬೇಕು, ಅದನ್ನು ಈ ಮುಂದಿನಂತೆ ಓದಲಾಗಿದೆ:–

**151. ಅಸಭ್ಯ ಮತ್ತು ನಿರ್ಲಜ್ಜೆಯ ಪ್ರಶ್ನೆಗಳು**

– ನ್ಯಾಯಾಲಯವು, ಪ್ರಶ್ನೆಗಳು ವಿವಾದದಲ್ಲಿನ ಸಂಗತಿಗೆ ಅಥವಾ ಅಸ್ತಿತ್ವದಲ್ಲಿರುವ ವಿವಾದದಲ್ಲಿನ ಸಂಗತಿಗಳಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ಅವುಗಳನ್ನು ತಿಳಿದುಕೊಳ್ಳಬೇಕಾದ ಅಗತ್ಯ ವಿಷಯಕ್ಕೆ ಸಂಬಂಧಪಟ್ಟಿದ್ದ ಹೊರತು, ನ್ಯಾಯಾಲಯದ ಮುಂದೆ ಅಂಥ ಪ್ರಶ್ನೆಗಳು ಅಥವಾ ವಿಚಾರಣೆಗಳು ಪ್ರಶ್ನೆಗಳ ಹಣೆಪಟ್ಟಿ ಹೊಂದಿದ್ದರೂ ಕೂಡ, ಅಸಭ್ಯವಾಗಿರುವ ಅಥವಾ ನಿರ್ಲಜ್ಜೆಯುಂಟುಮಾಡುವ ಯಾವುದೇ ಪ್ರಶ್ನೆ ಅಥವಾ ವಿಚಾರಣೆಗಳನ್ನು ನಿಷೇಧಿಸಬಹುದು.

**152. ಅವಮಾನಗೊಳಿಸುವ ಅಥವಾ ಮುಜುಗರವುಂಟುಮಾಡುವ ಉದ್ದೇಶವಿರುವ ಪ್ರಶ್ನೆ –**

12. ಸಾಕ್ಷಿದಾರನು ಭಾವುಕನಾದಾಗ ಅಥವಾ ಆಘಾತಕ್ಕೊಳಗಾದಾಗ, ನ್ಯಾಯಾಧೀಶರು, ಅವನು ಶಾಂತಸ್ಥಿತಿ ತಲುಪಲು ಯುಕ್ತವಾಗಿ ಸಾಧ್ಯವಾಗಬಹುದಾದ ಪ್ರತಿಯೊಂದು ಸಹಾಯವನ್ನು ಮಾಡಬೇಕು ಮತ್ತು ಆ ನಂತರವೇ ಸಾಕ್ಷ್ಯವನ್ನು ದಾಖಲಿಸಲು ಮುಂದಾಗಬೇಕು. ಮರಣ, ಅತ್ಯಾಚಾರ ಅಥವಾ ಗಂಭೀರ ಗಾಯಗಳು ಅವರ ಪ್ರೀತಿ–ಪಾತ್ರರಿಗೆ ಆಗಿರುವ ಬಗ್ಗೆ ನೆನಪುಗಳು ಒಟ್ಟಾಗಿ ಎರಗುವ ಅಂಥ ಸನ್ನಿವೇಶಗಳು ಉದ್ಭವಿಸಬಹುದು.

13) ನ್ಯಾಯಾಲಯದಲ್ಲಿ ಬಹಿರಂಗವಾಗಿ ಹೇಳಿಕೆ ಕೊಡುವುದಕ್ಕೆ ಬರುವ ಸಾಕ್ಷಿದಾರರು ಸಭಾಂಗಣ ಇಂಥ ವಾತಾವರಣದಿಂದ ಆಗಾಗ ಭಯಭೀತರಾಗುವರು. ಕೆಲವು ವಕೀಲರು ಸಾಕ್ಷಿದಾರರಿಗೆ ಭಯಹುಟ್ಟಿಸಲು ಸಾಕ್ಷಿದಾರರ ಹತ್ತಿರಕ್ಕೆ ಆ ದಿಕ್ಕಿಗೇ ನಡೆದುಕೊಂಡು ಹೋಗುವರು ಅಥವಾ ಪ್ರಶ್ನೆಯನ್ನು ಜೋರಾಗಿ ಕೇಳುವರು ಅಥವಾ ಮೇಲೆರಗುವ ರೀತಿಯಲ್ಲಿ ಅಥವಾ ಸಾಕ್ಷಿದಾರನು 'ಹೌದು' ಅಥವಾ 'ಇಲ್ಲಾ' ಎಂದಾಗಲಿ ಹೇಳಲೇಬೇಕು. ಆ ರೀತಿಯಲ್ಲಿ ಕೋಪದಿಂದ ವ್ಯಕ್ತಪಡಿಸುವ ಮೂಲಕ ಮತ್ತು ಬೇರೇನನ್ನೂ ಹೇಳಬಾರದು ಆ ರೀತಿಯಲ್ಲಿ ಪ್ರಶ್ನೆ ಕೇಳುವರು ಅಂಥ ಸನ್ನಿವೇಶದಲ್ಲಿ, ಸಾಕ್ಷಿದಾರನಿಗೆ ನೋವಾಗದಂತೆ ಮಾಡಲು ನ್ಯಾಯಾಧೀಶರು ಅಗತ್ಯವೆಂದು ಭಾವಿಸಬಹುದಾದಂತೆ ವಕೀಲರಿಗೆ ಸೂಚನೆಗಳನ್ನು ನೀಡುವ ಮೂಲಕ ಸಾಕ್ಷಿದಾರನು ಅದರಿಂದ ಆಚೆ ಬರುವಂತೆ ಮಾಡುವುದು ನ್ಯಾಯಾಧೀಶರ ಕರ್ತವ್ಯವಾಗಿರತಕ್ಕದ್ದು.

14) ಸಾಕ್ಷಿದಾರರ ಸಾಕ್ಷ್ಯವನ್ನು ಎಪಿಪಿ/ಪಿಪಿ ಸಮ್ಮುಖದಲ್ಲಿ ಉದ್ದಕ್ಕೂ ದಾಖಲಿಸುವುದು ತುಂಬಾ ಅಗತ್ಯವಾಗಿರುವುದರಿಂದ, ನ್ಯಾಯಾಧೀಶರು, ತಮ್ಮ ಸುಸ್ಥಿರ ಹಾಜರಿಯನ್ನು ದೃಢವಾಗಿ ಖಚಿತಪಡಿಸುವಂತೆ ವರ್ತಿಸಬೇಕು. ಅಗತ್ಯವಿದ್ದರೆ, ಯುಕ್ತ ಸುಧಾರಕ ಕ್ರಮವನ್ನು ತೆಗೆದುಕೊಳ್ಳಲು ಪ್ರಾಸಿಕ್ಯೂಷನ್‌ನ ನಿರ್ದೇಶಕರಿಗೆ ವರದಿ ಮಾಡುವ ಮೂಲಕ ಪದೇ ಪದೇ ಆಗುವ ಲೋಪಗಳನ್ನು ಸರಿಪಡಿಸಬೇಕು.

15) ಸಾಕ್ಷಿದಾರಳು, ಹಾಲೂಡಿಸುವ ತಾಯಿಯಾಗಿದ್ದರೆ, ನ್ಯಾಯಾಧೀಶರು, ಆ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಳ್ಳಲೇಬೇಕು ಮತ್ತು ಶಿಶುವಿಗೆ ಹಾಲೂಡಿಸಲು ಹೊರ ಹೋಗಿ ಬರುವ ಸೌಲಭ್ಯವನ್ನು ಸಾಕ್ಷಿದಾರರಿಗೆ ನೀಡಬೇಕು.

ಮಗುವನ್ನು ಆರೈಕೆ ಮಾಡಲು ಆಪಾದಿತನಿಗೂ ಸಮಾನ ಅನುಭೂತಿಯನ್ನು ತೋರಿಸಬೇಕು.

16) ನ್ಯಾಯಾಧೀಶರು, ವೈದ್ಯಕೀಯ ಮತ್ತು ಕಚೇರಿಯ ಹುದ್ದೆಯ ಸಾಕ್ಷಿದಾರರು (ತನಿಖಾಧಿಕಾರಿಯನ್ನು ಹೊರತುಪಡಿಸಿ) ಅನಗತ್ಯ ಸಮಯ ಕಳೆಯುವ ಬಗ್ಗೆ ಗಮನಿಸಬೇಕು ಮತ್ತು ಅಗತ್ಯಬಿದ್ದರೆ, ಇದರ ಬದಲು ಮೊದಲೇ ಅವರ ಸಾಕ್ಷ್ಯವನ್ನು ದಾಖಲಿಸುವ ಕ್ರಮ ಕೈಗೊಳ್ಳಬೇಕು ಮತ್ತು ಅವರ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಲು ಅವರನ್ನು ಬಿಡಬೇಕು. ಪ್ರಕರಣವನ್ನು ಮುಂದೂಡಲು ಅಗತ್ಯಪಡಿಸಿದರೆ, ತುಂಬಾ ಬೇಗನೆ ನಡೆಸತಕ್ಕದ್ದು ಮತ್ತು ಸಾಕ್ಷಿದಾರರನ್ನು ಕಳುಹಿಸತಕ್ಕದ್ದು.

17) ದಸ್ತಾವೇಜುಗಳನ್ನು ಹಾಜರುಪಡಿಸಲಷ್ಟೇ ಸಮನು ಮಾಡಲಾದ ಸಾಕ್ಷಿದಾರರನ್ನು, ಸಂಬಂಧಪಟ್ಟ ವಕೀಲರು ಇಲ್ಲದಿದ್ದರೂ ಕೂಡ ಹಾಗೆ ಮಾಡಲು ಮೊದಲೇ ಅನುಮತಿಸಿ ಅವರನ್ನು ಕಳುಹಿಸಿಕೊಡಬೇಕು.

17) ದಸ್ತಾವೇಜುಗಳನ್ನು ಹಾಜರುಪಡಿಸಲಷ್ಟೇ ಸಮನು ಮಾಡಲಾದ ಸಾಕ್ಷಿದಾರರನ್ನು, ಸಂಬಂಧಪಟ್ಟ ವಕೀಲರು ಇಲ್ಲದಿದ್ದರೂ ಕೂಡ ಮೊದಲೇ ಹಾಗೆ ಮಾಡಲು ಅನುಮತಿಸಿ ಅವರನ್ನು ಕಳುಹಿಸಿಕೊಡಬೇಕು.

18) ಆ ಗಳಿಗೆಯಲ್ಲೆ ಸರ್ಕಾರಿ ನೌಕರ ಸಾಕ್ಷಿದಾರರಿಗೆ ಹಾಜರಾತಿ ಪ್ರಮಾಣಪತ್ರಗಳನ್ನು ನೀಡಲು ನ್ಯಾಯಾಲಯ ಸಿಬ್ಬಂದಿಗೆ ಸೂಚಿಸಿ ಅವರು ಕಳುಹಿಸಿಕೊಡಬೇಕು.

19) ಕ್ರಿಮಿನಲ್ ಪ್ರಕರಣಗಳಲ್ಲಿ ಆ ಗಳಿಗೆಯಲ್ಲೆ ಸಾಕ್ಷಿದಾರರಿಗೆ ಸರಿಯಾದ ಭಾಟಾವನ್ನು ಸಂದಾಯ ಮಾಡುವುದನ್ನು ನ್ಯಾಯಾಲಯ ಖಚಿತಪಡಿಸಬೇಕುಮತ್ತು ಪ್ರಕರಣವನ್ನು ಮುಂದೂಡುವ ಮೂಲಕವಾಗಲಿ ಅಥವಾ ಅವರ ಸಾಕ್ಷ್ಯವನ್ನು ದಾಖಲಿಸುವ ಮೂಲಕವಾಗಲಿ, ಅವರನ್ನು ಕಳುಹಿಸಿಕೊಡಬೇಕು ಮತ್ತು ಸಾಕಷ್ಟು ಹಣ, ಆ ಉದ್ದೇಶಕ್ಕಾಗಿ ಸಾಕಷ್ಟು ಹಣ ಅವರ ಕೈಯ್ಯಲ್ಲಿರಬೇಕು.

20) ಕಷ್ಟದಲ್ಲಿರುವ ಮತ್ತು ಅನಾನುಕೂಲವಿರುವ ಮಹಿಳೆಯರ ವಯಸ್ಸಾದವರ ಮತ್ತು ಅನಾರೋಗ್ಯಕ್ಕೀಡಾದವರ ಸಾಕ್ಷಿದಾರರ ಕುರಿತ ಅಂಶಗಳು ನ್ಯಾಯಾಲಯಕ್ಕೆ ಸಂಬಂಧಪಡುತ್ತವೆ ಮತ್ತು ಅವರನ್ನು ಶೀಘ್ರವಾಗಿ ವಿಚಾರಣೆಮಾಡಲು ಮತ್ತು ಕಳುಹಿಸಿಕೊಡಲು ಪ್ರಯತ್ನಿಸಬೇಕು.

## ಸಾಕ್ಷಿದಾರರ ಚರ್ಯೆಗಳು

ದಂಡ ಪ್ರಕ್ರಿಯಾ ಸಂಹಿತೆಯ 280ನೇ ಪ್ರಕರಣವು ಹೀಗೆ ಉಪಬಂಧಿಸುತ್ತದೆ:

ಪೀಠಾಸೀನ ನ್ಯಾಯಾಧೀಶರನು ಅಥವಾ ಮ್ಯಾಜಿಸ್ಟ್ರೇಟನು, ಒಬ್ಬ ಸಾಕ್ಷಿಯು ಸಾಕ್ಷ್ಯವನ್ನು ಅಭಿಲೇಖಿಸುವಾಗ, ಸಾಕ್ಷಿಯು ವಿಚಾರಣೆಯಾಗುವಾಗ ಅವನ ಚರ್ಯೆಗೆ ಸಂಬಂಧಿಸಿದಂತೆ ತಾನು ಮುಖ್ಯವೆಂದು ಭಾವಿಸುವಂತಹ ವಿಷಯಗಳು ಏನಾದರೂ ಇದ್ದರೆ ಅವುಗಳನ್ನು ಸಹ ಅಭಿಲೇಖಿಸತಕ್ಕದ್ದು.

2) ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸುವಾಗ, ನ್ಯಾಯಾಧೀಶರು, ಸಾಕ್ಷಿದಾರರ ಹಾವಭಾವ ಕುರಿತು ಅವರನ್ನು

ಪರಿವೀಕ್ಷಿಸುವುದು ಏನಾದರೂ ಇದ್ದರೆ, ಅವರ ಭಂಗಿಯನ್ನು ದಾಖಲಿಸುವ ಹಾಗೆ ಯಾವ ರೀತಿಯಲ್ಲಿ ಸಾಕ್ಷಿದಾರನು ಸಾಕ್ಷ್ಯವನ್ನು ನೀಡಿದನು ಎಂಬ ಬಗ್ಗೆ ಲಕ್ಷ್ಯಕೊಟ್ಟು ತೀಕ್ಷ್ಣವಾಗಿ ಪರಿವೀಕ್ಷಿಸಬೇಕು.

3) ಸಾಕ್ಷಿದಾರನ ಹಾವಭಾವವು ಸಾಕ್ಷ್ಯವನ್ನು ನೀಡುವ ಸಮಯಕ್ಕೆ ಸಂಬಂಧಪಟ್ಟಿರುತ್ತದೆ ಅಥವಾ ಬಾಹ್ಯನಡವಳಿಕೆಯಾಗಿರುತ್ತದೆ ಮತ್ತು ಅವನ ಹಾವಭಾವ ಮೂಲಕ ನ್ಯಾಯಾಧೀಶರಲ್ಲಿ ಮೂಡಿಸಿದ ಭಾವನೆಗಿಂತ ಸಂಪೂರ್ಣ ವಿಭಿನ್ನವಾಗಿರುತ್ತದೆ. ಸಾಕ್ಷಿದರನ ಹಾವಭಾವಕ್ಕೆ ಸಂಬಂಧಿಸಿದ ವೀಕ್ಷಣೆಗಳನ್ನು, ಸಾಕ್ಷಿದಾರನ ಹಾವಭಾವಕ್ಕೆ ಸಂಬಂಧಿಸಿದ ವೀಕ್ಷಣೆಗಳನ್ನು, ಸಾಕ್ಷಿದಾರನ ವಿಚಾರಣೆಯ ಅವಧಿಯಲ್ಲಿ ಅಥವಾ ಮುಕ್ತಾಯಗೊಳಿಸುವಾಗ ಟಿಪ್ಪಣಿ ಮಾಡಿಕೊಳ್ಳಬೇಕು. ಚರ್ಯೆಯ ವೀಕ್ಷಣೆಗಳನ್ನು ದಾಖಲಿಸುವ ನ್ಯಾಯಾಧೀಶರು, ಆ ಹಂತದಲ್ಲಿ ಸಾಕ್ಷಿದಾರನ ನಂಬಿಕೆಯ ಬಗ್ಗೆ ಯಾವುದೇ ಪರಿವೀಕ್ಷಣೆಗಳನ್ನು ಮಾಡುವುದನ್ನು ತಪ್ಪಿಸಬೇಕು.

ಈ ಮೊದಲ ಹಂತದಲ್ಲಿ ವರ್ತನೆಯ ಬಗ್ಗೆ ಪರಿವೀಕ್ಷಣೆಗಳನ್ನು ದಾಖಲಿಸುವುದು ಅಪೇಕ್ಷಣೀಯ. ಸಾಕ್ಷಿದಾರನ ಸಾಕ್ಷ್ಯವನ್ನು ನಿರ್ಧರಿಸುವಾಗ ಪರಿಗಣನೆಗೆ ತೆಗೆದುಕೊಳ್ಳಲೇಬೇಕು ಮತ್ತು ನಿರ್ಣಾಯಕವೆಂದು ಭಾವಿಸಲಾಗುವುದಿಲ್ಲ.

ಸಾಕ್ಷ್ಯದಲ್ಲಿ ಪೀಟರ್ ಮರ್ಫಿ ಎರಡನೇ ಭಾರತೀಯ ಮರುಮುದ್ರಣ, 2000, ಪುಟ 532ರ, ಕಂಡಿಕೆ 18, 19 ರಲ್ಲಿ ಪರಿವೀಕ್ಷಿಸಲಾದಂತೆ:–

“ಸಾಕ್ಷಿದಾರನ ನಂಬಿಕೆಯನ್ನು ಪರಿಗಣಿಸಿ ಮತ್ತು ಅವನ ಸಾಕ್ಷ್ಯಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಪರಿಗಣಿಸಿ,

ನ್ಯಾಯಾಲಯವು, ಏನನ್ನು ಹೇಳಿರುವರು ಎಂಬುದನ್ನು ಮಾತ್ರ ಪರಿಗಣಿಸದೆ ಯಾವ ರೀತಿಯಲ್ಲಿ ಹೇಳಿದರು ಎಂಬುದನ್ನು ಪರಿಗಣಿಸಬೇಕು. ಇದು, ನ್ಯಾಯಾಲಯದ ಸಾಕ್ಷಿದಾರನ ವರ್ತನೆಯನ್ನು ಅವನ ಸಾಮಾನ್ಯ ಹಾವಭಾವವನ್ನು, ಅವನ ಸ್ಪಷ್ಟ, ನೇರ ಮಾತನ್ನು ನುಣುಚಿಕೊಳ್ಳುವ ಸ್ವಭಾವವನ್ನು ಅಥವಾ ಪ್ರಶ್ನೆಗೆ ಇತರ ಉತ್ತರ ನೀಡುವುದನ್ನು (ನಿರ್ದಿಷ್ಟವಾಗಿ, ಪಾಟೀ-ಸವಾಲಿನ ಅವಧಿಯಲ್ಲಾಗುವ ಪ್ರತಿಕೂಲ ಪ್ರಶ್ನೆಗಳನ್ನು ಕೇಳುವುದು) ಮತ್ತು ಅವರ ಸುವ್ಯಕ್ತ ಸಾಮರ್ಥ್ಯವನ್ನು ಅಥವಾ ಸ್ಮರಣಶಕ್ತಿಯ ಕೊರತೆಯನ್ನು ಒಳಗೊಳ್ಳುತ್ತದೆ."

4) ನ್ಯಾಯಮೂರ್ತಿ ಯು.ಎಲ್.ಭಟ್‌ರವರು **'Appreciation of Evidence in Criminal Cases'** ಪುಸ್ತಕದಲ್ಲಿ ಈ ಮುಂದಿನಂತೆ ತಿಳಿಸಿದ್ದಾರೆ:–

**"ಸಾಕ್ಷಿದಾರರ ಹಾವಭಾವ/ಚರ್ಯೆ**

ದಂಡ ಪ್ರಕ್ರಿಯಾ ಸಂಹಿತೆಯ 280ನೇ ಪ್ರಕರಣವು, ಸಾಕ್ಷಿದಾರ ಕಟಕಟೆಯಲ್ಲಿ ಸಾಕ್ಷಿದಾರನ ಹಾವಭಾವಕ್ಕೆ ಸಂಬಂಧಿಸಿದ ಅಭಿಪ್ರಾಯಗಳನ್ನು ದಾಖಲಿಸಬೇಕೆಂದು ನ್ಯಾಯಾಲಯಗಳಿಗೆ ಅಧಿಕಾರ ನೀಡುತ್ತದೆ. ಸಾಕ್ಷ್ಯ ನೀಡುವ ರೀತಿಯು ಸಹ ಪ್ರಧಾನವಾಗಿರಬೇಕು, ಉದಾ:– ಪ್ರಶ್ನೆಗೆ ಉತ್ತರ ನೀಡುವಲ್ಲಿ ಅವರ ಚುರುಕುತನ ಮತ್ತು ಮುಕ್ತತೆ, ಎಲ್ಲ ಸನ್ನಿವೇಶಗಳಲ್ಲಿ ಮಾತನಾಡಲು ಸಿದ್ಧರಾಗಿರುವಿಕೆ, ಉತ್ತರಗಳನ್ನು ನೀಡುವಲ್ಲಿ ಹೊಯ್ದಾಟ, ಒಬ್ಬ ಪಕ್ಷಕಾರನಿಗೆ ಸಹಾಯಕ ವಾಗಬಹುದಾಗಿರುವ ನೀಡುವ ಉತ್ತರಗಳಲ್ಲಿರುವ ಅತಿಯಾದ ಉತ್ಸಾಹ, ಮಹತ್ವಪೂರ್ಣವಾದ ಮತ್ತು ಯಥೇಷ್ಟವಾಗಿರುವ ಪ್ರಶ್ನೆಗಳನ್ನು ಕೆಲವು ಚಾಡಿಮಾತುಗಳ

ಆಧಾರದ ಮೇಲೆ ವ್ಯವಹರಿಸುವಾಗ ಹಠಾತ್ತಾಗಿ ಅಪರೂಪವಾಗಿ ಸ್ಮರಣಶಕ್ತಿಯು ಬಾರದಿರುವುದು. ಗೊಂದಲ, ಗಲಿಬಿಲಿಗೊಳ್ಳುವುದು, ಹೊಂಯ್ದಾಟ, ಪ್ರತಿಂಯಾದ ಉತ್ತರ ನೀಡುವಿಕೆಂಯನ್ನು ಸಾಕ್ಷಿದಾರನಲ್ಲಿರುವ ಅಪ್ರಾಮಾಣಿಕತೆಯ ರುಜುವಾತೆಂದು ಭಾವಿಸುವ ಅಗತ್ಯವಿಲ್ಲ; ಅವರು, ಅಂಜಿಕೆಯ ಕಾರಣದಿಂದ ನ್ಯಾಯಲಯದಲ್ಲಿ ಗಾಬರಿಯಾಗಬಹುದು, ಭಯವನ್ನುಂಟುಮಾಡುವ ವಾತಾವರಣದಿಂದ ಸ್ವಾಭಾವಿಕ ಪರಿಣಾಮಬೀರಬಹುದು ಮತ್ತು ಪಾಟೀ–ಸವಾಲಿನಿಂದ ಅಧಿವಿಚಾರಣಾ ನ್ಯಾಯಾಧೀಶರು, ಅವನ ಸಂಪೂರ್ಣ ಸಾಕ್ಷ್ಯಕ್ಕೆ ಪ್ರತಿಯಾಗಿ ಅದನ್ನು ಪರೀಕ್ಷಿಸದೆ ಸಾಕ್ಷಿದಾರನ ಹಾವಭಾವಕ್ಕೆ ಸಂಬಂಧಿಸಿದ ಯಾವುದೇ ಅಭಿವ್ಯಕ್ತಿಯನ್ನು ಸಂಪೂರ್ಣ ಸಿದ್ಧರಾಗಿ ಅಳವಡಿಸಿಕೊಳ್ಳಬಾರದು.''

5) ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XVIIIನೇ ಆದೇಶದಲ್ಲಿ ಸಾಕ್ಷಿದಾರರ ಚರ್ಯೆಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಸದೃಶ ಉಪಬಂಧವಿದ್ದು ಅದನ್ನು ಈ ಮುಂದಿನಂತೆ ಓದಲಾಗಿದೆ:–

''ವಿಚಾರಣೆಯು ನಡೆಯುತ್ತಿರುವಾಗ ಯಾರೇ ಸಾಕ್ಷಿದಾರನ ವರ್ತನೆಗೆ ಸಂಬಂಧಿಸಿದಂತೆ ನ್ಯಾಯಾಲಯವು ತಾನು ಮುಖ್ಯವೆಂದು ಆಲೋಚಿಸುವಂಥ ಅಭಿಪ್ರಾಯವನ್ನು ಅಭಿಲೇಖಿಸಬಹುದು.''

6) ಕ್ರಿಮಿನಲ್ ಪ್ರಕರಣಗಳಲ್ಲಿನ ವರ್ತನೆ ಬಗೆಗಿನ ಈ ಮೊದಲಿನ ಅಭಿಪ್ರಾಯಗಳನ್ನು ಸಿವಿಲ್ ಪ್ರಕರಣಗಳಲ್ಲಿನ ವರ್ತನೆಗೂ ಅನ್ವಯಿಸುವುದು.

63. ಈ ನ್ಯಾಯಾಲಯವು, ನ್ಯಾಯಾಲಯಕ್ಕೆ ಹಾಜರಾಗುವ ಸಾಕ್ಷಿದಾರರಿಗೆ ಪ್ರಯಾಣಭತ್ಯೆಯಾಗಿ (ಪ್ರ.ಭ) ಸಂದಾಯ ಮಾಡಬೇಕಾದ ಸಾಕಷ್ಟು ಮೊತ್ತವನ್ನು

ನೀಡಲು ಪ್ರಧಾನ ಜಿಲ್ಲಾ ನ್ಯಾಯಾಧೀಶರು ಅಥವಾ ಘಟಕದ ಮುಖ್ಯಸ್ಥರು ಉಚ್ಚ ನ್ಯಾಯಾಲಯಕ್ಕೆ ಬರೆಯಬೇಕಾಗುತ್ತದೆಯೆಂದು ಅಭಿಪ್ರಾಯಪಡುತ್ತದೆ. ಪ್ರತಿಯಾಗಿ, ರಿಜಿಸ್ಟ್ರಿಯು ಈ ಸಂಬಂಧದಲ್ಲಿ ಸಾಕಷ್ಟು ಆರ್ಥಿಕ ಹಂಚಿಕೆಮಾಡಲು ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಅನುಮೋದನೆಯನ್ನು ಪಡೆದು ಸರ್ಕಾರದೊಂದಿಗೆ ಈ ವಿಷಯವನ್ನು ಕೈಗೆತ್ತಿಕೊಳ್ಳುವುದು. ವಾಸ್ತವವಾಗಿ, ಪ್ರಯಾಣಭತ್ಯೆ (ಭಾಟ್ಟಾ)ಯನ್ನು ಕರ್ನಾಟಕ (ಕ್ರಿಮಿನಲ್ ನ್ಯಾಯಾಲಯಗಳಿಗೆ ಹಾಜರಾಗುವ ದೂರುದಾರರು ಮತ್ತು ಸಾಕ್ಷಿದಾರರ ವೆಚ್ಚ ಸಂದಾಯ) ನಿಯಮಗಳು, 1967ರ ಉಪಬಂಧಗಳ ಪ್ರಕಾರ ಸಂದಾಯ ಮಾಡಬೇಕಾಗಿದ್ದು, ಇದನ್ನು ಪ್ರಸ್ತುತ ಜೀವನ ವೆಚ್ಚವನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಪ್ರಯಾಣದ ಖರ್ಚು–ವೆಚ್ಚ ಮೊದಲಾದವುಗಳನ್ನು ಪರಿಷ್ಕರಿಸಿ ಇಂದೀಕರಿಸಬೇಕಾಗುತ್ತದೆ. ಕ್ರಿಮಿನಲ್ ನ್ಯಾಯಾಲಯವು, ಅದೇ ದಿನದಂದು ನಿಯಮಗಳ ಪ್ರಕಾರ ಗೊತ್ತುಪಡಿಸಲಾದ ಪ್ರಯಾಣ ಭತ್ಯೆ ಮತ್ತು ತುಟ್ಟಿಭತ್ಯೆಯನ್ನು ಸಾಕ್ಷಿದಾರರಿಗೆ ನೀಡಲಾಗಿದೆಯೆಂದು ಖಚಿತಪಡಿಸಬೇಕು ಮತ್ತು ಪ್ರಾಸಿಕ್ಯೂಷನ್ನು, ಈ ಸಂಬಂಧದಲ್ಲಿ ನ್ಯಾಯಾಲಯಕ್ಕೆ ನೆರವಾಗುವುದನ್ನು ನಿರೀಕ್ಷಿಸುತ್ತದೆ. ಯಾವುದೇ ಕಾರಣಕ್ಕಾಗಿ ಸಾಕಷ್ಟು ಮೊತ್ತವು ನ್ಯಾಯಾಲಯದಲ್ಲಿ ದೊರಕದಿದ್ದರೆ, ಆದಷ್ಟು ಬೇಗನೆ, ಸಂಬಂಧಪಟ್ಟ ಸಾಕ್ಷಿದಾರನಿಗೆ ಹಂಚಿಕೆಯನ್ನು ಮಾಡಿದ ನಂತರ ಕಳುಹಿಸಬೇಕು.

64. ಯಾವುದೇ ಕಾರಣಕ್ಕಾಗಿ, ಪೀಠಾಸೀನ ಅಧಿಕಾರಿ/ ಮತ್ತು ಅಥವಾ ಅಭಿಯೋಜಕರು, ಅಧಿವಿಚಾರಣೆಗೆ ನಿಗದಿಪಡಿಸಿದ ದಿನಾಂಕ(ಗಳ)ಕ್ಕೆ ಸಂಬಂಧಿಸಿದಂತೆ ಅಗತ್ಯಪಡಿಸಿದ ಕಾರಣಗಳಿಗಾಗಿ ರಜೆ ಮೇಲೆ ಮುಂದುವರಿದಿದ್ದರೆ, ಸಾಕ್ಷಿದಾರರು, ಮುಂದಕ್ಕೆ ಹಾಕಿರುವುದರ ಸಂಬಂಧ ಸರಿಯಾದ ಸಮಯಕ್ಕೆ ಮುಂಚಿತವಾಗಿ ತಿಳಿಸಬೇಕು. ಪೊಲೀಸು ಅಧಿಕಾರಿಗಳು, ಅದರಲ್ಲೂ ನಿರ್ದಿಷ್ಟವಾಗಿ, ತನಿಖೆಯನ್ನು ನಡೆಸುವವರಿಗೆ, ಅವರನ್ನು ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಅಗತ್ಯವಾಗಿ ಹಾಜರಾಗಲೇಬೇಕು ಎಂದು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ವರಿಷ್ಟ ಅಧಿಕಾರಿಗಳು, ನೇಮಕ ಮಾಡಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಲು ಸಂಬಂಧಪಟ್ಟ ಅಧಿಕಾರಿಗಳು ಅನುಮತಿಯನ್ನು

ನೀಡುವುದನ್ನು ನೋಡಿಕೊಳ್ಳುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ದಂಡ ಪ್ರಕ್ರಿಯಾ ಸಂಹಿತೆಯ 166ಎ ಪ್ರಕರಣದ ಪ್ರಕಾರ ಅಂಥ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲು ನ್ಯಾಯಾಲಯಕ್ಕೆ ಎಡೆಗೊಡತಕ್ಕದ್ದಲ್ಲ.

65. ದಂಡ ಪ್ರಕ್ರಿಯಾ ಸಂಹಿತೆಯ 166ಎ ಪ್ರಕರಣವನ್ನು ಈ ಕೆಳಗೆ ಮರು ಹಾಜರುಪಡಿಸಲಾಗಿದೆ:

**166ಎ. ಭಾರತದ ಹೊರಗಿನ ದೇಶ ಅಥವಾ ಸ್ಥಳದಲ್ಲಿ ತನಿಖೆ ನಡೆಸುವ ಅಧಿಕಾರಕ್ಕೆ ಮನವಿ ಪತ್ರ:–**

(1) ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಅಪರಾಧವನ್ನು ತನಿಖೆ ಮಾಡುತ್ತಿರುವ ಸಂದರ್ಭದಲ್ಲಿ, ಯಾವುದೇ ತನಿಖಾಧಿಕಾರಿ ಅಥವಾ ತನಿಖಾಧಿಕಾರಿಗಿಂತ ದರ್ಜೆಯಲ್ಲಿ ಕಡಿಮೆಯಿರದ ಯಾರೇ ಅಧಿಕಾರಿಯು ಆ ಸಾಕ್ಷ್ಯವು ಭಾರತದ ಹೊರಗಿನ ದೇಶ ಅಥವ ಸ್ಥಳದಲ್ಲಿ ಲಭ್ಯವಾಗಬಹುದೆಂದು ಅರ್ಜಿಯನ್ನು ಸಲ್ಲಿಸಿದರೆ, ಯಾವುದೇ ಕ್ರಿಮಿನಲ್ ನ್ಯಾಯಾಲಯವು, ಆ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶವನ್ನು ಚೆನ್ನಾಗಿ ಬಲ್ಲವನೆಂದು ಊಹಿಸುವ ಯಾರೇ ವ್ಯಕ್ತಿಯನ್ನು ಮೌಖಿಕವಾಗಿ ವಿಚಾರಣೆ ಮಾಡಲು ಅಂಥ ಮನವಿಯೊಂದಿಗೆ ವ್ಯವಹರಿಸಲು, ಆ ಸಕ್ಷಮ ದೇಶ ಅಥವಾ ಸ್ಥಳದಲ್ಲಿನ ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಅಂಥ ವಿಚಾರಣೆಯನ್ನು ನಡೆಸುವ ಅವಧಿಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಲು ಮತ್ತು ಅಂಥ ವ್ಯಕ್ತಿ ಅಥವಾ ಯಾರೇ ಇತರ ವ್ಯಕ್ತಿಯನ್ನು ಅಗತ್ಯಪಡಿಸಲು, ಅವನ ವಶದಲ್ಲಿರಬಹುದಾದ ಯಾವುದೇ ದಸ್ತಾವೇಜನ್ನು ಅಥವಾ ಅಂಥ ಮನವಿ ಪತ್ರವನ್ನು ಹೊರಡಿಸುವ ನ್ಯಾಯಾಲಯಕ್ಕೆ ಅದರ ಅಧಿಕೃತ ಪ್ರತಿಗಳನ್ನು ಅಥವಾ ಹಾಗೆ ಸಂಗ್ರಹಿಸಲಾದ ವಸ್ತುವನ್ನು ಹಾಜರುಪಡಿಸಲು ಮನವಿ ಪತ್ರವನ್ನು ಹೊರಡಿಸಬಹುದು.

(2) ಮನವಿ ಪತ್ರವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಕಳುಹಿಸತಕ್ಕದ್ದು.

(3) ದಾಖಲಿಸಲಾದ ಪ್ರತಿಯೊಂದು ಹೇಳಿಕೆ ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಲಾದ ದಸ್ತಾವಾವೇಜನ್ನು ಈ ಅಧ್ಯಾಯದ ಮೇರೆಗೆ ತನಿಖೆಯನ್ನು ನಡೆಸುವ ಅವಧಿಯಲ್ಲಿ ಸಂಗ್ರಹಿಸಲಾದ ಸಾಕ್ಷ್ಯವಾಗಿದೆಯೆಂದು ಭಾವಿಸತಕ್ಕದ್ದು.

66. ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಾದ ಶ್ರೀ ಸದಾಶಿವಮೂರ್ತಿಯವರು, ನ್ಯಾಯಾಲಯಕ್ಕೆ ನೆರವಾಗುವಾಗ, ತನಿಖಾಧಿಕಾರಿಯು, ಪ್ರಕರಣವನ್ನು ಮುಂದಕ್ಕೆ ಹಾಕಿದ ಸಂದರ್ಭದಲ್ಲಿ, ಕೂಡಲೇ ಅವರಿಗೆ ಸಂದೇಶವನ್ನು ಮುಟ್ಟಿಸುವ ಹಾಗೆ ಅವರ ದಾಖಲೆಯಲ್ಲಿ ಸಾಕ್ಷಿದಾರರ ಮೊಬೈಲ್ ಸಂಖ್ಯೆ ಅಥವಾ ಇ-ಮೇಲ್ ವಿಳಾಸದಂಥ ಸಂಪರ್ಕ ವಿವರಗಳನ್ನು ಸಂಗ್ರಹಿಸಿದರೆ, ಅವರ ವಿಚಾರಣೆಯ ಮುಂದಿನ ದಿನಾಂಕವನ್ನು ತಿಳಿಸುವುದು ಉತ್ತಮವೆಂದು ನಿವೇದಿಸಿದ್ದಾರೆ. ಸಾಕ್ಷಿದಾರರಿಗೆ ಅನಾನುಕೂಲವಾಗುವುದನ್ನು ತಪ್ಪಿಸುವುದು ಮತ್ತು ಮುಂದಿನ ಗೊತ್ತುಪಡಿಸಿದ ದಿನದಂದು ನ್ಯಾಯಾಲಯಕ್ಕೆ ಅವರೇ ಬರಲು ತಯಾರಿ ನಡೆಸುವುದು ತುಂಬಾ ಒಳ್ಳೆಯದು.

67. ಸಾಕ್ಷಿದಾರನ ಚರ್ಯೆಯನ್ನು ದಾಖಲಿಸಿರುವ ನ್ಯಾಯಾಧೀಶರು ಸಾಕ್ಷ್ಯವನ್ನು ತುಂಬಾ ಪರಿಣಾಮಕಾರಿಯಾಗಿ ಮೌಲ್ಯಮಾಪನ ಮಾಡಬಹುದಾಗಿರುವುದರಿಂದ ಸಾಕ್ಷ್ಯವನ್ನು ದಾಖಲಿಸಿರುವ ನ್ಯಾಯಾಧೀಶರು ಬರೆದ ತೀರ್ಪು, ತುಂಬಾ ಮಹತ್ವಪೂರ್ಣವಾದುದಾಗಿದೆ. ಆಯಾಯ ದಿನವನ್ನು ಆಧರಿಸಿ ಅಧಿವಿಚಾರಣೆಯನ್ನು ದಾಖಲಿಸುವುದು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಆಪಾದಿತನನ್ನು ವಿಚಾರಣೆ ಮಾಡಲು, ಪ್ರಾಸಿಕ್ಯೂಷನ್ ವಾದದಲ್ಲಿ ಕಂಡುಬಂದ ಅಪರಾಧದಲ್ಲಿ ಸಿಲುಕಿಸಲಾದ ಸನ್ನಿವೇಶಗಳನ್ನು ಕೆದಕುವ ಮೂಲಕ ಮತ್ತು

ತುಂಬಾ ಬೇಗನೆ ತೀರ್ಪನ್ನು ಬರೆಯಲು ಮತ್ತು ಘೋಷಿಸಲು ಕೂಡ ನ್ಯಾಯಾಧೀಶರಿಗೆ ಸಹಾಯಕವಾಗುತ್ತದೆ.

68. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈಗಾಗಲೇ ಸೂಚಿಸಿರುವಂತೆ, ಕರ್ನಾಟಕ ನ್ಯಾಯಿಕ ಅಕಾಡೆಮಿಯು, ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಆಜ್ಞಾಪನೆಯ ಪ್ರಕಾರ ಕ್ರಿಮಿನಲ್ ಅಧಿವಿಚಾರಣೆಗಳನ್ನು ನಡೆಸುವ ಎಲ್ಲಾ ನ್ಯಾಯಿಕ ಅಧಿಕಾರಿಗಳು ಪರಿಣಾಮಕಾರಿಯಾಗಿ ಕ್ಷಿಪ್ರ ಪ್ರತಿಕ್ರಿಯೆ ತೋರಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು. ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದೊಂದಿಗೆ ವ್ಯವಹರಿಸಲಾದ ಪ್ರಮುಖ ನಿರ್ಣಯಗಳು ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡುವುದು.

69. ಘಟಕದಲ್ಲಿ ಕಾರ್ಯನಿರ್ವಹಿಸುವ ನ್ಯಾಯಿಕ ಅಧಿಕಾರಿಗಳ ಪ್ರಧಾನ ಜಿಲ್ಲಾ ನ್ಯಾಯಾಧೀಶರುಗಳ ಸಮಾವೇಶ/ಪುನರ್‌ಪರಿಶೀಲನಾ ಸಭೆಯು, ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಆಜ್ಞಾಪನೆಯನ್ನು ಅನುಸರಿಸುವುದರ ಮಹತ್ವವನ್ನು, ***ವಿನೋದ್ ಕುಮಾರ್ –ವಿರುದ್ಧ– ಪಂಜಾಬ್ ರಾಜ್ಯ (ಮೇಲಿನ)*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಹಿನ್ನೆಲೆಯಲ್ಲಿ, ಒತ್ತುನೀಡುವುದು ಸಾಧ್ಯವಾದರೆ, ಘಟಕದಲ್ಲಿರುವ ಮಾನ್ಯ ಜೆಎಂಎಫ್‌ಸಿಯವರು ಸೂಚಿಸಲಾದ ಇಬ್ಬರು ಹಿತಾಸಕ್ತಿದಾರರ 'ಅಧಿವಿಚಾರಣಾ ಪೂರ್ವ ಸುನಾವಣೆ'ಯನ್ನು ನಡೆಸಿದ ನಂತರ ನಡೆಯುವ ಅಧಿವಿಚಾರಣೆಯನ್ನು ಪರಿಣಾಮಕಾರಿಯಾಗಿ ನಡೆಸುವರೇ ಎಂಬುದನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶರು ಮೇಲ್ವಿಚಾರಣೆ ಮಾಡುವುದು.

70. ಈ ತೀರ್ಪಿನ ಪ್ರತಿಯನ್ನು, ರಾಜ್ಯದಲ್ಲಿರುವ ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ, ಕರ್ನಾಟಕ ನ್ಯಾಯಿಕ ಅಕಾಡೆಮಿಗೆ ಮತ್ತು ನಿರ್ದೇಶಕರು, ಪ್ರಾಸಿಕ್ಯೂಷನ್ ಇಲಾಖೆ ಇವರಿಗೆ ಪರಿಚಲಿಸಲು ರಿಜಿಸ್ಟ್ರಿಯು ನಿರ್ದೇಶಿತವಾಗಿದೆ.